TIGHT BINDING BOOK

TEXT PROBLEM WITHIN THE BOOK ONLY

TEXT FLY WITHIN THE BOOK ONLY

UNIVERSAL LIBRARY
OU_198662
UNIVERSAL LIBRARY

ಕರ್ಣಾಟಕಗ್ರಂಥಮಾಲೆ—೧೭೯

# ಏಬ್ರಹಾಮ್ ಲಿಂಕನ್ನಿನ ಚರಿತ್ರೆ

ಸಿ. ಎಸ್. ಕೃಷ್ಣಸ್ವಾಮಿರಾವ್

ಮೈಸೂರು

ಜಿ. ಟಿ. ಎ. ಮುದ್ರಾಲಯ.

೧೯೨೨

ರಿಜಿಸ್ಟರಾಗಿದೆ]

[ಕ್ರಯ ೧೪ ಆಣೆ

# ಪೀಠಿಕೆ.

ಚರಿತ್ರೇತಿಹಾಸಗಳಲ್ಲಿ ಹೆಸರುವಾಸಿಯಾಗಿರುವ ಮಹಾಪುರುಷರ ಉದಾಹರಣೆಗಳು ತರುಣರ ಮನಸ್ಸಿನಲ್ಲಿ ನೆಲೆಗೊಂಡು ಅವರ ನಡೆವಳಿಕೆಗಳನ್ನು ಮಾರ್ಪಡಿಸಿರುವುವೆಂಬುದಕ್ಕೆ ಸಕಲ ದೇಶಗಳಲ್ಲಿಯೂ ಬೇಕಾದಷ್ಟು ನಿದರ್ಶನಗಳು ದೊರೆಯುವುವು. ಆದುದರಿಂದ ಮಹಾಪುರುಷರ ಜೀವನಚರಿತ್ರೆಗಳು ಪ್ರತಿಯೊಂದು ಭಾಷೆಗೂ ಅತ್ಯಾವಶ್ಯಕವೆಂದು ವಿಶೇಷವಾಗಿ ಹೇಳಬೇಕಾಗಿಲ್ಲ.

ಅಮೆರಿಕದ ಸಂಯುಕ್ತಸಂಸ್ಥಾನಗಳ ಒಬ್ಬ ಅಧ್ಯಕ್ಷನಾದ ಜೇಮ್ಸ್ ಏಬ್ರಹಾಮ್ ಗಾರ್‌ಫೀಲ್ಡ್ ಎಂಬ ಮಹನೀಯನ ಚರಿತ್ರೆಯನ್ನು ಈಗ್ಗೆ ನಾಲ್ಕೈದು ವರುಷಗಳಿಗೆ ಹಿಂದೆ ಕರ್ಣಾಟಕಸಾಹಿತ್ಯಪರಿಷತ್ತಿನವರು ಪ್ರಕಟಿಸಿದರು. ಇದು ಸಂಯುಕ್ತಸಂಸ್ಥಾನಗಳ ಮತ್ತೊಬ್ಬ ಅಧ್ಯಕ್ಷನ ಚರಿತ್ರೆಯು. ಪ್ರಪಂಚದ ಮಾನವಸಂಕಷ್ಟಗಳಿಗೆ ಬಹುಮುಖ್ಯಕಾರಣವಾಗಿದ್ದ ಗುಲಾಮರ ವ್ಯಾಪಾರವನ್ನು ಅಡಗಿಸಿದ ಮಹನೀಯರ ಶ್ರೇಣಿಯಲ್ಲಿ ಏಬ್ರಹಾಮ್ ಲಿಂಕನ್ನನು ಅತ್ಯಂತ ಪ್ರಸಿದ್ಧನಾಗಿರುವನು. ಈ ಮಹೋಪಕಾರಕಾರ್ಯವನ್ನು ಸಾಧಿಸಿದ ಈ ಮಹನೀಯನ ಹೆಸರು ಮಾನವಕೋಟಿಯನ್ನು ಪ್ರೀತಿಸುವ ಸಜ್ಜನರಿಗೆಲ್ಲರಿಗೂ ಅತ್ಯಂತಾದರಣೀಯವಾಗಿರುವುದು. ಇದೂ ಅಲ್ಲದೆ ಈ ಮಹನೀಯನ ಚರಿತ್ರೆಯು ಬಡತನದಲ್ಲಿ ತೊಳಲಿ ಬಳಲುತ್ತಿರುವ ವರ್ಧಿಷ್ಣುಗಳಾದ ಅನೇಕ ತರುಣರಿಗೆ ಉತ್ತೇಜಕವಾಗಿಯೂ, ಅಲ್ಪವಾದ ಭಿನ್ನಾಭಿಪ್ರಾಯಗಳನ್ನೇ ಪರ್ವತೋಪಮವಾಗಿ ಎಣಿಸಿ ಕಚ್ಚಾಡುವ ದೂರದೃಷ್ಟಿಯಿಲ್ಲದವರಿಗೆ ಕರ್ತವ್ಯಜ್ಞಾನದಾಯಕವಾಗಿಯೂ ಇರುವುದು. ಆದುದರಿಂದ ಇಂತಹ ಮಹಾತ್ಮನ ಜೀವನಚರಿತ್ರೆಯೊಂದು ನಮ್ಮ ಭಾಷೆಯಲ್ಲಿ ಇರಬೇಕೆಂದು ನಿರ್ಧರಿಸಿ, ಇದನ್ನು ಈಗ ಪ್ರಕಟಿಸಿ ಕನ್ನಡಿಗರ ಸನ್ನಿಧಿಯಲ್ಲಿ ಸಮರ್ಪಿಸಲಾಗಿರುವುದು.

ಇನ್ನೂ ವಿದ್ಯಾರ್ಥಿದಶೆಯಲ್ಲಿರುವ ಈ ಗ್ರಂಥದ ಕರ್ತರು ಅನೇಕ ಇಂಗ್ಲೀಷು ಗ್ರಂಥಗಳ ಆಧಾರದಿಂದ ಇದನ್ನು ರಚಿಸಿ ಈಗ್ಗೆ ನಾಲ್ಕು ತಿಂಗಳ ಹಿಂದೆ ನಮ್ಮ ಬಳಿಗೆ ತಂದು ಇದನ್ನು ಪರಿಷ್ಕರಿಸಿ ಪ್ರಕಟಮಾಡಿಕೊಡಬೇಕೆಂದು ಒಪ್ಪಿಸಿದರು. ಅವರ ಕೋರಿಕೆಯಂತೆ ಗ್ರಂಥವನ್ನು ಕೂಡಿದಮಟ್ಟಿಗೆ ಪರಿಷ್ಕರಿಸಿ ಪ್ರಕಟಿಸಲಾಗಿರುವುದು. ಗ್ರಂಥಕರ್ತರ ಯತ್ನವು ಇದೇ ಮೊದಲನೆಯದಾದುದರಿಂದ ಅಲ್ಲಲ್ಲಿ ಪ್ರಾಜ್ಞರಿಗೆ ಕುಂದುಕೊರತೆಗಳು ಕಂಡುಬರಬಹುದು. ಅವುಗಳನ್ನು ಮುಂದಣ ಮುದ್ರಣದಲ್ಲಿ ಸರಿಪಡಿಸಿಕೊಳ್ಳಲಾಗುವುದು.

ಸಂಪಾದಕ,
ಕ. ಗ್ರಂ. ಮಾಲೆ,

# ವಿಷಯಾನುಕ್ರಮಣಿಕೆ.


| ಪ್ರಕರಣಸಂಖ್ಯೆ | ವಿಷಯ | ಪುಟಸಂಖ್ಯೆ |
| --- | --- | --- |
| ೧ | ಲಿಂಕನ್ನನ ಮನೆತನ; ಲಿಂಕನ್ನಿನ ಜನನವೂ ಬಾಲ್ಯವೂ. ... | ೧ |
| ೨. | ಏಬ್ರಹಾಮನ ವಿದ್ಯಾಭ್ಯಾಸ ; ಮಾತೃವಿಯೋಗ ... | ೬ |
| ೩. | ಬಲತಾಯಿ ; ದಿನಚರ್ಯೆ. ... ... | ೧೧ |
| ೪. | ನ್ಯೂಆರ್ಲಿಯನ್ಸಿಗೆ ಪ್ರಯಾಣ. ... ... | ೧೯ |
| ೫. | ಹಾಕಿನದಂಗೆ ; ಸೈನ್ಯಾಧಿಕಾರಿ. ... ... | ೨೫ |
| ೬. | ಚುನಾವಣೆ. ... ... ... | ೩೧ |
| ೭. | ನ್ಯಾಯವಾದಿತ್ವವು. ... ... ... | ೩೭ |
| ೮. | ಗುಲಾಮರ ವೃತ್ತಾಂತವು. (೧) ... ... | ೪೨ |
| ೯. | ಮೆಕ್ಸಿಕೋಯುದ್ಧ. ... ... ... | ೪೮ |
| ೧೦. | ಗುಲಾಮರ ವೃತ್ತಾಂತವು (೨) ... ... | ೫೪ |
| ೧೧. | ದಾಸ್ಯವಾದಿಗಳಿಗೂ ಅವರ ವಿರೋಧಿಗಳಿಗೂ ನಡೆದ ಹೋರಾಟ | ೬೦ |
| ೧೨. | ಲಿಂಕನ್ನನು ದೇಶಾಧ್ಯಕ್ಷನಾದುದು. ... ... | ೬೭ |
| ೧೩. | ಯುದ್ಧದ ಸೂಚನೆಗಳು. ... ... | ೭೩ |
| ೧೪. | ಕಷ್ಟಕಾಲ. ... ... ... | ೮೧ |
| ೧೫. | ಯುದ್ಧವು. ... ... ... | ೮೬ |
| ೧೬. | ದಾಸ್ಯನಿವೃತ್ತಿಯೂ, ಯುದ್ಧಸಮಾಪ್ತಿಯೂ. ... | ೯೪ |
| ೧೭. | ಘೋರಕೃತ್ಯವು. ... ... ... | ೯೯ |
| ೧೮. | ಪರಿಸಮಾಪ್ತಿ. ... ... ... | ೧೦೪ |

ಶ್ರೀಃ

# ಏಬ್ರಹಾಮ್ ಲಿಂಕನ್ನಿನ ಚರಿತ್ರೆ.

## ಒಂದನೆಯ ಪ್ರಕರಣ.

### ದೇಶಸ್ಥಿತಿ, ಲಿಂಕನ್ ಮನೆತನ, ಏಬ್ರಹಾಮ್ ಲಿಂಕನ್ನಿನ ಜನನವೂ, ಬಾಲ್ಯವೂ.

“ಉದಯಿಕ್ಕುಂ ಪುಳುವಿಂದೆ ಪಟ್ಟೆ; ಶಿಲೆಯಿಂ ಪೊನ್ ; ದೂರ್ವೆ ಕಾಂ ಗೋವ ರೋ |
ಮದೆ ; ಪದ್ಮಂ ಕೆಸಱಿಂ ; ಸುಧಾಂಶು ಕಡಲಿಂದಿಂದೀವರಂ ಗೋಮಯಾ||
ಗ್ರದೆ ; ಮೇಣ್ ಕಾಷ್ಠದಿನಗ್ನಿ ; ಪಾವ ಪೆಡೆಯಿಂದಂ ರನ್ನಮುಂ ; ಗೋವ ಪಿ |
ತ್ತದೆ ಗೋರೋಚನೆ ; ಸದ್ಗುಣರ್ ಸ್ವಗುಣದಿಂ ಸಂಶೋಭಿಕುಂ ; ಪುಟ್ಟಿನೇಂ ? ”

(ಕರ್ಣಾಟಕಪಂಚತಂತ್ರಂ)

೧. ಈಗ್ಗೆ ಸುಮಾರು ಎರಡು ಶತಮಾನಗಳಿಗೆ ಪೂರ್ವದಲ್ಲಿ ಅಮೆರಿಕಾ ಖಂಡದ ಸಂಯುಕ್ತ ಸಂಸ್ಥಾನಗಳು ಈಗಿನಂತೆಯೇ ಧನಧಾನ್ಯಾದಿ ಸಂಪದ್ಯುಕ್ತವಾಗಿಯೂ, ಸುಂದರವಾದ ಅನೇಕ ಪಟ್ಟಣಗಳನ್ನೊಳಕೊಂಡೂ, ಅನೇಕ ವಿದ್ವಜ್ಜನರಿಗೆ ಆಶ್ರಯಸ್ಥಾನವಾಗಿಯೂ, ನಾಗರಕತೆಗೆ ಇದೇ ತವರು ಮನೆಯೋ ಎಂಬ ಭ್ರಾಂತಿಯನ್ನು ಹುಟ್ಟಿಸುವಂತೆಯೂ ಇರಲಿಲ್ಲ. ಅಷ್ಟೇಕೆ? ಆ ಕಾಲದಲ್ಲಿ ಈ ಏಳಿಗೆಯ ಸೂಚನೆಯೊಂದಾದರೂ ತೋರುತ್ತಲೇ ಇರಲಿಲ್ಲ. ಈಗ ಎಲ್ಲಾ ದೇಶಗಳಿಗೂ ಆದರ್ಶಪ್ರಾಯವಾಗಿರುವ ಈ ನಾಡಿಗೆ, ಆ ಕಾಲದಲ್ಲಿ ಇತರದೇಶಗಳ ನಾಗರಕತೆಯನ್ನು ತಿಳಿದುಕೊಳ್ಳುವಷ್ಟು ಕೂಡ ಶಕ್ತಿಯಿರಲಿಲ್ಲ. ಆಗ ಎಲ್ಲೆಲ್ಲಿ ನೋಡಿದರೂ ಮಹಾರಣ್ಯಗಳು ಬೆಳೆದುಕೊಂಡು ಅನೇಕ ದುಷ್ಟಮೃಗಗಳಿಗೂ, ಕೆಂಪು ಇಂಡಿಯನರೆಂಬ (Red Indians) ಒಂದು ಬಗೆಯ ಕಾಡುಜನರಿಗೂ ನಿವಾಸಸ್ಥಾನವಾಗಿ ಸಾಮಾನ್ಯಜನರಿಗೆ ಬಹು ಭೀಕರವಾಗಿದ್ದಿತು. ಈ ಅನಾಗರಕರಾದ ಇಂಡಿಯನರು ಆಗಾಗ ಮೈದಾನಪ್ರದೇಶಗಳಿಗೆ ನುಗ್ಗಿಬಂದು ಅಲ್ಲಿಯ ನಿವಾಸಿಗಳನ್ನು ನಾನಾಬಗೆಯಾಗಿ ಹಿಂಸಿಸುತ್ತಿದ್ದರು.

೨. ತಮ್ಮ ದೇಶಗಳಲ್ಲಿ ಜನಸಂಖ್ಯೆ ಹೆಚ್ಚಿ ಜೀವನವು ನಡೆಯುವುದು ಕಷ್ಟವಾಗುತ್ತಾ ಬರಲು, ಐರೋಪ್ಯರು ಇತರ ಖಂಡಗಳಲ್ಲಿ ನೆಲೆಸುತ್ತ ಬಂದಂತೆಯೇ, ಆಗಾಗ ಅಮೆರಿಕಾ ಖಂಡದಲ್ಲಿಯೂ ಬಂದು ನೆಲೆಸುತ್ತಾ, ಸಣ್ಣಪುಟ್ಟ ರಾಜ್ಯಗಳನ್ನು ಕಟ್ಟಲಾರಂಭಿಸಿದರು. ಆಗ ಅಮೇರಿಕಾದಲ್ಲಿ ಈ ಬಿಳಿಯ ಜನರಿಗೆ ಹದಿಮೂರು ರಾಜ್ಯಗಳು ಸೇರಿದ್ದವು. ಈ ರಾಜ್ಯಗಳೆಲ್ಲವೂ ಪೂರ್ವಸಮುದ್ರತೀರಕ್ಕೂ ಮಿಸಿಸಿಪ್ಪಿನದಿಗೂ ಮಧ್ಯದಲ್ಲಿದ್ದವು. ಆ ನದಿಯ ಪಶ್ಚಿಮಭಾಗವೆಲ್ಲಾ ಕಾಡಾಗಿದ್ದುದರಿಂದ ಕೊಂಚಕಾಲದ ವರೆಗೆ ಬಿಳಿಯ ಜನರಾರೂ ಅಲ್ಲಿಗೆ ಹೋಗುವ ಪ್ರಯತ್ನಮಾಡಲಿಲ್ಲ. ಆದರೆ ಎಷ್ಟು ಕಾಲ ತಾನೆ ಸುಮ್ಮನಿರುವುದಕ್ಕಾದೀತು ? ಕ್ರಮೇಣ ಆ ರಾಜ್ಯಗಳಲ್ಲಿ ಜನಸಂಖ್ಯೆಯು ಹೆಚ್ಚಲು, ಧೈರ್ಯಶಾಲಿಗಳಾದ ಕೆಲವರು ಮಿಸಿಸಿಪ್ಪಿನದಿಯನ್ನು ದಾಟಿ ಆಚೆದಡದ ಮೇಲೆ ಕಾಲಿಟ್ಟರು. ಒಡನೆಯೇ ಕೆಂಪು ಇಂಡಿಯನರಿಗೂ ಇವರಿಗೂ ಕಾದಾಟಕ್ಕೆ ಆರಂಭವಾಯಿತು. ಬಿಳಿಯ ಜನರು ತಮ್ಮ ದೇಶಕ್ಕೆ ಬಂದುದಕ್ಕೇ ಗೊಣಗುಟ್ಟುತ್ತಿದ್ದ ಕೆಂಪುಇಂಡಿಯನರು, ಈಗ ಅವರು ತಮ್ಮ ಮನೆಯಲ್ಲಿಯೇ ಕಾಲಿಡಲು ಯತ್ನಿಸಿದಾಗ ಹೇಗೆ ಸಹಿಸುವರು ? ಪೂರ್ವದಲ್ಲಿ ಪರ ನಿರ್ಬಂಧವೂ ಇಲ್ಲದೆ ತಮಗೆ ತಾವೇ ರಾಜರಾಗಿ ಸ್ವೇಚ್ಛೆಯಿಂದ ವಿಹರಿಸುತ್ತಿದ್ದ ಪ್ರದೇಶಗಳೆಲ್ಲವೂ, ಒಂದೊಂದಾಗಿ ಬಿಳಿಯ ಜನರ ಕೈವಶವಾಗುವುದನ್ನು ನೋಡಿ ಕೋಪದಿಂದ ಕಿಡಿಕಿಡಿಯಾದರು. ಆದರೆ ತಮ್ಮ ಶತ್ರುಗಳೊಡನೆ ಪ್ರತ್ಯಕ್ಷವಾಗಿ ನಿಂತು ಹೋರಾಡುವುದು ಸಾಧ್ಯವೆಂದು ಅವರಿಗೆ ತೋರಲಿಲ್ಲ. ಬಿಳಿಯ ಜನರು ಈ ಕಾಡುಜನರಿಗಿಂತಲೂ ಸಂಖ್ಯೆಯಲ್ಲಿ ಕಡಿಮೆಯಾಗಿದ್ದರೂ ಎಲ್ಲರೂ ಐಕಮತ್ಯದಿಂದಿರುತ್ತಾ ಒಳ್ಳೆಯ ಆಯುಧಗಳನ್ನಿಟ್ಟುಕೊಂಡಿದ್ದುದರಿಂದ, ಇಂಡಿಯನರು ಒಮ್ಮಿಂದೊಮ್ಮೆ ಅವರ ಮೇಲೆ ಬಿದ್ದು ಅವರನ್ನು ತಮ್ಮ ದೇಶದಿಂದಲೇ ಓಡಿಸಲು ಹಿಂದೆಗೆದರು. ಇದಿರಿಗೆ ನಿಂತು ಯುದ್ಧಮಾಡುವುದಕ್ಕಿಂತಲೂ ಗೋಪ್ಯರೀತಿಯಲ್ಲಿ ಅವರಿಗೆ ಇಲ್ಲದ ಕಿರುಕುಳವನ್ನುಂಟುಮಾಡಿ ಅವರು ತಾವಾಗಿಯೇ ತಮ್ಮ ದೇಶವನ್ನು ಬಿಟ್ಟುಹೋಗುವಂತೆ ಮಾಡಬೇಕೆಂದು ಪ್ರಯತ್ನ ಮಾಡುತ್ತ ಬಂದರು. ಬಿಳಿಯ ಜನರಾದರೋ ಬಹಳ ಎಚ್ಚರಿಕೆಯಿಂದಿರುತ್ತಾ ಈ ಅನಾಗರಿಕರ ಕೈಗೆ ಸಿಕ್ಕದಿದ್ದರು. ಆದರೂ ಯಾವಮಾಯದಲ್ಲಿ

ಯೋ ಈ ಕಾಡುಜನರು ಹೊಸಬರ ಊರುಗಳ ಮೇಲೆ ಬಿದ್ದು ಅವರ ಮನೆಮಠಗಳನ್ನು ಕೊಳ್ಳೆಹೊಡೆದು ಸುಟ್ಟು ಹಾಕುತ್ತಲೂ ಹೆಂಗುಸರು ಮಕ್ಕಳನ್ನು ಎತ್ತಿಕೊಂಡು ಹೋಗುತ್ತಲೂ ಇದ್ದರು. ಇಷ್ಟು ಕಷ್ಟಗಳನ್ನು ಅನುಭವಿಸುತಿದ್ದರೂ, ಬಿಳಿಯ ಜನರು ಮಾತ್ರ ಆ ದೇಶವನ್ನು ಬಿಟ್ಟು ಹೋಗುವ ಯೋಚನೆಯನ್ನೇ ಮಾಡದೆ ತಮ್ಮ ಕೈಯಿಂದಾದ ಮಟ್ಟಿಗೆ ತಮ್ಮ ವೈರಿಗಳನ್ನು ದೂರದ ಕಾಡುಪ್ರದೇಶಗಳಿಗೆ ಅಟ್ಟುತ್ತಿದ್ದರು.

೩. ಇಂತಹ ಕಾಲದಲ್ಲಿ ಏಬ್ರಹಾಮ್ ಲಿಂಕನ್ನಿನ ತಾತನು ತನ್ನ ಪೂರ್ವವಾಸಸ್ಥಾನವಾದ ವರ್ಜಿನಿಯ (Verginia) ದೇಶವನ್ನು ಬಿಟ್ಟು ಕೆಂಟಕಿ (Kentucky) ಸೀಮೆಯು ಸಾರವತ್ತಾದುದೆಂದು ಕೇಳಿ ಅಲ್ಲಿಗೆ ವಲಸೆಬಂದು ಬೇಸಾಯದಿಂದ ಜೀವಿಸುತ್ತಿದ್ದನು. ಹೀಗೆ ಕೆಲವು ವರ್ಷಗಳು ಕಳೆಯಲು, ಒಂದುದಿನ ಆತನು ತನ್ನ ಹೊಲದಲ್ಲಿ ಕೆಲಸಮಾಡುತ್ತಿದ್ದಾಗ, ಆ ಸಮಯವನ್ನೇ ಕಾದುಕೊಂಡಿದ್ದ ಕೆಂಪು ಇಂಡಿಯನನೊಬ್ಬನು ಆತನನ್ನು ಕೊಂದು ಹತ್ತಿರದಲ್ಲಿಯೇ ನಿಂತಿದ್ದ ಥಾಮಸ್ ಲಿಂಕನ್ನನ್ನು ಎತ್ತಿಕೊಂಡು ಹೋಗಲು ಯತ್ನಿಸುತ್ತಿದ್ದನು. ಇಷ್ಟರಲ್ಲಿಯೇ ಈ ಸಮಾಚಾರವು ಎಲ್ಲೆಲ್ಲಿಯೂ ಹಬ್ಬಲು, ಅಕ್ಕಪಕ್ಕದಲ್ಲಿದ್ದ ಜನರೆಲ್ಲರೂ ಆಯುಧಗಳನ್ನು ಸಿದ್ಧಮಾಡಿಕೊಂಡು ಓಡಿಬಂದರು. ಇದನ್ನು ಕಂಡೊಡನೆಯೇ ಆ ಕೆಂಪು ಇಂಡಿಯನನು ಎತ್ತಿಕೊಂಡಿದ್ದ ಥಾಮಸನನ್ನು ಕೆಳಗೆ ಎತ್ತಿಹಾಕಿ ಓಡಿಹೋದನು. ಹುಡುಗನಿಗೇನೂ ಪೆಟ್ಟಾಗಿರಲಿಲ್ಲ. ಆ ಜನರೆಲ್ಲರೂ ಅಲ್ಲಿ ಬಿದ್ದಿದ್ದ ವೃದ್ಧನ ಶವವನ್ನು ಸಂಸ್ಕಾರಮಾಡುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ಮಾಡಿದರು. ಹೀಗೆ ಥಾಮಸನಿಗೆ ಚಿಕ್ಕವಯಸ್ಸಿನಲ್ಲಿಯೇ ಪಿತೃವಿಯೋಗದುಃಖವು ಸಂಭವಿಸಿದುದರಿಂದ, ಅಂದಿನಿಂದಲೇ ತನ್ನ ಜೀವನೋಪಾಯವನ್ನು ಆ ಬಾಲನು ಹುಡುಕಿಕೊಳ್ಳಬೇಕಾಯಿತು.

೪. ಥಾಮಸನಿಗೆ ವಿದ್ಯಾಭ್ಯಾಸದ ಗಂಧವೇ ಇರಲಿಲ್ಲ. ಅವನು ಒಂದು ಗಳಿಗೆಯು ಹೊತ್ತಾದರೂ ಒಂದು ಸ್ಥಳದಲ್ಲಿ ನಿಲ್ಲದೆ, ಅನವರತವೂ ಚಂಚಲಮನಸ್ಕನಾಗಿ ಸುತ್ತಾಡುತ್ತಿದ್ದ ಸ್ವಭಾವದವನು. ಅವನು ಸ್ಥಳದಿಂದ ಸ್ಥಳಕ್ಕೆ ಅಲೆಯುವುದರಲ್ಲಿಯೇ ಬಹುಕಾಲವನ್ನು ಕಳೆಯುತ್ತಿದ್ದನು. ಅದೇಕಾಲವನ್ನು ತನ್ನ ಜೀವನೋಪಾಯಕ್ಕೆ ಸಾಧಕವಾದ ಯಾವುದಾದ

ಕೊಂದು ವೃತ್ತಿಯನ್ನು ಕಲಿಯಲು ವಿನಿಯೋಗಿಸಿದ್ದರೆ, ಬಹುಪ್ರಯೋಜನ ವಾಗುತ್ತಿದ್ದಿತು. ಹೀಗೆ ಅಲೆಯುತ್ತಿದ್ದುದರಿಂದ ಅವನಿಗೆ ಕೊಂಚವಮಟ್ಟಿಗೆ ಲೋಕವ್ಯವಹಾರಜ್ಞಾನವುಂಟಾಯಿತಾದರೂ ಯಾವುದಾದರೊಂದು ಉದ್ಯೋಗಕ್ಕೂ ಅತ್ಯವಶ್ಯವಾದ ದೃಢಪ್ರಯತ್ನವೂ ಸಿಕ್ಕಲಚಿತ್ತವೂ ಅವನಲ್ಲಿ ಇರಲಿಲ್ಲ. ಅನೇಕ ಕೈಗಾರಿಕೆಗಳನ್ನು ಕಲಿಯಲು ಅವನಿಗೆ ಸಾಕಾದಷ್ಟು ಅನುಕೂಲ್ಯಗಳು ತಾವಾಗಿಯೇ ಬದಗಿದ್ದರೂ, ಅವುಗಳೆಲ್ಲಾ ವ್ಯರ್ಥವಾದುವು. ಥಾಮಸನಿಗೆ ಬೇಟೆಯಲ್ಲಿ ಬಹುಆಸಕ್ತಿ. ಯಾವುದಾದರೊಂದು ಕೆಲಸ ಮಾಡುತಿದ್ದಾಗ ಬೇಟೆಯ ವಿಷಯವು ಜ್ಞಾಪಕಕ್ಕೆ ಬಂದಿತೆಂದರೆ, ತಾನುಹಿಡಿದಿದ್ದ ಕೆಲಸವನ್ನು ಅಲ್ಲಿಗೇ ನಿಲ್ಲಿಸಿ ತನ್ನ ಬಂದೂಕವನ್ನು ತೆಗೆದುಕೊಂಡು ಕಾಡಿಗೆ ಹೊರಟುಹೋಗುವನು. ಬರಟುವೊರಟಾಗಿ ಬಡಗಿಯ ಕೆಲಸಮಾಡುವುದೊಂದು ಮಾತ್ರ ಅವನಿಗೆ ಬಗುತ್ತಿದ್ದಿತು. ಈ ಕೆಲಸವನ್ನು ಕಲಿಯುವುವಕ್ಕಾಗಿ ಎಲಿಜಬೆತ್ ಪಟ್ಟಣಕ್ಕೆ ಹೋಗಿದ್ದಾಗ ಅವನಿಗೆ ವಿವಾಹವಾಯಿತು.

೫. ಆತನ ಹೆಂಡತಿಯಾದ ನ್ಯಾನ್ಸಿ (Nancy) ಗೆ ತಕ್ಕ ಮಟ್ಟಿಗೆ ಓದುಬರೆಹವು ಬರುತ್ತಿದ್ದಿತು. ಆದುದರಿಂದ ಅವಳು ತನ್ನ ಗಂಡನ ಅಜ್ಞಾನಕ್ಕಾಗಿ ಬಹುವ್ಯಸನಪಟ್ಟು, ತನಗೆ ಬರುವಷ್ಟು ವಿದ್ಯೆಯನ್ನಾದರೂ ಅವನಿಗೆ ಹೇಳಿಕೊಡಬೇಕೆಂದು ಪ್ರಯತ್ನಿಸಿದಳು. ಥಾಮಸನು ಮಾತ್ರ ಅದಕ್ಕೊಪ್ಪದೆ, ತನ್ನ ಹೆಂಡತಿಗೆ ಬಂದು ಬಗೆಯ ಹುಚ್ಚುಹಿಡಿಯಿತೆಂದು ಹಾಸ್ಯಮಾಡಿ ನಗುತ್ತಿದ್ದನು. ಆಕೆಯು ಬಹುಹಠವಾದಿ, ಪತಿಯು ತನಗೆ ಎಷ್ಟು ತೊಂದರೆಕೊಟ್ಟರೂ, ತನ್ನ ಹಠವನ್ನು ಬಿಡದೆ ವಿದ್ಯೆಕಲಿಯುವಂತೆ ಅವನನ್ನು ಬಲಾತ್ಕರಿಸುತ್ತಲೆ ಇದ್ದಳು. ಕೊನೆಗೆ ಥಾಮಸನು ಆಕೆಯ ಇಷ್ಟದಂತೆ ತನ್ನ ಹೆಂಡತಿಯ ಬಳಿಯಲ್ಲಿಯೇ ವಿದ್ಯಾಭ್ಯಾಸಕ್ಕೆ ಆರಂಭಿಸಿದನು.

೬. ಈ ದಂಪತಿಗಳು ಬಹಳ ಬಡವರಾಗಿದ್ದುದರಿಂದ ಬಂದು ಸಣ್ಣ ಗುಡಿಸಿಲಿನಲ್ಲಿ ವಾಸಿಸುತ್ತಿದ್ದರು. ಆ ಗುಡಿಸಿಲಿನಲ್ಲಿದ್ದುದು ಬಂದೇಕೊಟಡಿ ಕಿಟಕಿಗಳೇನೂ ಇರಲಿಲ್ಲ. ಹೊಗೆಯು ಹೊರಕ್ಕೆ ಹೊರಟುಹೋಗಲು ಚಾವಣಿಯಲ್ಲಿ ಬಂದು ಕಿಂಡಿಯಿದ್ದಿತು. ಹೊಗೆಯು ಕೆಲವುವೇಳೆ ಈ

ಹೋಗದೆ ಮನೆಯಲೆಲ್ಲಾ ಹರಡಿಕೊಂಡು ಅವರಿಗೆ ಬಹು ತೊಂದರೆಯನ್ನುಂಟುಮಾಡುತ್ತಲೂ ಇದ್ದಿತು. ಗೋಡೆಯಲ್ಲಿದ್ದ ಸಣ್ಣ ಸಣ್ಣ ಬಿರುಕುಗಳಿಂದ ತಣ್ಣನೆಯ ಗಾಳಿಯು ಒಳಕ್ಕೆನುಗ್ಗಿ, ದಂಪತಿಗಳಿಗೆ ಮತ್ತಷ್ಟು ಕಷ್ಟಗಳನ್ನು ಕೊಡುತ್ತಿದ್ದಿತು. ಹೀಗೆ ಮನೆಯಲ್ಲಿ ಎಷ್ಟು ಹಿಂಸೆಗಳಿದ್ದರೂ, ದಂಪತಿಗಳು ದುಃಖವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಸಂತೋಷಚಿತ್ತರಾಗಿರುತ್ತಿದ್ದರು. ಹೀಗಿರುವಲ್ಲಿ, ಮೊದಲು ಈ ದಂಪತಿಗಳಿಗೆ ಸಾರಳೆಂಬ ಒಬ್ಬ ಮಗಳು ಜನಿಸಿದಳು. ಬಳಿಕ ಜನಿಸಿದ ಮಗುವೇ ನಮ್ಮ ಚರಿತ್ರನಾಯಕನಾದ ಏಬ್ರಹಾಮ್ ಲಿಂಕನ್ನನು. ಇವನು ೧೮೦೯ನೆಯ ಫೆಬ್ರವರಿ ೧೨ನೆಯ ತಾರೀಖಿನ ದಿನ ಹುಟ್ಟಿದನು. ಮನೆಯು ಹೇಗಿದ್ದರೇನು ? ಆ ಮನೆಯ ನಿವಾಸಿಗಳಿಂದ ಅದಕ್ಕೊಂದು ಒಳ್ಳೆಯ ಹೆಸರಾಗಲಿ ಕೆಟ್ಟ ಹೆಸರಾಗಲಿ ಉಂಟಾಗುತ್ತದೆಯಲ್ಲದೆ ಮನೆಯಿಂದೇನೂ ಆಗಲಾರದು.

೭. ಏಬ್ರಹಾಮನು ದಿನದಿನಕ್ಕೂ ವೃದ್ಧಿಯಾಗುತ್ತಿದ್ದನು. ಬಾಲಕನು ನೋಡುವುದಕ್ಕೆ ಸುಂದರನಾಗಿಯೂ, ಅರೋಗದೃಢಕಾಯನಾಗಿಯೂ ಇದ್ದುದಲ್ಲದೆ ತನ್ನ ವಯಸ್ಸಿಗೆ ಮೀರಿದ ಬೆಳವಣಿಗೆಯುಳ್ಳವನಾಗಿದ್ದನು. ಅವನಿಗೆ ಕಥೆಗಳನ್ನು ಹೇಳುವುದೂ ಚೆನ್ನಾಗಿ ಬರುತ್ತಿದ್ದುದರಿಂದ, ಅವನು ಹಿಂದೆ ತನ್ನ ಪೂರ್ವಿಕರಿಗೂ ಕೆಂಪುಇಂಡಿಯನರಿಗೂ ನಡೆದ ಕದನಗಳಿಗೆ ಕೈಕಾಲುಗಳನ್ನು ಹುಟ್ಟಿಸಿ ಪ್ರತಿ ದಿನ ಸಾಯಂಕಾಲವೂ ದೊಡ್ಡದೊಂದು ಕಥೆಯನ್ನು ಹೇಳುತ್ತಾ, ಮಗನಲ್ಲಿ ವೀರರಸವನ್ನು ಹುಟ್ಟಿಸುತ್ತಿದ್ದನು. ಏಬ್ರಹಾಮನಾದರೋ ಆ ಕಥೆಗಳನ್ನೆಲ್ಲಾ ಬಹು ಅಕ್ಕರೆಯಿಂದ ಕೇಳುತ್ತಾ ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಕೆಂಪು ಇಂಡಿಯನರನ್ನು ದ್ವೇಷಿಸಲಾರಂಭಿಸಿದನು.

೮. ಈ ಮಧ್ಯೆ ೧೮೦೩ ರಲ್ಲಿ ಎಂದರೆ ಏಬ್ರಹಾಮನ ಜನನಕ್ಕೆ ಆರುವರುಷಗಳಿಗೆ ಮುಂಚೆ ಆ ಸಂಸ್ಥಾನಗಳ ಮೂರನೆಯ ಅಧ್ಯಕ್ಷನಾದ ಜೆಫರ್‌ಸನ್ನ (Jefferson) ನು ಮಿಸಿಸಿಪ್ಪಿನದಿಗೂ ರಾಕಿಪರ್ವತಗಳಿಗೂ ಮಧ್ಯದಲ್ಲಿದ್ದ ಫ್ರೆಂಚ್‌ಸ್ವಾಸ್ಥ್ಯಗಳನ್ನು ಕೊಂಡುಕೊಂಡು ತಮ್ಮ ಸರ್ಕಾರಕ್ಕೆ ಸೇರಿಸಿಕೊಂಡನು. ಹೀಗೆ ಮಾಡಿದುದು ವ್ಯಾಪಾರಕ್ಕೆ ಬಹು ಅನುಕೂಲವಾಯಿತು. ಆ ಕಾಲದಲ್ಲಿ ರೈಲೂ ಸರಿಯಾದ ರಸ್ತೆಗಳೂ ಇಲ್ಲದಿದ್ದುದರಿಂದ

ಮಿಸಿಸಿಪ್ಪಿನದಿಯೇ ವ್ಯಾಪಾರಕ್ಕೆ ಮುಖ್ಯವಾದ ದಾರಿಯಾಯಿತು. ಒಡನೆಯೇ ಆ ನದಿಯ ದಡದಲ್ಲಿ ಅನೇಕ ಪಟ್ಟಣಗಳು ಅಭಿವೃದ್ಧಿಗೆ ಬಂದುವು. ಕಾಲಕ್ರಮೇಣ ದೇಶವು ಅಭಿವೃದ್ಧಿಯಾಗಿ ಸಂಯುಕ್ತರಾಜ್ಯಗಳಿಗೆ ಸೇರಿತು. ಜನರು ತಂಡತಂಡವಾಗಿ ಅಲ್ಲಿಗೆ ಬಂದು ನೆಲೆಸಲಾರಂಭಿಸಿದರು. ಥಾಮಸನು ಸ್ವಭಾವವಾಗಿಯೇ ಚಂಚಲಮನಸ್ಕನಾಗಿದ್ದುದರಿಂದ, ಬಹುಕಾಲ ಒಂದೇ ಕಡೆಯಲ್ಲಿರುವುದು ಅವನಿಗೆ ರುಚಿಸಲಿಲ್ಲ. ಆದುದರಿಂದ ಏಬ್ರಹಾಮನಿಗೆ ನಾಲ್ಕು ವರುಷವಾಗಿರುವಾಗಲೇ ಅವನು ತನ್ನ ಪೂರ್ವವಾಸಸ್ಥಾನವನ್ನು ಬಿಟ್ಟು, ನಾಬ್ ಕ್ರೀಕ್ (Knobcreek) ಎಂಬ ನದಿಯ ಹತ್ತಿರ ವಾಸಿಸತೊಡಗಿದನು. ಇಲ್ಲಿ ಅವನು ಕಟ್ಟಿಕೊಂಡ ಗುಡಿಸಿಲು ಪೂರ್ವದ ಮನೆಗಿಂತಲೂ ಚೆನ್ನಾಗಿದ್ದಿತು. ಆದರೆ ನ್ಯಾನ್ಸಿಗೆ ಮಾತ್ರ ಹೊಸಸ್ಥಳದಲ್ಲಿ ಸಂಸಾರವನ್ನು ಹೂಡುವುದು ಕಷ್ಟವಾಯಿತು. ಏಬ್ರಹಾಮನು ಕಾಲಕಾಲಕ್ಕೆ ತಿಂಡಿಸಿಕ್ಕಿದರೆ ತೃಪ್ತಿಹೊಂದುತ್ತಿದ್ದನು. ಜೊತೆಯಲ್ಲಿ ಆಟವಾಡಲು ಅವನ ಅಕ್ಕಳಾದ ಸಾರಳು (Sarah) ಇದ್ದುದರಿಂದ ಅವನಿಗೇನೂ ಕಷ್ಟತೋರಲಿಲ್ಲ. ಥಾಮಸನಿಗೆ ಪಕ್ಕದ ಕಾಡಿನಲ್ಲಿ ಬೇಕಾದಷ್ಟು ಬೇಟೆಯೂ ಹೊಳೆಯಲ್ಲಿ ಮೀನೂ ಇದ್ದುದರಿಂದ ಅವನಿಗೂ ವಿಶೇಷ ತೊಂದರೆಯೇನೂ ಉಂಟಾಗಲಿಲ್ಲ.

## ಎರಡನೆಯ ಪ್ರಕರಣ.

### ಏಬ್ರಹಾಮನ ವಿದ್ಯಾಭ್ಯಾಸ ; ನ್ಯಾನ್ಸಿಯ ಮರಣ.

"ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ |
ಚಕ್ರವತ್ ಪರಿವರ್ತನ್ತೇ ದುಃಖಾನಿ ಚ ಸುಖಾನಿ ಚ ||"

೧. ದೇಶಸ್ಥಿತಿಯನ್ನು ಕುರಿತು ಆಗಲೇ ತಿಳಿಸಿರುವುದರಿಂದ, ವಿದ್ಯಾಭ್ಯಾಸಕ್ಕೆ ಎಷ್ಟು ಸೌಕರ್ಯಗಳಿದ್ದುವೆಂಬುದನ್ನು ವಾಚಕರೇ ಊಹಿಸಬಹುದು. ಆಗ ದೇಶದಲ್ಲಿ ಕೆಲವು ಪಾಠಶಾಲೆಗಳು ಮಾತ್ರ ಇದ್ದುವು. ಅವುಗಳಲ್ಲಿಯೂ ಶ್ರೇಷ್ಠರಾದ ಉಪಾಧ್ಯಾಯರಿದ್ದುದು ಇನ್ನೂ ಕಡಿಮೆ. ಆ ಕಾಲದಲ್ಲಿ ಧನವಂತರಿಗಲ್ಲದೆ ಬಡವರಿಗೆಂದಿಗೂ ಸರಸ್ವತಿಯ ಪ್ರಸಾದವು ಲಭಿಸುತ್ತಿರ

ಲಿಲ್ಲ. ಮಕ್ಕಳಿಗೆ ವಿದ್ಯೆಬರಬೇಕೆಂಬ ಆಸೆಯು ಮೊದಲೇ ತಂದೆತಾಯಿಗಳಿಗಿರಲಿಲ್ಲ. ಹೀಗೆಂದಮೇಲೆ, ಹಳ್ಳಿಪಳ್ಳಿಗಳಲ್ಲಿ ವಿದ್ಯಾಗಂಧವೇ ಇರಲಿಲ್ಲವೆನ್ನಬಹುದು. ಸೌದೆಯೊಡೆಯುವುದು, ಗುಡಿಸಿಲನ್ನು ಕಟ್ಟುವುದು, ಬೇಟೆಯಾಡುವುದು—ಇವೇ ಮೊದಲಾದ ಕೆಲವು ಕಷ್ಟಸಾಧ್ಯವಾದ ಕೆಲಸಗಳು ತಮ್ಮ ಗಂಡುಮಕ್ಕಳಿಗೂ, ಅಡಿಗೆ ಮಾಡುವುದು, ಮನೆಯನ್ನು ಶುಚಿಯಾಗಿಟ್ಟುಕೊಳ್ಳುವುದು, ತಕ್ಕಮಟ್ಟಿಗೆ ಹೊಲಿಗೆಕೆಲಸ—ಇವು ತಮ್ಮ ಹೆಣ್ಣುಮಕ್ಕಳಿಗೂ ಬಂದರೆ ತಂದೆ ತಾಯಿಗಳು ಸಾಕೆನ್ನುತ್ತಿದ್ದರು.

೨ ತನ್ನ ಮಕ್ಕಳನ್ನು ಹೇಗಾದರೂ ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕುತೂಹಲವು ನ್ಯಾನ್ಸಿಗೆ ಇದ್ದಿತು. ಆಕೆಯು ಮನೆಯಲ್ಲಿಯೇ ಏಬ್ರಹಾಮನಿಗೂ ಸಾರಳಿಗೂ ಅಕ್ಷರಗಳನ್ನು ತಿದ್ದಿಹಾಕಿ ಕಲಿಸಿದ್ದುದಲ್ಲದೆ ಪ್ರತಿ ಭಾನುವಾರ ಸಾಯಂಕಾಲವೂ ಬೈಬಲನ್ನು ಮಕ್ಕಳಿಗೆ ಓದಿಹೇಳುತ್ತಿದ್ದಳು. ಈಚೆಗೆ ಥಾಮಸನು ವಿದ್ಯಾಭ್ಯಾಸದ ಪ್ರಯೋಜನವನ್ನು ಅರಿತುಕೊಂಡಿದ್ದುದರಿಂದ, ತನ್ನ ಮಕ್ಕಳಿಗೆ ವಿದ್ಯೆಯನ್ನು ಹೇಳಿಸಲು ಅವನೂ ಪ್ರಯತ್ನಮಾಡುತ್ತಿದ್ದನು. ಆದರೆ ಅಕ್ಕಪಕ್ಕದಲ್ಲಿ ಪಾಠಶಾಲೆಗಳಾವುವೂ ಇರಲಿಲ್ಲ. ಆಗಾಗ ಬಡ ಒಬ್ಬ ಉಪಾಧ್ಯಾಯನು ಜೀವನಾರ್ಥವಾಗಿ ಊರಿಂದೂರಿಗೆ ಅಲೆಯುತ್ತಾ ಬಂದೊಂದು ಹಳ್ಳಿಯಲ್ಲಿಯೂ ಕೆಲವು ದಿನಗಳಿದ್ದು ಮುಂದಕ್ಕೆ ಪ್ರಯಾಣಮಾಡುತ್ತಿದ್ದನು.

೩ ಹೀಗಿರುವಲ್ಲಿ ನಾಬ್‌ಕ್ರೀಕಿಗೆ ಉಪಾಧ್ಯಾಯನೊಬ್ಬನು ಬರುವನೆಂಬ ಸಮಾಚಾರವು ನ್ಯಾನ್ಸಿಗೆ ತಿಳಿದ ಕೂಡಲೆ, ಆಕೆಯು ಸಂತೋಷದಿಂದ ಹಿಗ್ಗಿಹೋದಳು. ಆ ಉಪಾಧ್ಯಾಯನು ಬಂದು ತಿಂಗಳಾದರೂ ಆ ಊರಿನಲ್ಲಿ ಇರುವ ಸಂಭವವಿಲ್ಲದಿದ್ದರೂ, ಬಾಲಕರಿಗೆ ಸ್ವಲ್ಪ ಉಪಯೋಗವಾದರೆ ಅಷ್ಟೇಸಾಕೆಂದು ತಿಳಿದು, ನ್ಯಾನ್ಸಿಯು ತನ್ನ ಮಕ್ಕಳನ್ನು ಗುರುವಿನಲ್ಲಿಗೆ ಕಳುಹಿಸಲು ನಿಶ್ಚಯಿಸಿದಳು. ಆಗ ಏಬ್ರಹಾಮನಿಗೆ ಇನ್ನೂ ಐದು ವರುಷ. ಉಪಾಧ್ಯಾಯನು ಯಾವುದೋ ಒಂದು ಮುರುಕುಮನೆಯಲ್ಲಿ ಇಳಿದಿದ್ದನು. ಅದು ಬಂದಾನೊಂದು ಕಾಲದಲ್ಲಿ ಪಾಠಶಾಲೆಯಾಗಿದ್ದಿತಂತೆ. ಆ ಕಟ್ಟಡದಲ್ಲಿ ಉಪಯೋಗಕ್ಕೆ ಬರುವ ಸಾಮಾನು ಯಾವುವೂ ಇರಲಿಲ್ಲ. ಉಪಾಧ್ಯಾಯನಾದರೋ ತನ್ನ ವಿದ್ಯಾರ್ಥಿಗಳಿಗೆ ಓದುವುದನ್ನು ಮಾತ್ರ

ಹೇಳಿಕೊಡಲು ಬಲ್ಲವನಾಗಿದ್ದನು. ಪಾಪ! ಬರೆವಣಿಗೆಯು ಅವನಿಗೇ ಬಾರದು. ಇವನಿಗಿಂತಲೂ ವಿದ್ಯಾವಂತರು ಆ ಸುತ್ತುಮುತ್ತಲಲ್ಲಿ ಯಾರೂ ಇರಲಿಲ್ಲ ವಾದುದರಿಂದ, ಹುಡುಗರೆಲ್ಲರೂ ಅವನ ಬಳಿಗೇ ಬರುತ್ತಿದ್ದರು. ಆ ಪಾಠ ಶಾಲೆಯ ಪುಸ್ತಕಭಂಡಾರದಲ್ಲಿ ಡಿಲ್‌ವರ್ತ್ (Dilworth) ಕವಿಯ ವರ್ಣನೆ ಗಳನ್ನು ಕುರಿತ ಪುಸ್ತಕವೊಂದುಮಾತ್ರವಿದ್ದಿತು. ಏಬ್ರಹಾಮನು ಸಂಪೂರ್ಣ ಫಲಾಪೇಕ್ಷೆಯಿಂದ ಆ ಪುಸ್ತಕವನ್ನೇ ಅಧಿಕವೆಂದು ಭಾವಿಸಿ ಓದುತ್ತಿ ದ್ದನು. ಹೀಗೆ ಬುದ್ಧಿವಂತರು ಆವುದೊಂದನ್ನೂ ಅಲ್ಪವೆಂದು ಅಸಡ್ಡೆಮಾಡ ದೆ ಅದರಿಂದಾಗುವಷ್ಟು ಪ್ರಯೋಜನವನ್ನೇ ಪಡೆಯಲು ಯತ್ನಿಸುವರು.

೪. ಹೀಗೆ ಏಬ್ರಹಾಮನು ಓದುವುದನ್ನು ಕಲಿತನು. ಆ ಪಾಠಶಾಲೆ ಯು ಬಹುದಿನವಿರಲಿಲ್ಲ. ಐದಾರುವಾರಗಳಲ್ಲಿಯೇ ಅದು ಕೊನೆಗಂಡಿತು. ಇದಕ್ಕೆ ಉಪಾಧ್ಯಾಯನ ವಿದ್ಯೆಯು ಮುಗಿದುದೇ ಮುಖ್ಯಕಾರಣವಾಗಿರ ಬಹುದು. ಬಳಿಕ ಎರಡು ತಿಂಗಳು ಕಳೆದುವು. ಇಷ್ಟರಲ್ಲಿಯೇ ಹ್ಯಾಸೆಲ್ (Hazel) ಎಂಬ ಮತ್ತೊಬ್ಬ ಉಪಾಧ್ಯಾಯನು ಬಂದು, ಪಾಠಶಾಲೆಯನ್ನಾ ರಂಭಿಸಿದನು. ಈತನು ಪೂರ್ವದ ಉಪಾಧ್ಯಾಯನಿಗಿಂತಲೂ ಸ್ವಲ್ಪ ಬುದ್ಧಿ ವಂತನು. ಬಾಲಕರಿಗೆ ಅಕ್ಷರಸಂಯೋಜನವನ್ನೂ ಬರೆಯುವುದನ್ನೂ ಹೇಳಿ ಕೊಡಬಲ್ಲವನಾಗಿದ್ದನು. ಈತನಿಟ್ಟಿದ್ದ ಪಾಠಶಾಲೆಯು ಏಬ್ರಹಾಮನ ವಾಸಸ್ಥಾನಕ್ಕೆ ನಾಲ್ಕು ಮೈಲುದೂರದಲ್ಲಿದ್ದಿತು. ಅಕ್ಕ ತಮ್ಮಂದಿರಿಬ್ಬರೂ ವಿದ್ಯಾಕಾಂಕ್ಷಿಗಳಾಗಿ ಆ ದೂರವನ್ನು ಲೆಕ್ಕಿಸದೆ, ಮಧ್ಯಾಹ್ನದ ಆಹಾರಕ್ಕೆ ರೊಟ್ಟಿಯನ್ನು ಕಟ್ಟಿಕೊಂಡು ಅಲ್ಲಿಗೆ ಹೋಗಿ, ಸಾಯಂಕಾಲಕ್ಕೆ ಹಿಂದಿರು ಗಿ ಬರುತ್ತಿದ್ದರು. ಹ್ಯಾಸೆಲನು ಏಬ್ರಾಹಾಮನಿಗೆ ಹೆಚ್ಚು ವಿದ್ಯವನ್ನೇನೂ ಹೇಳಿಕೊಡದಿದ್ದರೂ, ಪ್ರಾರಂಭದಲ್ಲಿಯೇ ಒಳ್ಳೆಯ ತಳಹದಿಯನ್ನು ಹಾಕಿ ದನು. ಸ್ವಲ್ಪಕಾಲದಲ್ಲಿಯೇ ಈ ಉಪಾಧ್ಯಾಯನಿಗೂ ಬೇಸರವಾಗಿ ಮತ್ತೊಂದೂರಿಗೆ ಹೊರಟುಹೋದನು. ಬಾಲಕರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿ ಬಂದು ಆಟಪಾಟಗಳಲ್ಲಿ ಕಾಲವನ್ನು ಕಳೆಯುತ್ತಾ ತಾವು ಕಲಿತಿದ್ದ ಅಲ್ಪಸ್ವಲ್ಪ ವಿದ್ಯೆಯನ್ನೂ ಮರೆತುಕೊಂಡರು. ಏಬ್ರಹಾ ಮನಾದರೋ, ತಾನುಕಲಿತಿದ್ದುದನ್ನೇ ಮನನಮಾಡುತ್ತಾ ಅಧಿಕಜ್ಞಾನಾ ರ್ಜನೆಗೆ ತಕ್ಕ ಸಲಕರಣಗಳನ್ನು ಹುಡುಕುತ್ತಾ ಇದ್ದನು.

೫. ಥಾಮುಸನು ನಾಬ್‌ಕ್ರೀಕಿಗೆ ಬಂದು ಮೂರುವರುಷಗಳಾದುವು. ಇನ್ನು ಹೆಚ್ಚು ಕಾಲ ಅಲ್ಲಿಯೇ ಇರುವುದು ಅವನಿಗೆ ಬೇಸರವಾಗಿ ಈ ಸಲ ಕೆಂಟಕಿ ಸೀಮೆಯನ್ನೇ ಬಿಟ್ಟು, ದೂರದೇಶಕ್ಕೆ ಹೋಗಬೇಕೆಂದು ನಿಶ್ಚಯಿಸಿದನು. ಇದಕ್ಕೆ ತಕ್ಕ ಇತರ ಕಾರಣಗಳೂ ಇದ್ದುವು

೬. ಕೆಂಟಕಿ ಸೀಮೆಯಲ್ಲಿ ಜನಸಾಂದ್ರತೆಯು ಹೆಚ್ಚಿದಂತೆಲ್ಲಾ ಅಲ್ಲಿದ್ದ ಪೂರ್ವನಿವಾಸಿಗಳಿಗೆ ಭೂಮಿಯ ಮೇಲಿನ ಹಕ್ಕು ಸಡಿಲುತ್ತ ಬಂದಿತು. ಹೊಸಬರು, ಹಳಬರ ಹಕ್ಕುಬಾಧ್ಯತೆಗಳನ್ನು ವಿಚಾರಿಸಲಾರಂಭಿಸಿದರು. ಬಿಸಿಲೆಂದೂ ಮಳೆಯೆಂದೂ ನೋಡದೆ ಕಷ್ಟಪಟ್ಟು ಭೂಮಿಯನ್ನು ಹದಕ್ಕೆ ತಂದುಕೊಂಡು ಫಲವನ್ನನುಭವಿಸುವ ವೇಳೆಗೆ ಸರಿಯಾಗಿ, ಅವರಿಗಿಂತಲೂ ಪ್ರಬಲರಾದ ಹೊಸಬರು ಅದನ್ನಾಕ್ರಮಿಸಿಕೊಳ್ಳುತ್ತ ಬಂದರು. ಈ ಬಗೆಯಾದ ಕಷ್ಟಗಳನ್ನನುಭವಿಸಿ ಇತರರೊಡನೆ ಹೋರಾಡುವುದಕ್ಕಿಂತ ಆ ಸ್ಥಳವನ್ನೇ ಬಿಟ್ಟು ಬೇರೆಕಡೆಗೆ ಹೊರಟುಹೋಗುವುದೇ ಉತ್ತಮವೆಂದು ಥಾಮುಸನು ತಿಳಿದನು. ಆದುದರಿಂದ ಅವನು ಓಹಿಯೋ ನದಿಯ ಮೇಲೆ ದೋಣಿಯಲ್ಲಿ ಪ್ರಯಾಣಮಾಡಿಕೊಂಡು ಇಂಡಿಯಾನಾಕ್ಕೆ ಹೋಗಿ ಅಲ್ಲಿ ತಕ್ಕ ಪ್ರದೇಶವೊಂದನ್ನು ನೋಡಿಕೊಂಡು ಬರುವುದಾಗಿ ನಿಶ್ಚಯಿಸಿಕೊಂಡನು.

೭. ಅದರಂತೆಯೇ ಥಾಮುಸನು ಒಂದುದಿನ ತೆಪ್ಪವೊಂದನ್ನು ಕಟ್ಟಿ ಅದರಮೇಲೆ ಕೆಲವು ಆಯುಧಗಳನ್ನೂ, ಸ್ವಲ್ಪ ಆಹಾರಪಾನಪದಾರ್ಥಗಳನ್ನೂ ಇಟ್ಟುಕೊಂಡು ಇಂಡಿಯಾನಾಕ್ಕೆ ಹೊರಟನು. ಕೊಂಚದೂರ ಪ್ರಯಾಣವು ಸುಸೂತ್ರವಾಗಿ ನೆರವೇರಿತು. ಮತ್ತ ಸ್ವಲ್ಪ ಮುಂದೆ ಹೋಗುವುದರೊಳಗಾಗಿ ಇವನ ತೆಪ್ಪವು ನದಿಯ ಸುಳಿಗೆ ಸಿಕ್ಕಿ ಮಗುಚಿಕೊಂಡಿತು. ಆದರೆ ದೇವರದಯದಿಂದ ಥಾಮುಸನು ತನ್ನ ಪ್ರಾಣಗಳನ್ನು ರಕ್ಷಿಸಿಕೊಂಡುದಲ್ಲದೆ, ಪದಾರ್ಥಗಳನ್ನೂ ಉಳಿಸಿಕೊಂಡು, ದಡವನ್ನು ಮುಟ್ಟಿ ಅಲ್ಲಿದ್ದ ಯಾರೋ ಒಬ್ಬನಿಂದ ಉತ್ಕೃಷ್ಟಪ್ರದೇಶವಾವುದೆಂದರಿತು ಅಲ್ಲಿಗೆ ಹೋದನು. ಅಲ್ಲಿ ತನಗೆ ಬೇಕಾದ ಪ್ರದೇಶವೊಂದಿಷ್ಟನ್ನು ನೋಡಿ ಅಲ್ಲಿ ತನ್ನಪರವಾಗಿ ಕಟ್ಟಿಗೆಯೊಂದನ್ನು ಹೂತು ತನ್ನಲ್ಲಿದ್ದ ಹಣಕ್ಕೆ ತಕ್ಕಷ್ಟು ಭೂಮಿಯನ್ನು ಕೊಂಡುಕೊಳ್ಳಲು ಸರ್ಕಾರದ ಕೇಂದ್ರಸ್ಥಾನಕ್ಕೆ

ಹೊರಟನು ಆ ಕಾಲದಲ್ಲಿ ಪ್ರಯಾಣಕ್ಕೆ ತಕ್ಕ ಮಾರ್ಗಗಳು ಇರಲಿಲ್ಲ. ಹಾಗೂ ಹೀಗೂ ಕಷ್ಟಪಟ್ಟು ಕೊನೆಗೆ ವಾಷಿಂಗ್ಟನ್ ಪಟ್ಟಣವನ್ನು ಸೇರಿ ಅಲ್ಲಿ ತನ್ನ ಹಕ್ಕನ್ನು ಭದ್ರಪಡಿಸಿಕೊಂಡು ಬಂದನು

೮. ಊರಿಗೆ ಹಿಂದಿರುಗಿ ಬರುವುದಕ್ಕೆ ಬಹುಕಾಲ ಹಿಡಿಯಿತು. ಮನೆಯಲ್ಲಿ ಹೆಂಡತಿ ಮಕ್ಕಳು ಅವನ ಆಗಮನವನ್ನು ಎಷ್ಟು ಕುತೂಹಲದಿಂದ ನಿರೀಕ್ಷಿಸುತ್ತಿದ್ದರೆಂಬುದನ್ನು ಹೇಳಬೇಕಾಗಿಲ್ಲ ಥಾಮಸನು ಊರಿಗೆ ಬಂದೊಡನೆಯೇ ತನ್ನ ಅಭಿಪ್ರಾಯವನ್ನು ಹೆಂಡತಿಗೆ ಹೇಳಿದಾಗ ಅವಳಿಗೆ ಸ್ವಲ್ಪ ಅಸಮಾಧಾನವಾಯಿತು. ಗುರುತುಕಂಡ ಸ್ಥಳವನ್ನೂ, ಪರಿಚಿತರಾದ ಜನರನ್ನೂ, ಪ್ರಿಯರಾದ ಗೆಳೆಯರನ್ನೂ ಬಿಟ್ಟು ಹೊರಡಬೇಕೆಂದರೆ ಯಾರಿಗೆ ತಾನೇ ಅಸಮಾಧಾನವಾಗದು? ನಾಬ್‌ಕ್ರೀಕಿಗೆ ಬಂದು ಇನ್ನೂ ಮೂರು ವರ್ಷವಾಗಿದ್ದಿತು; ಸಂಸಾರವು ಚೆನ್ನಾಗಿ ತಳವೂರಿಕೊಳ್ಳುವುದಕ್ಕೆ ಆಸ್ಪದವಿರಲಿಲ್ಲ. ಹೀಗಿರುವಾಗಲೇ ಬೇರೇಕಡೆಗೆ ಹೊರಡಬೇಕಾಯಿತು! ಆದರೂ ನ್ಯಾನ್ಸಿಯು ಗಂಡನ ಮಾತಿಗೆ ಪ್ರತಿಯಾಡದೆ ಪ್ರಯಾಣಕ್ಕೆ ಸಜ್ಜುಗೊಳಿಸಿದಳು. ಮಕ್ಕಳಿಗಂತೂ ಹೊಸ ಊರಿಗೆ ಹೋಗುವುದೆಂದರೆ ಬಹು ಸಂತೋಷ! ಗಾಡಿಯು ರಸ್ತೆಯಲ್ಲಿ ೧೦೦ ಮೈಲು ಹೋಗಬೇಕಾಗಿದ್ದಿತು. ಇವರು ದಾರಿಯಲ್ಲಿ ಅನೇಕ ಕಷ್ಟಗಳನ್ನನುಭವಿಸಿ ತಮ್ಮ ಗಮ್ಯಸ್ಥಾನವನ್ನು ಸೇರಿದರು. ಅಲ್ಲಿ, ಯಾವುದಾದರೂ ಒಂದು ಉತ್ತಮವಾದ ಗೃಹವೊಂದಿರಬಹುದೆಂದು ನ್ಯಾನ್ಸಿಯು ತಿಳಿದಿದ್ದಳು. ಆದರೆ ಅಲ್ಲಿ ಹೋಗಿ ನೋಡಲಾಗಿ ನಿಲ್ಲುವುದಕ್ಕೆ ಒಂದು ಚಪ್ಪರವೂ ಇರಲಿಲ್ಲ. ಹಿಮಂತಋತುವಿನ ಮಂಜು ದಟ್ಟವಾಗಿ ಸುರಿಯುತ್ತಿದ್ದಿತು. ಥಾಮಸನು, ಬಹು ಕಷ್ಟಪಟ್ಟು ಸದ್ಯಕ್ಕೆ ಒಂದು ಗುಡಿಸಿಲನ್ನು ಕಟ್ಟಿದನು. ಅದಕ್ಕೆ ಬಾಗಿಲಿರಲಿಲ್ಲ. ಶೀತವಾಯುವು ಕೊಂಚವೂ ತಡೆಬಿಡುವಿಲ್ಲದೆ ಬೀಸುತ್ತ ಗುಡಿಸಿಲೊಳಕ್ಕೆ ನುಗ್ಗಿ ಜನರನ್ನು ನಡುಗಿಸುತ್ತಿದ್ದಿತು. ಚಳಿಯ ಬಾಧೆಯನ್ನು ಪರಿಹರಿಸುವುದಕ್ಕಾಗಿ ಗುಡಿಸಿಲ ಮಧ್ಯದಲ್ಲಿ ಒಂದು ಅಗ್ಗಿಷ್ಟಿಕೆಯಲ್ಲಿ ಬೆಂಕಿ ಉರಿಯುತ್ತಿದ್ದಿತು.

೯. ಚಳಿಗಾಲವು ಕಳೆಯುತ್ತಾ ಬಂದಿತು. ಹಿಮವು ಕ್ರಮಕ್ರಮವಾಗಿ ಕಡಿಮೆಯಾಗುತ್ತಿದ್ದಿತು. ಥಾಮಸನು ಬೇರೊಂದು ಒಳ್ಳೆಯ ಮನೆ

ಯನ್ನು ಕಟ್ಟಲು ಪ್ರಾರಂಭಿಸಿದನು. ಬಾಲನಾದ ಏಬ್ರಹಾಮನು ತನ್ನ ತಂದೆಗೆ ನೆರವಾಗಿ ತನ್ನ ಕೈಯಲ್ಲಾದ ಕೆಲಸಗಳನ್ನು ಮಾಡಿಕೊಡುತ್ತಿದ್ದನು. ಬಾಲ್ಯದಿಂದಲೇ ಏಬ್ರಹಾಮನು ಕೆಲಸಕಾರ್ಯಗಳಲ್ಲಿ ಕೊಂಚವೂ ಪಾಲುಮಾರದಿದ್ದುದರಿಂದ, ಅವನು ತನ್ನ ಜೊತೆಯ ಹುಡುಗರಿಗಿಂತಲೂ ಕಾಯಪುಷ್ಟಿಯುಳ್ಳವನಾಗಿಯೂ, ಎತ್ತರವಾಗಿಯೂ ಇದ್ದನು. ಆಗ ತಂದೆಗೆ ಸಹಾಯಮಾಡಬಲ್ಲಷ್ಟು ಶಕ್ತನಾದೆನಲ್ಲಾ ಎಂದು ಅವನು ಸಂತೋಷಪಡುತ್ತಿದ್ದನು. ಏಬ್ರಹಾಮನ ಸ್ನೇಹಿತರೆಲ್ಲರೂ ಆವನ ಚಟುವಟಿಕೆಯನ್ನು ಕಂಡು ಬಹುವಾಗಿ ಪ್ರೀತಿಸುತ್ತಾ ಪ್ರಾಮಾಣಿಕನಾದ ಏಬ್ ಎಂದು ಕರೆಯುತ್ತಿದ್ದರು.

೧೦. ಮನೆಯ ಕೆಲಸವು ಪೂರ್ತಿಯಾಗುವುದರೊಳಗಾಗಿ ಈ ಸಂಸಾರಕ್ಕೆ ದೊಡ್ಡ ದುಃಖವೊಂದು ಪ್ರಾಪ್ತವಾಯಿತು. ಆ ಸುತ್ತಮುತ್ತಲಲ್ಲಿ ಸ್ತನ್ಯರೋಗವೆಂಬ ಸೊಂಕುಜಾಡ್ಯವು ಪ್ರಬಲಿಸಿ ಅನೇಕ ಸ್ತ್ರೀಯರನ್ನು ಆಹುತಿ ತೆಗೆದುಕೊಂಡಿತು. ಥಾಮಸನ ದುರದೃಷ್ಟದಿಂದ ಈ ರೋಗವು ನ್ಯಾನ್ಸಿಗೂ ಪ್ರಾಪ್ತವಾಯಿತು. ಈಗಿನಂತೆ ಆ ಕಾಲದಲ್ಲಿ ವೈದ್ಯರನೇಕರಿರಲಿಲ್ಲ. ಅಲ್ಲಿ ಅಕ್ಕಪಕ್ಕದ ಜನರೆಲ್ಲರೂ ಒಂದು ತಮಗೆ ತೋರಿದ ಚಿಕಿತ್ಸೆಗಳನ್ನು ಮಾಡಲಾರಂಭಿಸಿದರು ಆದರೂ ಈ ರೋಗವು ಪ್ರಬಲಿಸಿ ನ್ಯಾನ್ಸಿಯು ಕಾಲವಾದಳು.

---

## ಮೂರನೆಯ ಪ್ರಕರಣ

---

### ಬಲತಾಯಿ – ದಿವಚರ್ಯೆ.

ಥಾಮಸಿನ ಸಂಸಾರದಲ್ಲಿ ನ್ಯಾನ್ಸಿಯ ವಿಯೋಗದುಃಖವು ದುರ್ಭರವಾಯಿತು ಸಾರಳು ಇನ್ನೂ ಸಣ್ಣ ಹುಡುಗಿಯಾಗಿದ್ದುದರಿಂದ ಮನೆಗೆಲಸಗಳು ನಡೆಯುವುದಕ್ಕೆ ಬಹಳ ತೊಂದರೆಯಾಯಿತು. ಆದರೂ ಹನ್ನೊಂದು ವರ್ಷದ ಬಾಲೆಯಾದ ಸಾರಳೇ ಸ್ವಲ್ಪವೂ ಹೆದರದೆ, ಹಿಂದೆಗೆಯದೆ ಮನೆಯ ಕೆಲಸಗಳನ್ನು ಮಾಡಲು ಯತ್ನಿಸುತ್ತಿದ್ದಳು. ಅವಳು ಅಡಿಗೆ ಮಾಡುವುದನ್ನು

ತಕ್ಕಮಟ್ಟಿಗೆ ಕಲಿತಳು. ಆದರೆ, ಬಟ್ಟೆಬರೆಗಳನ್ನು ಹೊಲಿಯುವುದು ಬಾರದು. ಏಬ್ರಹಾಮನ ಬಟ್ಟೆಗಳು ದಿನದಿನಕ್ಕೂ ಅವನಿಗೆ ಬಿಗಿಯಾಗುತ್ತಿದ್ದುವಲ್ಲದೆ ಹರಿದುಹೋಗುತ್ತಲೂ ಇದ್ದುವು. ಹೀಗಿದ್ದರೂ ಅವನು ತನ್ನ ಈ ಅವಸ್ಥೆಗಾಗಿ ಕೊಂಚವೂ ಚಿಂತಿಸುತ್ತಿರಲಿಲ್ಲ ; ತನ್ನ ತಾಯಿಗೋಸುಗ ಬಹಳವಾಗಿ ದುಃಖಿಸುತ್ತಿದ್ದನು. ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ತನ್ನ ಮತದ ತತ್ವವನ್ನು ತಾಯಿಯಿಂದರಿತವನಾಗಿದ್ದುದರಿಂದ ಅವನು ಯಾವನಾದರೊಬ್ಬ ಉಪದೇಶಿಯನ್ನು ಕರೆದುತಂದು ತನ್ನ ತಾಯಿಯ ಸಮಾಧಿಯ ಹತ್ತಿರ ಪ್ರಾರ್ಥನೆಮಾಡಿಸಬೇಕೆಂದು ಬಹಳವಾಗಿ ಕುತೂಹಲಪಡುತ್ತಿದ್ದನು

೭. ಆ ಕಾಲದಲ್ಲಿ ವಿದ್ಯಾಪ್ರಚಾರಕ್ಕೆ ಎಷ್ಟು ಅನಾನುಕೂಲ್ಯಗಳಿದ್ದುವೋ, ಮತಪ್ರಚಾರಕ್ಕೂ ಅಷ್ಟೇ ಅನಾನುಕೂಲ್ಯಗಳಿದ್ದುವು. ಐದಾರು ಕಲ್ಲುಗಳಿಗಾದರೂ ಒಂದು ಕ್ರೈಸ್ತದೇವಾಲಯವಿರಲಿಲ್ಲ. ಆಗಾಗ ಒಬ್ಬ ಉಪದೇಶಿಯು ದೇಶದಮೇಲೆಲ್ಲಾ ಸುತ್ತುತ್ತ, ಒಂದೊಂದು ಹಳ್ಳಿಯಲ್ಲಿಯೂ ಒಂದೆರಡು ದಿನಗಳಿದ್ದು ಮತಸಂಬಂಧವಾದ ಉಪನ್ಯಾಸಗಳನ್ನು ಮಾಡಿ ಮುಂದಕ್ಕೆ ಹೋಗುತ್ತಿದ್ದನು.

೮. ತಮ್ಮೂರಿಗೆ ಆಗಾಗ ಬರುತ್ತಿದ್ದ ಒಬ್ಬ ಉಪದೇಶಿಯ ಪರಿಚಯವು ಏಬ್ರಹಾಮನಿಗೆ ಇದ್ದಿತು. ಆದುದರಿಂದ ಆತನಿಗೆ ತನ್ನ ಅಭಿಪ್ರಾಯವನ್ನು ತಿಳಿಸಿದರೆ ಕೊಂಚ ಪ್ರಯೋಜನವಾದರೂ ಆಗಬಹುದೆಂದು ತಿಳಿದು, ಏಬ್ರಹಾಮನ ಧೈರ್ಯದಿಂದ ಆ ಉಪದೇಶಿಯ ಹೆಸರಿಗೆ ಒಂದು ಕಾಗದವನ್ನು ಬರೆದನು. ಕಾಗದವು ಒಬ್ಬರ ಕೈಯಿಂದ ಒಬ್ಬರಿಗೆ ಹೋಗಿ ಕೊನೆಗೆ ಉಪದೇಶಿಗೆ ಮುಟ್ಟಿತು. ಇದರಿಂದ ಕೊಂಚ ವಿಳಂಬವಾಗಲು ಏಬ್ರಹಾಮನು ನಿರಾಶನಾಗಿ, ಉಪದೇಶಿಯು ತನ್ನಂತಹ ಹುಡುಗನ ಮಾತನ್ನು ಲಕ್ಷ್ಯಮಾಡನೆಂದು ತಿಳಿದನು. ಆದರೆ ಅವನ ಕಾಗದವು ಕೈಸೇರಿದೊಡನೆಯೇ ಉಪದೇಶಿಯು ಏಬ್ರಹಾಮನ ಧೈರ್ಯಕ್ಕೂ ಮಾತೃಭಕ್ತಿಗೂ ಆಶ್ಚರ್ಯಪಟ್ಟು ಆ ಊರಿಗೆ ಬಂದು ಆ ಬಾಲನ ಕೋರಿಕೆಯನ್ನು ನೆರವೇರಿಸಿದನು. ಈ ಸಮಾಚಾರವು ಊರಿನವರಿಗೆಲ್ಲಾ ತಿಳಿದೊಡನೆಯೇ ಅವರೆಲ್ಲರೂ ಆಶ್ಚರ್ಯಚಕಿತರಾದರು. ಥಾಮಸನ ಸಂತೋಷಕ್ಕಂತೂ ಪಾರವೇ ಇರಲಿಲ್ಲ.

೪. ಒಂದು ದಿನ ಥಾಮಸನು ತನ್ನ ಬಂದೂಕವನ್ನು ತೆಗೆದುಕೊಂಡು, ಮಕ್ಕಳಿಗೆ ತಾನು ಬರುವವರೆಗೂ ಮನೆಯನ್ನು ಎಚ್ಚರಿಕೆಯಿಂದ ನೋಡಿಕೊಂಡಿರಬೇಕೆಂದು ಹೇಳಿ, ಅಲ್ಲಿಗೆ ಬಂದಿದ್ದ ಉಪದೇಶಿಯೊಡನೆ ಹೊರಟುಹೋದನು. ಇದಕ್ಕೆ ಮೊದಲೇ ಲಿಂಕನ್ನಿನ ಬಂಧುಗಳಲ್ಲಿ ಕೆಲವರು ಅಲ್ಲಿಗೆ ಬಂದು ವಾಸಮಾಡುತ್ತಿದ್ದರು. ಇವರೆಲ್ಲರೂ ಈ ತಬ್ಬಲಿಮಕ್ಕಳುಗಳನ್ನು ಬಹು ಪ್ರೀತಿಯಿಂದ ಕಾಣುತ್ತಿದ್ದರಲ್ಲದೆ, ಹ್ಯಾಂಕ್ಸ್ (Hanks) ಎಂಬೊಬ್ಬ ಬಾಲನು ಥಾಮಸನ ಮನೆಯಲ್ಲಿಯೇ ಇರುತ್ತಿದ್ದನು. ತಮ್ಮ ತಂದೆಯು ಎಲ್ಲಿಗೆ ಹೋದನೆಂಬುದು ಮಕ್ಕಳಿಗೆ ತಿಳಿದಿರಲಿಲ್ಲವಾದರೂ, ತೀವ್ರವಾಗಿ ಹಿಂದಿರುಗುವನೆಂಬು ಅವರು ತಿಳಿದಿದ್ದರು. ಆದರೆ ಎರಡುಮೂರು ವಾರಗಳಾದುವು. ಆದರೂ ತಂದೆಯು ಬಾರಲಿಲ್ಲ. ಬಾಲರಿಗೆ ಕುತೂಹಲವು ಹೆಚ್ಚಿತು. ಅವರು ಆಹಾರಸಾಮಗ್ರಿಗಾಗಿ ಯೋಚಿಸಬೇಕಾದುದಿರಲಿಲ್ಲ. ಹ್ಯಾಂಕ್ಸ್ನನು ಪಕ್ಕದ ಅರಣ್ಯದಲ್ಲಿ ಬೇಟೆಯಾಡಿ ಬೇಕಾದಷ್ಟು ಮಾಂಸವನ್ನು ತರುತ್ತಿದ್ದನು. ಸಾರಳು ಅವನ್ನು ಊಟಕ್ಕೆ ಸಿದ್ಧಮಾಡುತ್ತಿದ್ದಳು. ಏಬ್ರಹಾಮನು ಮಾತ್ರ ಬಹುದಯಾಳುವಾಗಿದ್ದುದರಿಂದ, ಹಕ್ಕಿ ಪಕ್ಷಿಗಳನ್ನು ಕೊಲ್ಲುವುದಕ್ಕೆ ಇಷ್ಟಪಡದೆ ಗ್ರಂಥವ್ಯಾಸಂಗದಲ್ಲಿಯೇ ತನ್ನ ಕಾಲವನ್ನೆಲ್ಲಾ ಕಳೆಯುತ್ತಿದ್ದನು.

೫. ಹೀಗೆ ಒಂದೆರಡು ತಿಂಗಳುಗಳು ಕಳೆದುವು. ಇಷ್ಟಾದರೂ ತಂದೆಯ ಸುಳಿವೇ ಕಾಣಲಿಲ್ಲ. ಬಾಲರಿಗೆ ಬಹುಸಂಕಟವಾಯಿತು; ನೆರೆಹೊರೆಯವರು ಅವರಿಗೆ ಸಮಾಧಾನಮಾಡಲಾರಂಭಿಸಿದರು. ಹೀಗಿರುವಲ್ಲಿ ಒಂದುದಿನ ಬೆಳಗ್ಗೆ ಥಾಮಸನು ಬರುತ್ತಿದ್ದುದನ್ನು ಆ ಬಾಲಕರು ಕಂಡಾಗ ಅವರಿಗುಂಟಾದ ಸಂತೋಷವನ್ನು ಅನುಭವದಿಂದ ತಿಳಿದುಕೊಳ್ಳಬೇಕಲ್ಲದೆ ಬರೆದು ವರ್ಣಿಸಲಾಗುವುದಿಲ್ಲ. ಥಾಮಸನೊಬ್ಬನೇ ಬರುತ್ತಿರಲಿಲ್ಲ. ಅವನು ಕುಳಿತಿದ್ದ ಗಾಡಿಯಲ್ಲೊಬ್ಬ ಹೆಂಗಸೂ, ಇಬ್ಬರು ಹುಡುಗರೂ ಇದ್ದರು. ಇವರಾರು ? ಹುಡುಗರಿಗಾವುದೂ ತಿಳಿಯಲಿಲ್ಲ. ಹಿಂದೆ ಬರುತ್ತಿದ್ದ ಗಾಡಿಯಲ್ಲಿ ತುಂಬ ಸಾಮಾನುಗಳಿದ್ದುವು. ಇವಾರವು ?

೬ ಬಂಡಿಯು ಮನೆಯ ಹತ್ತಿರ ಬರುವುದಕ್ಕೆ ಮೊದಲೇ ಥಾಮಸನು ಗಾಡಿಯಿಂದ ಹೊರಕ್ಕೆ ದುಮುಕಿ ಓಡಿಬಂದು ತನ್ನ ಮಕ್ಕಳನ್ನು

ಮುತ್ತಿಟ್ಟುಕೊಂಡು "ಹುಡುಗರಾ! ನಾನು ನಿಮಗೊಬ್ಬ ತಾಯನ್ನು ಕರೆ ತಂದಿರುವೆನು" ಎಂದನು. ಇಷ್ಟರಲ್ಲಿಯೇ ಗಾಡಿಯು ಮನೆಯ ಹತ್ತಿರ ಬಂದು ನಿಂತಿತು. ಕೂಡಲೇ ಗಾಡಿಯೊಳಗಿದ್ದ ಸ್ತ್ರೀಯು ಕೆಳಕ್ಕಿಳಿದುಬಂದು ಏಬ್ರಹಾಮನನ್ನೂ, ಸಾರಳನ್ನೂ ಬಾಚಿ ತಬ್ಬಿಕೊಂಡು ಮುದ್ದಾಡಿದಳು. ಬಹುಕಾಲದಿಂದಲೂ ಸಂತೋಷಶೂನ್ಯವಾಗಿದ್ದ ಆ ಮಕ್ಕಳ ಮುಖದಲ್ಲಿ ಮಂದಹಾಸವು ತಲೆದೋರಿತು. ಎಲ್ಲೆಲ್ಲಿಯೂ ಕಗ್ಗತ್ತಲೆ ಕವಿದುಕೊಂಡಂತಿದ್ದ ಆ ಗೃಹದಲ್ಲಿ ಅಕಸ್ಮಾತ್ತಾಗಿ ಬೆಳಕುಂಟಾದಂತಾಯಿತು. ಮೊದಲು ದುಃಖಕರವಾಗಿದ್ದ ಪದಾರ್ಥಗಳು ಈಗ ಸಂತೋಷವನ್ನುಂಟುಮಾಡುವಂತಿದ್ದುವು. ಥಾಮಸನು ಕರೆತಂದಿದ್ದ ಸ್ತ್ರೀಯನ್ನು ಏಬ್ರಹಾಮನು ತನ್ನ ತಾಯಿಯೆಂಬೇ ತಿಳಿಯಲಾರಂಭಿಸಿದನು ಸಾರಳೂ ಆಕೆಯನ್ನು ವಿಶೇಷವಾಗಿ ಪ್ರೀತಿಸುತ್ತ ಬಂದಳು ಆಕೆಗೂ ಸವತಿಯ ಮಕ್ಕಳಮೇಲೆ ಬಲತಾಯಿಗಳಿಗೆ ಸಹಜವಾದ ಮತ್ಸರವೇನೂ ಇರಲಿಲ್ಲ. ಅದಕ್ಕೆ ಪ್ರತಿಯಾಗಿ ಆಕೆಯು ಅವರನ್ನು ತನ್ನ ಸ್ವಂತಮಕ್ಕಳಿಗಿಂತಲೂ ಅತಿಶಯವಾಗಿ ಪ್ರೀತಿಸುತ್ತ ಅವರ ದುಃಖವನ್ನು ಮರೆಯಿಸಲು ಪ್ರಯತ್ನಿಸುತ್ತಿದ್ದಳು ಆದುದರಿಂದ ಸಾರಳೂ ಏಬ್ರಹಾಮನೂ ಸ್ವಲ್ಪ ದಿನಗಳಲ್ಲೇ ತಮ್ಮ ತಾಯಿಯ ವಿಯೋಗವನ್ನು ಮರೆತರು.

೭ ಬಲತಾಯಿಯು ಕೆಲಸಕಾರ್ಯಗಳಲ್ಲಿ ಚತುರಳಾಗಿದ್ದಳಲ್ಲದೆ ವಿದ್ಯಾವತಿಯೂ ಆಗಿದ್ದಳು. ವಿದ್ಯೆಯ ಪ್ರಯೋಜನವನ್ನು ಅವಳು ಚೆನ್ನಾಗಿ ಅರಿತವಳಾಗಿದ್ದುದರಿಂದ ಏಬ್ರಹಾಮನಿಗೆ ವಿದ್ಯೆಯಲ್ಲಿರುವ ಆಸಕ್ತಿಯನ್ನು ಕಂಡುಕೊಂಡು ಅವನನ್ನು ಯಾವರೀತಿ ವಿದ್ಯಾವಂತನನ್ನಾಗಿ ಮಾಡಬಹುದೆಂದು ಯೋಚಿಸಲಾರಂಭಿಸಿದಳು ಏಬ್ರಹಾಮನು ಪಾಠಗಳ ವಿಷಯದಲ್ಲಿ, ಹೇಗೆ ಮೇಲಾಗಿದ್ದನೋ ಹಾಗೆಯೇ ಆಟದಲ್ಲಿಯೂ ಎಲ್ಲರನ್ನೂ ಮೀರಿಸಿದ್ದನು. ಈಗಿನ ಕೆಲವು ಬಾಲಕರಂತೆ ವಿದ್ಯೆಗೋಸುಗ ಆಟವನ್ನೂ, ಇಲ್ಲವೇ ಆಟಕ್ಕೋಸುಗ ವಿದ್ಯೆಯನ್ನೂ ಬಿಡುವವನಾಗಿರಲಿಲ್ಲ. ಆಟಪಾಠಗಳೆರಡೂ ವಿದ್ಯಾಭ್ಯಾಸದ ಮುಖ್ಯವಾದ ಅಂಗಗಳೆಂದೂ ಒಬ್ಬ ಮನುಷ್ಯನು ಎಷ್ಟೇ ವಿದ್ಯಾವಂತನಾದರೂ, ತಕ್ಕ ದೇಹದಾರ್ಢ್ಯವಿಲ್ಲದಿದ್ದರೆ ಹುಲ್ಲುಕಡ್ಡಿಗೆ ಸಮಾನನೆಂದೂ ತಿಳಿದಿದ್ದುದರಿಂದ ಏಬ್ರಹಾಮನು ತನ್ನ ಪಾಠಗಳಿಗೂ

ಆಟಗಳಿಗೂ ಒಂದೇ ಬಗೆಯಾದ ಶ್ರದ್ಧೆಯನ್ನು ತೋರುತ್ತಿದ್ದನು. ಇವನಿಗೆ ಬಂದೂಕವನ್ನು ಹಾರಿಸುವುದು ಚೆನ್ನಾಗಿ ಬರುತ್ತಿದ್ದಿತು. ಆದರೆ ಎಂದಿಗೂ ಮೃಗಜಂತುಗಳಿಗೆ ಹಿಂಸೆಕೊಟ್ಟವನಲ್ಲ. ಸಂಕಟಪಡುತ್ತಿದ್ದ ಯಾವುದಾದರೂ ಪ್ರಾಣಿಯನ್ನು ಕಂಡೊಡನೆಯೇ ಇವನ ಹೃದಯವು ಕರಗಿ ನೀರಾಗುತ್ತಿದ್ದಿತು. ಈ ದಯಾರ್ದ್ರಹೃದಯವೇ ಮುಂದೆ ಇವನು ಗುಲಾಮರ ಪಕ್ಷವನ್ನು ವಹಿಸಿ ಹೋರಾಡುವುದಕ್ಕೆ ಕಾರಣವಾಯಿತು.

೮ ೧೮೨೪ನೆಯ ವರುಷದಲ್ಲಿ ಆ ಹಳ್ಳಿಯಲ್ಲಿಯೇ ಒಂದು ಪಾಠಶಾಲೆಯು ಆರಂಭವಾಯಿತು. ಏಬ್ರಹಾಮನ ಬಲತಾಯಿಗೆ ಈ ಸಮಾಚಾರವು ತಿಳಿದೊಡನೆಯೇ ಆಕೆಯು ಏಬ್ರಹಾಮನನ್ನು ಅಲ್ಲಿಗೆ ಕಳುಹಿಸಿಕೊಟ್ಟಳು. ಆಗ ಅವನಿಗೆ ೧೬ ವರುಷ ವಯಸ್ಸಾಗಿದ್ದಿತು, ವಿದ್ಯಾರ್ಜನೆಗಾಗಿ ಎಷ್ಟು ದೂರವಾದರೂ ನಡೆದುಕೊಂಡುಹೋಗಲು ಸಿದ್ಧನಾಗಿದ್ದನು. ಓದುಬರೆಯುವುದಕ್ಕಿಂತಲೂ ಹೆಚ್ಚಾಗಿ ಆ ಪಾಠಶಾಲೆಯಲ್ಲಿ ಮತ್ತೇನನ್ನೂ ಹೇಳಿಕೊಡುತ್ತಿರಲಿಲ್ಲ ಲಿಂಕನನು ಅದೆಲ್ಲವನ್ನೂ ಬಲುಬೇಗನೆ ಕಲಿತುಕೊಂಡು ತನ್ನ ಜೊತೆಯ ಹುಡುಗರನ್ನು ಮೀರಿಸಿದನು. ಆ ಶಾಲೆಯೂ ಬಹುದಿನವಿರಲಿಲ್ಲ ಉಪಾಧ್ಯಾಯನು ಮತ್ತೆಲ್ಲಿಗೋ ಹೊರಟುಹೋದನು. ಇನ್ನು ಕೆಲವು ದಿನಗಳಮೇಲೆ, ಮತ್ತೊಬ್ಬ ಉಪಾಧ್ಯಾಯನು ಬಂದು ಪಾಠಶಾಲೆಯನ್ನಾರಂಭಿಸಿದನು. ಆದರೆ ಕೆಲವು ದಿನಗಳಲ್ಲಿಯೇ ಅವನಿಗೂ ಬೇಸರವಾಗಲು ಅವನು ಹೊರಟುಹೋದನು. ಅಂತು ಇಲ್ಲಿಗೆ ಏಬ್ರಹಾಮನ ವಿದ್ಯೆಯು ಪೂರೈಸಿದಂತಾಯಿತು. ಅವನು ಪಾಠಶಾಲೆಗೆ ಹೋದ ದಿನಗಳನ್ನೆಲ್ಲಾ ಸೇರಿಸಿದರೆ ಒಂದು ವರ್ಷಕ್ಕಿಂತಲೂ ಹೆಚ್ಚಾಗದು.

೯. ಹೀಗೆ ಲಿಂಕನ್ನಿಗೆ ಪ್ರೌಢವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲ್ಯವಿಲ್ಲದಿದ್ದರೂ, ಕೊನೆಗೆ ದೇಶಾಧ್ಯಕ್ಷನಾಗುವುದಕ್ಕೆ ತಕ್ಕ ಬುದ್ಧಿಶಕ್ತಿಯು ಹೇಗುಂಟಾಯಿತು ? ಇತರರ ಸಹಾಯಕ್ಕಿಂತಲೂ ಸ್ವಸಾಮರ್ಥ್ಯವೇ ಹೆಚ್ಚಾಗಿ ಪ್ರಯೋಜನಕಾರಿಯೆಂಬ ತತ್ವವನ್ನು ಅವನು ಬಾಲ್ಯದಿಂದಲೂ ಚೆನ್ನಾಗಿ ತಿಳಿದಿದ್ದನು. ತೆಂಗಿನಮರವನ್ನು ಹತ್ತುವವನಿಗೆ ಎಲ್ಲಿಯವರೆಗೆ ತಾನೇ ಎತ್ತಿ ಸಹಾಯಮಾಡಬಹುದು ? ವಿದ್ಯಾಭಿವೃದ್ಧಿಯನ್ನುಂಟುಮಾಡಿಕೊಳ್ಳುವುದಕ್ಕೆ ತಕ್ಕ ದಾರಿಯನ್ನು ಉಪಾಧ್ಯಾಯರು ತೋರಿಕೊಟ್ಟಾರು. ಯಾವ

ವಿಷಯವನ್ನೇ ಆಗಲಿ ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ವಿದ್ಯಾರ್ಥಿಗಳು ಸ್ವಪ್ರಯತ್ನಶೀಲರಾದಹೊರತು ಸತ್ಫಲವು ದೊರೆಯಲಾರದು. ತನ್ನ ಉಪಾಧ್ಯಾಯನು ತೋರಿಸಿಕೊಟ್ಟ ಮಾರ್ಗದಲ್ಲಿ ಏಬ್ರಹಾಮನು ಉತ್ಸಾಹದಿಂದ ವ್ಯಾಸಂಗಮಾಡುತ್ತಾ ಬರುತ್ತಿದ್ದನು. ಆ ಕಾಲದಲ್ಲಿ ಪುಸ್ತಕಗಳು ಬಹು ಅಪೂರ್ವವಾಗಿದ್ದುವು. ಆದುದರಿಂದ ತನ್ನ ಕೈಗೆ ಯಾವುದಾದರೂ ಪುಸ್ತಕವು ಸಿಕ್ಕಿದೊಡನೆಯೇ ಅದನ್ನು ಒಂದೆರಡುವೇಳೆ ಮಾತ್ರ ಓದಿ ಬಿಸಾಡದೆ ಅದನ್ನು ಕಂಠಪಾಠಮಾಡಿಬಿಡುತ್ತಿದ್ದನು; ಆದುದರಿಂದ, ಕೆಲವು ಪುಸ್ತಕಗಳೇ ಇವನಿಗೆ ಸಿಕ್ಕಿದ್ದರೂ ಅವುಗಳಿಂದ ಬಹಳ ಪ್ರಯೋಜನವನ್ನು ಹೊಂದಿದ್ದನು. ಈ ಕಾಲದಲ್ಲಿಯಾದರೋ ಪುಸ್ತಕಗಳ ಸಂಖ್ಯೆಯು ಅಗಣಿತವಾಗಿರುವುದರಿಂದ, ಅನೇಕ ಹುಡುಗರಿಗೆ ಯಾವ ಪುಸ್ತಕಗಳನ್ನೋದಬೇಕೋ ಯಾವುದನ್ನು ಬಿಡಬೇಕೋ ತಿಳಿಯದೆ ಅವರು ಕೆಲವನ್ನಾದರೂ ಚೆನ್ನಾಗಿ ಓದುವುದನ್ನು ಅಲಕ್ಷ್ಯಮಾಡುತ್ತಿರುವಂತೆ ಕಾಣುವುದು. ಏಬ್ರಹಾಮನು ಪಾಠಶಾಲೆಯಿಂದ ಮನೆಗೆ ಬಂದೊಡನೆಯೇ ತನಗೆ ನಿಯಮಿತವಾಗಿದ್ದ ಮನೆಯ ಕೆಲಸವನ್ನೆಲ್ಲಾ ಮನಃಪೂರ್ವಕವಾಗಿಯೂ ಅಚ್ಚುಕಟ್ಟಾಗಿಯೂ ಬಲು ಬೇಗ ಮುಗಿಸಿಬಿಟ್ಟು, ಮಿಕ್ಕ ಕಾಲವನ್ನು ಗ್ರಂಥವ್ಯಾಸಂಗಕ್ಕೆ ವಿನಿಯೋಗಿಸುತ್ತಿದ್ದನು. ಇವನಿಗೆ ಮೊದಲು ದೊರಕಿದ ಪುಸ್ತಕವು "ಜಾರ್ಜ್ ವಾಷಿಂಗ್‌ಟನ್ ಎಂಬ ಮಹಾಪುರುಷನ ಜೀವನಚರಿತೆ* ಇದನ್ನು ಓದಿ ಆ ಮಹಾತ್ಮನಂತೆ ನಡೆಯಬೇಕೆಂದು ನಿರ್ಧರಿಸಿಕೊಂಡನು. ಆದುದರಿಂದ ತನಗೆ ವಿರಾಮ ದೊರೆತ ಸಮಯಗಳಲ್ಲಿ ಈ ಪುಸ್ತಕವನ್ನೋದಿ ಸಂತೋಷವನ್ನು ಹೊಂದುತ್ತಿದ್ದನು.

೧೦. ಇದೇ ಕಾಲದಲ್ಲಿಯೇ ಲಿಂಕನನು ತನಗೆ ಯುಕ್ತವೆಂದು ತೋರಿದ ವಿಷಯಗಳನ್ನು ಕುರಿತು ಆಗಾಗ ಸಣ್ಣ ಪುಟ್ಟ ಉಪನ್ಯಾಸಗಳನ್ನು ಮಾಡುತ್ತ ತನ್ನ ವಾಚಾಲತೆಯನ್ನು ವೃದ್ಧಿಪಡಿಸಿಕೊಳ್ಳುತ್ತಿದ್ದನು. ಆಗಿನಿಂ

* ಈ ಮಹಾ ಪುರುಷನ ಚರಿತೆಯನ್ನು ಮ|| ರಾ|| ಎಂ. ಆರ್. ಅಣ್ಣಾಜಿರಾಯರು ೧೯೦೬ ರಲ್ಲಿ "ಜೀರ್ಜ್‌ವಾಶಿಂಗ್ಟನನ ಜೀವನಚರಿತ್ರೆ' ಎಂಬ ಹೆಸರಿನಿಂದಲೂ ಮ|| ರಾ|| ಆ. ರಾಮರಾಯರು "ಜಾರ್ಜ್ ವಾಷಿಂಗ್ಟನ್ ಚರಿತ್ರೆ" ಎಂಬ ಹೆಸರಿನಿಂದಲೂ ಸಂಕ್ಷೇಪವಾಗಿ ಕನ್ನಡದಲ್ಲಿ ರಚಿಸಿರುವರು.

ದಲೇ ಜನರ ಚಿತ್ತವನ್ನು ಆಕರ್ಷಿಸುವ ಶಕ್ತಿಯು ಅವನಲ್ಲಿ ನೆಲೆಗೊಂಡಿದ್ದಿತು ಅವನು ತನ್ನ ಅಂತರಾತ್ಮನಿಗೆ ವಿರೋಧವಾದ ವಿಷಯವನ್ನೆಂದಿಗೂ ಇತರರಿಗೆ ಬೋಧಿಸುತ್ತಿರಲಿಲ್ಲ ; ತಾನಾಡುವ ಪ್ರತಿಯೊಂದು ಮಾತನ್ನೂ ಚೆನ್ನಾಗಿ ಆಲೋಚಿಸಿ ಯುಕ್ತವೆಂದು ತೋರಿದರೆ ಮಾತ್ರ ಮಾತನಾಡುತ್ತಿದ್ದನು ; ಜನರು ತನ್ನ ಉಪನ್ಯಾಸವನ್ನು ಕೇಳಿ ಸಂತೋಷಪಟ್ಟರೆ ತನ್ನ ಶ್ರಮಕ್ಕೆ ತಕ್ಕ ಪ್ರತಿಫಲವಾಯಿತೆಂದು ತಿಳಿಯುತ್ತಿದ್ದನು.

೧೧. ಈ ಮಧ್ಯೆ ಆ ಹಳ್ಳಿಗೆ ಅನೇಕರು ಬಂದು ನೆಲೆಸಲಾರಂಭಿಸಿದರು. ಅಲ್ಲಿಗೆ ಬರುತ್ತಿದ್ದ ಪ್ರತಿಯೊಬ್ಬರೂ ಒಂದೊಂದು ಹೊಸ ವಿಷಯವನ್ನು ತಿಳಿಸುತ್ತಲೂ, ತಾವು ನೋಡಿದ ದೇಶಗಳನ್ನು ವರ್ಣಿಸುತ್ತಲೂ ಇದ್ದರು. ಇದನ್ನೆಲ್ಲಾ ಕೇಳುತ್ತಿದ್ದ ಏಬ್ರಹಾಮನಿಗೆ ದೇಶಸಂಚಾರವನ್ನು ಮಾಡಬೇಕೆಂಬ ಆಸೆಯು ಹುಟ್ಟಿತು. ಆದರೆ ಅವನ ತಂದೆಯು ಮಾತ್ರ ಅದಕ್ಕೆ ಅನುಮತಿಕೊಡುವಂತಿರಲಿಲ್ಲ ಮನೆಯಲ್ಲಿ ಅವನಿನ್ನೂ ಮಾಡಬಹುದಾದ ಕೆಲಸಗಳನೇಕವಾಗಿದ್ದುವು ಆದುದರಿಂದ ಇನ್ನೂ ಕೊಂಚ ಕಾಲದ ವರೆಗೆ ತನ್ನ ಅಭಿಪ್ರಾಯವನ್ನು ಗುಪ್ತವಾಗಿಟ್ಟುಕೊಂಡಿರುವುದೇ ಉತ್ತಮವೆಂದು ಏಬ್ರಹಾಮನು ತಿಳಿದನು.

೧೨ ಹೊಲದಲ್ಲಿ ಕೆಲಸವೆಲ್ಲವೂ ಮುಗಿದು ವಿರಾಮಸಿಕ್ಕಿದಾಗ ಏಬ್ರಹಾಮನು ನಾವಿಕವೃತ್ತಿಯನ್ನವಲಂಬಿಸಿ ಓಹಿಯೋ ನದಿಯಮೇಲೆ ಜನರನ್ನು ಒಂದುದಡದಿಂದ ಮತ್ತೊಂದುದಡಕ್ಕೆ ಸಾಗಿಸುತ್ತಿದ್ದನು. ಇದರಿಂದ ಅವನಿಗೆ ಸ್ವಲ್ಪ ಧನಲಾಭವಾದುದಲ್ಲದೆ ಲೋಕವ್ಯವಹಾರಜ್ಞಾನವೂ ಉಂಟಾಯಿತು. ಇಲ್ಲಿ ಅವನು ನಾನಾದೇಶದ ಜನರೊಡನೆ ಬೆರೆಯುತ್ತಿದ್ದುದರಿಂದ ಅವರ ನಡೆನುಡಿಗಳನ್ನೂ ತಮ್ಮೂರಿನವರ ನಡೆನುಡಿಗಳನ್ನೂ ಹೋಲಿಸಿ ನೋಡುತ್ತ ತನ್ನವರ ದುಸ್ಸ್ಥಿತಿಯನ್ನು ಕಂಡು, ಅದನ್ನು ಸರಿಪಡಿಸುವುದು ಹೇಗೆಂದು ಚಿಂತಿಸಲಾರಂಭಿಸಿ ಇದಕ್ಕಾಗಿ ತಾನು ಹೇಗಾದರೂ ಮಾಡಿ ಇನ್ನೂ ದೇಶ ಸಂಚಾರಮಾಡಬೇಕೆಂದುಕೊಂಡನು. ಆದರೆ ಆಕಾಲದಲ್ಲಿಯೂ ಹಣವುಂದು ಮಾತು ಹಿಂದು ಎಂಬಂತಿದ್ದುದರಿಂದ ಏಬ್ರಹಾಮನು ತನ್ನಂತಹ ಬಡವನಿಗೆಂದಿಗೂ ಅದು ಸಾಧ್ಯವಾಗದೆಂದು ತಿಳಿದಿದ್ದರೂ ಸಂಪೂರ್ಣವಾಗಿ ನಿರಾಶನಾಗಲಿಲ್ಲ. ತಾನು ಹೀಗೆಯೇ ದೋಣಿ ನಡಿಸುತ್ತಿದ್ದರೆ,

ಬಂದ ಒಂದೆರಡು ಕಾಸನ್ನು ಕೂಡಿಹಾಕಿಕೊಂಡು ಅದರ ಸಹಾಯದಿಂದ ನೋಡಬಹುದಾದ ಪ್ರದೇಶಗಳಲ್ಲಿಯಾದರೂ ಸುತ್ತಿಕೊಂಡು ಬರಬಹುದೆಂದುನಿರ್ಧರಿಸಿಕೊಂಡನು. ಅಲ್ಲಿ ನದಿಯನ್ನು ದಾಟುವುದಕ್ಕೆ ಬರುತ್ತಿದ್ದ ಜನರು ತಮ್ಮೂರಿನವರಂತೆಯೇ ಜಮೀನುದಾರರೂ ರೈತರೂ ಆಗಿರದೆ, ದೊಡ್ಡ ದೊಡ್ಡ ಉದ್ಯೋಗಸ್ಥರೂ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರೂ ಆಗಿದ್ದರು. ಆದಕಾರಣ ಏಬ್ರಹಾಮನು ಇದರಿಂದ ಜೀವನಕ್ಕೆ ವ್ಯವಸಾಯ ಮಾತ್ರವಲ್ಲದೆ ಮತ್ತೆ ಬೇರೆ ಉದ್ಯೋಗಗಳೂ ಉಂಟೆಂದು ತಿಳಿದನು.

೧೩. ಚಳಿಗಾಲವು ಪ್ರಾಪ್ತವಾಗಿ ನದಿಯ ನೀರೆಲ್ಲವೂ ಗಡ್ಡೆಯಾದುದರಿಂದ ದೋಣಿಯನ್ನು ನಡೆಯಿಸಲಾಗಲಿಲ್ಲ. ಆದಕಾರಣ ಊರಿಗೆ ಹಿಂದಿರುಗಿ ಬಂದು ತನ್ನಬಳಿಯಲ್ಲಿದ್ದ ಒಂದೆರಡು ಪುಸ್ತಕಗಳನ್ನು ಪುನಃ ಚೆನ್ನಾಗಿ ಓದಲಾರಂಭಿಸಿದನು ; ಆದರೆ ತನ್ನ ಇತರ ಕೆಲಸ ಕಾರ್ಯಗಳಗೆಂದಿಗೂ ಅವನು ಪಾಲುಮಾರುತ್ತಿರಲಿಲ್ಲ. ಕೆಲಸವು ಕಷ್ಟವಾದುದೆಂದು ತೋರಿದಂತೆಲ್ಲಾ ಅವನ ಉತ್ಸಾಹವು ಹೆಚ್ಚುತ್ತಿದ್ದಿತು. ಆದರೂ ತಾನು ಬಲಶಾಲಿಯೆಂಬ ಗರ್ವದಿಂದ ಅವನು ಬಲಹೀನನನ್ನು ಎಂದಿಗೂ ಹಿಂಸಿಸುತ್ತಿರಲಿಲ್ಲ ; ತಾನು ಎಷ್ಟೇ ಆತುರದಲ್ಲಿದ್ದರೂ ಸಹಾಯವನ್ನು ಬೇಡಿದ ಪ್ರಾಣಿಗೆ ಸಹಾಯವನ್ನು ಕೊಡದಿರುತ್ತಿರಲಿಲ್ಲ. ನಡುರಾತ್ರಿಯಾದರೂ ಚಳಿ ಮಳೆಗಳೆಂದು ನೋಡದೆ ನೀರಿನಲ್ಲಿ ದುಮಿಕಿ, ಮುಳುಗಿಹೋಗುತ್ತಿದ್ದ ಯಾವ ಪ್ರಾಣಿಯನ್ನಾದರೂ ಕಾಪಾಡದೇ ಇರುತ್ತಿರಲಿಲ್ಲ.

೧೪. ಇದೇ ಹಿಮಗಾಲದಲ್ಲಿ ಒಂದಾನೊಂದು ಪ್ರಾತಃಕಾಲ ಏಬ್ರಹಾಮನು ಮನೆಯಿಂದ ಹೊರಟು, ಮೈದಾನದಲ್ಲಿ ತಿರುಗಾಡುತ್ತಿದ್ದನು. ಮಂಜು ದಟ್ಟವಾಗಿ ಸುರಿಯುತ್ತ ಮರಗಿಡಗಳನ್ನು ಕೂಡ ಮುಚ್ಚಿಬಿಟ್ಟಿದ್ದಿತು. ಹೀಗಿರುವಾಗ ಮರಗಳ ಮಧ್ಯದಲ್ಲಿ ಒಬ್ಬ ಹುಡುಗನು ಚಳಿಯಿಂದ ಗಡಗಡನೆ ನಡುಗುತ್ತಾ ಒಂದು ಸೌದೆಯಹೊರೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಲಿಂಕನನು ಇದನ್ನು ನೋಡಿ ಬಹುಕನಿಕರದಿಂದ ಅವನನ್ನು ಕುರಿತು—“ ಅಯ್ಯಾ, ಮಗು ! ಈ ಕೆಲಸಕ್ಕೆ ನಿನಗೆಷ್ಟು ಕೂಲಿ ಸಿಕ್ಕುವುದು ? ” ಎಂದು ಕೇಳಿದಾಗ “ ಸ್ವಾಮೀ ! ಇದಕ್ಕೆ ಒಂದು ಷಿಲಿಂಗು ಸಿಕ್ಕುವುದು ? ” ಎಂದು ಪ್ರತ್ಯುತ್ತರವು ಬಂದಿತು. ಇದನ್ನು ಕೇಳಿದೊಡನೆ

ಯೇ ಏಬ್ರಹಾಮನು ಆ ಸಾಮಾನು ಹೊರೆಯನ್ನು ತಾನೇ ಹೊತ್ತುಕೊಂಡು ಅವನ ಯಜಮಾನನ ಗೃಹವನ್ನು ವಿಚಾರಿಸಿಕೊಂಡು ಹೋಗಿ ಆ ಬಾಲಕನಿಗೆ ಕೂಲಿಯನ್ನು ಕೊಡಿಸಿದನು. ಏಬ್ರಹಾಮನ ಕರುಣಾರ್ದ್ರಹೃದಯವನ್ನು ತಿಳಿಸತಕ್ಕ ಈ ಬಗೆಯ ಉದಾಹರಣೆಗಳು ಅನೇಕವಾಗಿವೆ.

೧೫. ಚಳಿಗಾಲವೆಲ್ಲಾ ಲಿಂಕನ್ನನು ಮನೆಯಲ್ಲಿದ್ದುಕೊಂಡು ತಾನು ದೇಶಸಂಚಾರವನ್ನು ಹೇಗೆ ಮಾಡಬಹುದೆಂದು ಯೋಚಿಸುತ್ತಾ ತನ್ನ ಕೈಯಲ್ಲಿ ಹಣಕೂಡುವ ವರೆಗೂ ನಾವಿಕನಾಗಿರುವುದೇ ಉತ್ತಮವೆಂದು ನಿರ್ಧರಿಸಿಕೊಂಡನು. ಚಳಿಗಾಲವು ಕಳೆಯುತ್ತ ಬಂದು ನದಿಯಲ್ಲಿ ತುಂಬಿಕೊಂಡಿದ್ದ ಮಂಜಿನ ಗಡ್ಡೆಯೆಲ್ಲವೂ ಕರಗಿ ನೀರಾಯಿತು ಕೂಡಲೆ ಲಿಂಕನ್ನನು ತನ್ನ ತೆಪ್ಪವೊಂದನ್ನು ಕಟ್ಟಿಕೊಂಡನು. ಅದು ಬಹು ಒರಟಾಗಿದ್ದುದರಿಂದ ನದಿಯಮೇಲೆ ಅಷ್ಟು ಸರಾಗವಾಗಿ ಸಾಗುತ್ತಿರಲಿಲ್ಲ.

## ನಾಲ್ಕನೆಯ ಪ್ರಕರಣ

### ನ್ಯೂಆರ್ಲಿಯನ್ಸಿಗೆ ಪ್ರಯಾಣ.

೧. ಏಬ್ರಹಾಮನು ಹೀಗೆ ಕಷ್ಟ ಪಡುತ್ತಿರುವಾಗ ಅವನ ಸ್ನೇಹಿತನಾದ ಆಲ್ಲೆನ್ ಜೆಂಟ್ರಿ (Allen Gentry) ಯು ಕಾರ್ಯಾರ್ಥಿಯಾಗಿ ನ್ಯೂ ಆರ್ಲಿಯನ್ಸ್ ಪಟ್ಟಣಕ್ಕೆ ಹೋಗಬೇಕಾಯಿತು. ಅವನು ತನ್ನ ಜೊತೆಗೆ ಬರುವಂತೆ ಏಬ್ರಹಾಮನನ್ನು ಕೇಳಿಕೊಳ್ಳಲು, ಅವನು ಕೂಡಲೆ ಸಂತೋಷದಿಂದ ಒಪ್ಪಿಕೊಂಡನು. ಈಗ ಅವನ ರೊಟ್ಟಿಯು ಜಾರಿ ತುಪ್ಪಕ್ಕೆ ಬಿದ್ದಂತಾಯಿತು. ಕೂಡಲೆ ಆ ಇಬ್ಬರು ಸ್ನೇಹಿತರೂ ಮಿಸಿಸಿಪ್ಪಿ ನದಿಯ ಮೇಲೆ ಪಯಣಹೊರಟರು.

೨. ದೋಣಿಯು ಮುಂದುವರಿದಂತೆಲ್ಲಾ, ಅಕ್ಕಪಕ್ಕದಲ್ಲಿದ್ದ ಪ್ರಕೃತಿಯ ಸೌಂದರ್ಯವನ್ನು ನೋಡಿ ಲಿಂಕನನು ಆನಂದಪರವಶನಾದನು. ಅವನು ಯಾವಾಗಲೂ ತನ್ನ ಮನೆಯಿಂದ ಎಂಡುನೂರು ಮೈಲುಗಳಿಗಿಂತಲೂ ಹೆಚ್ಚಾಗಿ ಪ್ರಯಾಣಮಾಡದಿದ್ದುದರಿಂದಲೂ, ಈ ವಿಧವಾದ ನೋಟಗಳನ್ನು

ಅವನೆಲ್ಲಿಯೂ ನೋಡಿರಲಿಲ್ಲವಾದುದರಿಂದಲೂ ಅವನಿಗೆ ತಾನು ಮಾಯಾ ಪ್ರಪಂಚದಲ್ಲಿರುವೆನೆಂದು ತೋರುತ್ತಿದ್ದಿತು. ಅವನು ತನ್ನ ಕಣ್ಣನ್ನು ತಾನೇ ನಂಬದಿದ್ದನು. ಜೆಂಟ್ರಿಯೂ ಪ್ರಕೃತಿಯ ಆ ಸೊಬಗನ್ನು ಬಗೆಬಗೆಯಾಗಿ ಬಣ್ಣಿಸುತ್ತಿದ್ದನು. ಲಿಂಕನ್ನಿನ ದೃಷ್ಟಿಯೆಲ್ಲವೂ ಸುತ್ತುಮುತ್ತಲಿನ ನೋಟದಲ್ಲಿ ಲೀನವಾಗಿದ್ದಿತು. ಆ ನದಿಯ ಎರಡು ದಡಗಳೂ ಪಚ್ಚೆಯ ಹುಲ್ಲಿನಿಂದಲೂ ಬಗೆಬಗೆಯ ಮರಗಳಿಂದಲೂ ಅಲಂಕೃತವಾಗಿದ್ದುವು ಶುಭ್ರಾಕಾಶವು ನದಿಯ ನಿರ್ಮಲೋದಕದಲ್ಲಿ ಪ್ರತಿಬಿಂಬಿತವಾಗಿದ್ದಿತು. ನದೀತೀರದಲ್ಲಿದ್ದ ಮರಗಿಡಗಳು ತಮ್ಮ ಶಾಖೆಗಳನ್ನು ನದಿಯೊಳಕ್ಕೆ ಬಹುದೂರ ಚಾಚಿ ದಾರಿಗರ ಮೇಲೆ ಪುಷ್ಪವೃಷ್ಟಿಯನ್ನು ಸುರಿಸುತ್ತಿದ್ದುವು ವೃಕ್ಷಾಗ್ರಗಳಿಂದ ಪಕ್ಷಿಗಳು ಮೃದುಮಧುರವಾಗಿ ಗಾನಮಾಡುತ್ತ ಪ್ರಯಾಣಿಕರಿಗೆ ಸಂತೋಷವನ್ನುಂಟುಮಾಡುತ್ತಿದ್ದುವು ಮತ್ತೆ ಕೆಲವು ಹೂಗಿಡಗಳಲ್ಲಿಯ ಹೂಗಳು ಕೊಯ್ಯುವರಿಲ್ಲದೆ ಗಾಳಿಯ ಹೊಡೆತಕ್ಕೆ ಸಿಕ್ಕಿ ಕೆಳಗೆ ಹಚ್ಚನೆಯ ನೇದಮೇಲೆ ಬಿದ್ದಿದ್ದುದರಿಂದ ನೆಲಕ್ಕೆಲ್ಲಾ ರತ್ನಕಂಬಳಿಯನ್ನು ಹಾಸಿದಂತಿದ್ದಿತು. ದೂರದ ಹೊಲಗಳಲ್ಲಿ ಕೆಲಸಮಾಡುತ್ತಿದ್ದ ರೈತರ ಕೂಗೂ, ಆಚೆಯ ಕಡೆಗಿದ್ದ ಹಳ್ಳಿಯಲ್ಲಿ ನಾಯಿಯ ಬಗುಳುವಿಕೆಯೂ ಅಸ್ಪಷ್ಟವಾಗಿ ಕೇಳುತ್ತಿದ್ದುವು. ಯಾವುದಾರೂ ತೀರಸ್ಥಪತ್ತನವು ಹತ್ತಿರವಾಗಲು ನದಿಯ ತಡಿಯಲ್ಲಿ ಮಾನವಸಂಚಾರವು ಕ್ರಮೇಣ ಹೆಚ್ಚಿ ಊರು ಕಳೆದೊಡನೆಯೇ ಕಡಿಮೆಯಾಗುತ್ತಿದ್ದಿತು. ದನಕಾಯುವವರು ತಮ್ಮ ದನಗಳನ್ನು ಮೇಯುವುದಕ್ಕೆ ಬಿಟ್ಟು ತಾವು ಆವುದಾದರೂ ಮರದ ನೆರಳನಲ್ಲಿ ಕುಳಿತು ಊದುತ್ತಿದ್ದ ಕೊಳಲುಗಾನವು ಕೇಳುವುದಕ್ಕೆ ಬಹು ಇಂಪಾಗಿದ್ದಿತು. ಇಂತಹ ದೃಶ್ಯಗಳ ನಡುವೆ ಸಂಚರಿಸುತ್ತಾ ದೋಣಿಯು ಮುಂದುವರಿಯಿತು ನ್ಯೂ ಆರ್ಲಿಯನ್ಸ್ ನಗರವು ಹತ್ತಿರವಾದಂತೆಲ್ಲಾ ನದಿಯ ದಡಗಳು ಜನರಿಂದ ಕಿಕ್ಕಿರಿಯುತ್ತ ಬಂದುವು. ನದಿಯು ಅನೇಕದೋಣಿಗಳಿಂದ ನಿಬಿಡವಾಗುತ್ತಾ ಬಂದಿತು.

೩. ಕೊನೆಗೆ ನ್ಯೂ ಆರ್ಲಿಯನ್ಸ್ ಪಟ್ಟಣವು ಸಿಕ್ಕಿದೊಡನೆಯೇ ಇವರು ತಮ್ಮ ದೋಣಿಯನ್ನು ದಡಕ್ಕೆ ತಂದು ನಿಲ್ಲಿಸಿ ಊರೊಳಕ್ಕೆ ಹೊರಟರು. ಲಿಂಕನ್ನನು ಮತ್ತಾವ ಊರನ್ನೂ ನೋಡಿರಲಿಲ್ಲವಾದುದರಿಂದ ತಮ್ಮೂರೇ ಶ್ರೇಷ್ಠವಾದುದೆಂದು ತಿಳಿದಿದ್ದನು. ಆದರೆ ಆ ಊರನ್ನು ನೋಡು

ತ್ತಲೇ ಅವನು ಆಶ್ಚರ್ಯಭರಿತನಾಗಿ ತಮ್ಮೂರನ್ನು ನ್ಯೂ ಆರ್ಲಿಯನ್ಸಿನೊಡನೆ ಹೋಲಿಸುವುದು ಅಜಗಜನ್ಯಾಯದಂತಿದ್ದಿತೆಂದು ತಿಳಿದುಕೊಂಡನು ; ಅಲ್ಲಿಯ ಜನಸಂಖ್ಯೆಯು ಅಗಣಿತವಾಗಿದ್ದಂತೆ ತೋರಿತು ; ಅವರ ಬಟ್ಟೆಬರೆಗಳು ಬಹು ಸೊಗಸಾಗಿದ್ದುವು ; ಪ್ರತಿಯೊಬ್ಬನ ಮುಖದಲ್ಲಿಯೂ ಶಾಂತಿಸೌಖ್ಯಗಳು ತುಂಬಿ ತುಳುಕುತ್ತಿದ್ದುವು. ಲಿಂಕನ್ನನು ಇದನ್ನೆಲ್ಲಾ ನೋಡಿ ಇದೇನು ಸ್ವರ್ಗವೋ ಎಂದುಕೊಂಡನು. ಬಹುಕಾಲ ಲಿಂಕನನು ಆ ಪಟ್ಟಣದಲ್ಲಿರಲಿಲ್ಲವಾದುದರಿಂದ, ಊರಿದ್ದ ಕಡೆಯಲ್ಲೆಲ್ಲಾ ಹೊಲಗೇರಿಯೂ ಇರುವುದೆಂದು ಅವನು ತಿಳಿಯಲಾಗಲಿಲ್ಲ. ಪಟ್ಟಣವನ್ನೆಲ್ಲಾ ನೋಡಬೇಕೆಂಬ ಅಭಿಲಾಷೆಯು ಲಿಂಕನ್ನಿಗೆ ಇದ್ದಿತಾದರೂ, ಅವನ ಸ್ನೇಹಿತನ ಮಾತಿಗೆ ಸಿಕ್ಕಿಬಿದ್ದು, ತೀವ್ರವಾಗಿ ತನ್ನ ಕೆಲಸಗಳನ್ನು ಮುಗಿಸಿಕೊಂಡು ಬಂದ ಜೆಂಟ್ರಿಯೊಡನೆ ಲಿಂಕನ್ನನೂ ಹಿಂದಿರುಗಿದನು. ದಾರಿಯಲ್ಲಿ ಬರುತ್ತಿರುವಾಗ ಒಬ್ಬ ನಾವಿಕನು ಲಿಂಕನ್ನಿನ ಚಟವಟಿಕೆಗೆ ಸಂತೋಷಪಟ್ಟು, ಬಂದರೆ ತನ್ನ ಹಡಗಿನಲ್ಲೊಂದು ಉದ್ಯೋಗವನ್ನು ಕೊಡುತ್ತೇನೆಂದು ಕರೆದನು. ಆದರೆ ಅವನು ತನ್ನ ತಂದೆಯ ಅನುಮತಿ ಇಲ್ಲದೆ ತಾನೆಂದಿಗೂ ಒಪ್ಪುವದಿಲ್ಲವೆಂದು ಆ ನಾವಿಕನಿಗೆ ಖಂಡಿತವಾಗಿ ಹೇಳಿಬಿಟ್ಟನು.

೪. ಊರಿಗೆ ಬಂದಮೇಲೆ ಲಿಂಕನ್ನಿಗೆ ತಾನು ನೋಡಿದ ನೋಟಗಳು ಕಣ್ಣಿಗೆ ಕಟ್ಟಿದಂತಾಗಿ, ಪುನಃ ತಾನು ಅಂತಹ ಪಟ್ಟಣಗಳನ್ನೆಲ್ಲಾ ನೋಡುವುದಕ್ಕೆ ಏನು ಮಾಡಬಹುದೆಂದು ಯೋಚಿಸುತ್ತಿದ್ದನು. ನ್ಯೂ ಆರ್ಲಿಯನ್ಸ್ ಪಟ್ಟಣವನ್ನೂ ಪೂರ್ತಿಯಾಗಿ ನೋಡಲಾಗಲಿಲ್ಲ. ಥಾಮಸ್ ಲಿಂಕನನಾದರೋ ಮುದುಕನಾಗುತ್ತಿದ್ದರೂ, ಅವನಿಗೆ ಊರಿಂದೂರಿಗೆ ಅಲೆಯುವುದರಲ್ಲಿ ಆಸಕ್ತಿಯು ಇದ್ದೇ ಇದ್ದಿತು. ಇಷ್ಟರಲ್ಲಿ ಪಿಜನ್ ಕ್ರೀಕಿನ ವಾಸವು ಅವನಿಗೆ ಬೇಸರವಾಗಿದ್ದುದರಿಂದ ಸ್ಯಾಂಗಮನ್ (Sangmon) ನದಿಗೆ ಅನತಿದೂರದಲ್ಲಿದ್ದ ಒಂದು ಹಳ್ಳಿಗೆ ಹೋಗಬೇಕೆಂದು ಅವನು ನಿಶ್ಚಯಿಸಿದ್ದನು. ಈ ಮಧ್ಯೆ ಥಾಮಸ್ಸಿನ ಬಂಧುಗಳನೇಕರೂ ಆ ಹೊಸ ಊರಿನಲ್ಲಿ ವಾಸಮಾಡುತ್ತ ಅಲ್ಲಿಯ ಅನುಕೂಲ್ಯಗಳನ್ನೆಲ್ಲಾ ತಿಳಿಸಿ ಅಲ್ಲಿಗೆ ಹೊರಟುಬರುವಂತೆ ಅವನಿಗೆ ಕಾಗದಗಳನ್ನು ಬರೆಯಲಾರಂಭಿಸಿದ್ದರು. ಆದರೆ ಈ ಹೊಸಸ್ಥಳವು ಪಿಜನ್ ಕ್ರೀಕಿಗೆ ೨೦೦ ಮೈಲುಗಳ ದೂರ

ದಲ್ಲಿದ್ದಿತು. ಆ ಕಾಲದಲ್ಲಿ ಪ್ರಯಾಣಕ್ಕಿದ್ದ ಸೌಕರ್ಯಗಳನ್ನು ಆಗಲೇ ತಿಳಿಸಿರುವೆವು. ಇದ್ದ ಒಂದೆರಡು ರಸ್ತೆಗಳೂ ಕೂಡ ನೋಡಿಕೊಳ್ಳುವರಿಲ್ಲದೆ ಹಳ್ಳಕೊಳ್ಳಗಳಿಂದ ತುಂಬಿ ಕೊರಕಲುಬಿದ್ದು, ಪ್ರಯಾಣಕ್ಕೆ ಬಹಳ ತೊಂದರೆಯಾಗುತ್ತಿದ್ದಿತು. ಇದಲ್ಲದೆ ಈಚೆಗೆ ಇವರ ಸಂಸಾರವು ದೊಡ್ಡದಾಗಿ ಬೆಳೆದಿದ್ದುದರಿಂದ, ಪ್ರಯಾಣವು ಪೂರ್ವದಂತೆಯೇ ಸುಲಭಸಾಧ್ಯವಾಗಿರಲಿಲ್ಲ. ಥಾಮಸನು ಈ ತೊಂದರೆಗಳೊಂದಕ್ಕೂ ಲಕ್ಷ್ಯಮಾಡದೆ ಹೊರಡಲೇಬೇಕೆಂದು ನಿರ್ಧರಮಾಡಿ ಪಯಣಹೊರಟನು.

೫. ಥಾಮಸನೂ ಅವನ ಸಂಸಾರವೂ ಹೊಸ ಊರನ್ನು ಸೇರುವುದಕ್ಕೆ ಎರಡುವಾರಗಳು ಹಿಡಿದುವು. ಅಲ್ಲಿಗೆ ಹೋದಾಗ ಚಳಿಗಾಲವಾಗಿದ್ದಿತು. ಆದರೆ ಅವರು ಪೂರ್ವದಂತೆ ಕಷ್ಟಪಡಬೇಕಾಗಿರಲಿಲ್ಲ; ಅವರು ಇಳಿದುಕೊಳ್ಳುವುದಕ್ಕೆ ಅಕ್ಕಪಕ್ಕದ ಜನರು ಸ್ಥಳಮಾಡಿಕೊಟ್ಟು ಉಪಚರಿಸಿದರು. ಥಾಮಸನು ಅವರ ಸಹಾಯದಿಂದ ಒಂದು ಮನೆಯನ್ನು ಕಟ್ಟಿಕೊಂಡು ಅಲ್ಲಿ ಸಂಸಾರಮಾಡಲಾರಂಭಿಸಿದನು. ಏಬ್ರಹಾಮನಿಗೆ ಇಷ್ಟು ಹೊತ್ತಿಗೆ ೨೨ ವರ್ಷಗಳಾಗಿದ್ದುವು. ಆದುದರಿಂದ ತಾನಿನ್ನು ಹುಡುಗನಲ್ಲವೆಂದೂ ಇನ್ನುಮೇಲಾದರೂ ತನ್ನ ತಂದೆಯ ಸಂಪಾದನೆಯನ್ನೇ ನಂಬಿರದೆ ತನ್ನ ಜೀವನೋಪಾಯಮಾರ್ಗವನ್ನು ತಾನು ಹುಡುಕಬೇಕೆಂದುಕೊಂಡನು. ಹೀಗೆ ಅವನು ಯೋಚಿಸುತ್ತಿರುವಾಗಲೇ ಡೆಂಟನ್ 'ಆಫಟ್' (Denton Offat) ಎಂಬಾತನು ತಾನು ಕೆಲವು ಪದಾರ್ಥಗಳನ್ನು ನ್ಯೂ ಆರ್ಲಿಯನ್ಸಿಗೆ ತೆಗೆದುಕೊಂಡುಹೋಗಬೇಕೆಂದೂ ಆ ಸ್ಥಳದಪರಿಚಯವಿದ್ದ ಏಬ್ರಹಾಮನೂ ತನ್ನೊಡನೆ ಬರಬೇಕೆಂದೂ ಕೇಳಿಕೊಂಡುದರಿಂದ ಆದಕ್ಕೆ ಅವನು ಸಂತೋಷದಿಂದ ಒಪ್ಪಿಕೊಂಡನು. ಅವನ ಬಲತಾಯಿಯೂ ತಮ್ಮನೂ ಸಂಗಡ ಬರುತ್ತೇವೆಂದಾಗ ಏಬ್ರಹಾಮನಿಗೆ ಸಂತೋಷವು ಮತ್ತೂ ಹೆಚ್ಚಿತು. ಆದರೆ ಈ ಸಂತೋಷವು ಆ ಪಟ್ಟಣವನ್ನು ಸೇರಿದಮೇಲೆ ಇರಲಿಲ್ಲ.

೬. ಮೊದಲಿಗಿಂತಲೂ ಈಗ ಏಬ್ರಹಾಮನಿಗೆ ಹೆಚ್ಚು ವಿರಾಮ ದೊರೆತಿದ್ದುದರಿಂದ ಆ ಪಟ್ಟಣವನ್ನೆಲ್ಲಾ ನೋಡಲು ಅವಕಾಶವಾಯಿತು. ಹೀಗೆ ಪಟ್ಟಣವನ್ನೆಲ್ಲಾ ನೋಡುತ್ತ ಬರುವಾಗ ಗುಲಾಮರನ್ನು ಮಾರುತ್ತಿದ್ದ ಅಂಗಡಿಗಳ ಸಾಲುಗಳು ಅವನ ಕಣ್ಣಿಗೆ ಬಿದ್ದುವು. ಕೂಡಲೇ ಅವನ

ಮನೋವೃತ್ತಿಯು ಬೇರೆಯಾಯಿತು. ಅಲ್ಲಿ ಆ ಪ್ರಾಣಿಗಳು ಪಡುತ್ತಿದ್ದ ಕಷ್ಟವನ್ನೂ, ಅವರ ಯಜಮಾನರ ಕ್ರೌರ್ಯವನ್ನೂ ನೋಡಿ ಏಬ್ರಹಾಮ ನಿಗೆ ಬಹು ಸಂಕಟವಾಯಿತು. ಅಂತಹ ಸುಂದರವಾದ ಪಟ್ಟಣದಲ್ಲಿಯೂ ಆ ಬಗೆಯ ಹೇಯವಾದ ವ್ಯಾಪಾರಗಳು ನಡೆಯುತ್ತಿರುವುವೆಂದು ಅವನು ತಿಳಿದಿರಲಿಲ್ಲ. ನಿರ್ಮಲವಾದ ಸರಸ್ಸಿನಲ್ಲಿಯೂ ಘಾತುಕವಾದ ಮೊಸಳೆ ಗಳಿರಬಹುದೆಂಬುದು ಅವನಿಗೆ ಗೊತ್ತಾಯಿತು. ಆ ಗುಲಾಮರು ಬಂದುವೇಳೆ ಬಣ್ಣದಲ್ಲಿ ಕಪ್ಪಾಗಿದ್ದರೂ ಅವರಿಗೂ ಇತರಮನುಷ್ಯರ ಚಿತ್ತವೃತ್ತಿಯು (Feelings) ಇರುವುದೆಂದು ಭಾವಿಸಿಕೊಂಡು ಅವರಿಗೆ ಉಂಟಾಗಿದ್ದ ಅನ್ಯಾಯಕ್ಕಾಗಿ ಬಹುವ್ಯಥೆಪಟ್ಟನು. ತಾನು ದೊಡ್ಡವನಾದ ಮೇಲಾದರೂ ಗುಲಾಮರ ಪಕ್ಷವಾಗಿ ಹೊಡೆದಾಡಿ ಹೇಯವಾದ ಆ ಗುಲಾಮರ ವ್ಯಾಪಾರವನ್ನು ತಪ್ಪಿಸಬೇಕೆಂದು ಅವನು ನಿಶ್ಚಯಿಸಿಕೊಂಡನು

೭. ಆ ಊರಿನಲ್ಲಿ ಕೆಲಸವು ಮುಗಿದೊಡನೆಯೇ ಅವರು ತಮ್ಮ ಹಳ್ಳಿಗೆ ಹಿಂದಿರುಗಿ ಬಂದು ಹಿಂದಿನಂತೆ ತಮ್ಮ ಕೆಲಸಕಾರ್ಯಗಳಲ್ಲಿ ಆಸಕ್ತರಾಗಿರುತ್ತಿದ್ದರು. ಆದರೆ ಏಬ್ರಹಾಮನಿಗೆ ಆಗಾಗ ಆ ಗುಲಾಮರ ಅಂಗಡಿಗಳು ಕನಸಿನಲ್ಲಿಯೂ ಕಾಣಿಸಿಕೊಳ್ಳುತ್ತಾ ಅವನಿಗೆ ಬಹುಸಂಕಟವನ್ನುಂಟುಮಾಡುತ್ತಿದ್ದುವು. ಆದುದರಿಂದ ಅಹೋರಾತ್ರಿಗಳಲ್ಲಿಯೂ ಆ ಗುಲಾಮರ ಕಷ್ಟಗಳು ಅವನ ಕಣ್ಣಿಗೆ ಕಟ್ಟಿದಂತಾಗಿ, ತಾನು ಹೇಗೆ ಆ ಪ್ರಾಣಿಗಳಿಗೆ ಸ್ವಾತಂತ್ರ್ಯವನ್ನು ಸಂಪಾದಿಸಿ ಕೊಡಬಹುದೆಂದುಅವನು ನಿರಂತರವೂ ಯೋಚಿಸುತ್ತಿದ್ದನು. ಇದರಿಂದ ಅವನ ಚಿತ್ತವೃತ್ತಿಯು ದಿನದಿನಕ್ಕೂ ವ್ಯತ್ಯಾಸವಾಗುತ್ತಿದ್ದಿತು. ಪೂರ್ವದಂತೆ ಯಾವಾಗಲೂ ತನ್ನೊಡನಾಡಿಗಳೊಡನೆ ಬೆರೆತಿರದೆ ಅವನು ಸ್ವಲ್ಪಕಾಲ ಯಾವುದಾದರೊಂದು ಏಕಾಂತಸ್ಥಳದಲ್ಲಿ ಕುಳಿತು ಗಾಢಾಲೋಚನೆಯಲ್ಲಿ ಮಗ್ನನಾಗಿರುತ್ತಿದ್ದನು ; ಆದರೆ ತನ್ನಲ್ಲಿ ಉದಯಿಸಿದ್ದ ಮನೋಭಾವಗಳನ್ನು ಇತರರಿಗೆ ತೋರಿಸಬಾರದೆಂದು ಕೊಂಡು ಎಂದಿನಂತೆಯೇ ತನ್ನ ಕೆಲಸಕಾರ್ಯಗಳನ್ನು ಮಾಡುತ್ತಲೂ, ಕೊಂಚಕಾಲ ಒಡನಾಡಿಗಳೊಡನೆ ಆಟವಾಡುತ್ತಲೂ ಇದ್ದನು. ಅವನು ಆ ಆಲೋಚನೆಯನ್ನು ಬಿಡಬೇಕೆಂದು ಎಷ್ಟು ಪ್ರಯತ್ನಿಸಿದರೂ ಅದು ಇನ್ನೂ ಬಲವಾಗಿ ಅವನ ಹೃದಯದಲ್ಲಿ ಬೇರೂರುತ್ತಿದ್ದಿತು. ಗುಲಾಮರ ವಿಷಯ

ದಲ್ಲಿ ಇಂತಹ ಕನಿಕರಭಾವವು ಅದೃಷ್ಟವಶದಿಂದ ಇನ್ನೂ ಅನೇಕರಲ್ಲಿ ಉದ್ಭವಿಸುತ್ತಿದ್ದಿತು.

೮. ಹೀಗಿರುವಾಗ ಇವನ ಸ್ನೇಹಿತನಾದ ಡೆಂಟನ್ ಆಫಟ್ಟ್ (Denton Offat) ನ ತಂದೆಯು ಸ್ಪ್ರಿಂಗ್‌ಫೀಲ್ಡಿಗೆ ಹನ್ನೆರಡು ಮೈಲು ದೂರದಲ್ಲಿದ್ದ ನ್ಯೂ ಸೇಲಂ ಎಂಬ ಊರಿನಲ್ಲಿ ಒಂದು ಅಂಗಡಿಯನ್ನಿಟ್ಟನು. ನ್ಯೂ ಸೇಲಂ ಎಂಬುದು ಒಂದು ಹಳ್ಳಿಯಾದರೂ, ಸ್ಪ್ರಿಂಗ್‌ಫೀಲ್ಡಿಗಿಂತಲೂ ದೊಡ್ಡದಾಗಿಯೇ ಇದ್ದಿತು. ಅಲ್ಲಿ ಏಬ್ರಹಾಮನು ಆ ಅಂಗಡಿಯ ಗುಮಾಸ್ತನಾಗಿದ್ದುದರಿಂದ ಆ ಊರಿನವರೆಲ್ಲರೂ ಒಂದಲ್ಲ ಮತ್ತೊಂದು ತಡವೆಯಾದರೂ ಒಂದು ಏಬ್ರಹಾಮನೊಡನೆ ಮಾತನಾಡಿ ಹೋಗಬೇಕಾಗಿದ್ದಿತು. ಇದರಿಂದ ಲಿಂಕನನಿಗೆ ಅನೇಕರ ಪರಿಚಯವಾಗಲು ಕಾರಣವಾಯಿತು.

೯. ಲಿಂಕನ್ನನು ಯಾವಾಗಲೂ ಪ್ರಾಮಾಣಿಕತೆಯನ್ನು ಬಿಟ್ಟವನಲ್ಲ. ಈಗ ಕೈಕೊಂಡಿದ್ದ ಕೆಲಸದಲ್ಲಿ ಅಪ್ರಾಮಾಣಿಕನಾಗಲಿಕ್ಕೆ ಅವನಿಗೆ ಬಹು ಅವಕಾಶವಿದ್ದರೂ, ಅವನು ಅದಕ್ಕೆ ಮನಗೊಡಲಿಲ್ಲ. ಇತರರಿಗೆ ಮೋಸಮಾಡಿ ಬೇಕಾದಷ್ಟು ಹಣವನ್ನು ಸಂಪಾದಿಸುವುದಕ್ಕಿಂತಲೂ, ನ್ಯಾಯಮಾರ್ಗದಲ್ಲಿ ಸ್ವಲ್ಪವೇ ಹಣವನ್ನು ಅರ್ಜಿಸುವುದು ಉತ್ತಮವೆಂದರಿತಿದ್ದನು. ಅವನಲ್ಲಿ ಈ ಸದ್ಗುಣವು ಬಲವಾಗಿ ಬೇರೂರಿದ್ದುದರಿಂದ ಎಲ್ಲೆಲ್ಲಿಯೂ ಅವನಿಗೆ ಜನರ ಅನುರಾಗವು ಉಂಟಾಗಿದ್ದಿತು. ಆದುದರಿಂದ ಆ ಜನರು ತಮ್ಮ ಕೆಲಸಕಾರ್ಯಗಳೆಲ್ಲವನ್ನೂ ಮುಗಿಸಿಕೊಂಡು ಅವನಲ್ಲಿಗೆ ಬಂದು ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಲೂ ಅವನೊಡನೆ ವಿನೋದವಾಗಿ ಮಾತಾಡುತ್ತಲೂ ಇದ್ದರು. ಅವನ ಪ್ರಾಮಾಣಿಕತೆಯನ್ನು ತೋರಿಸುವ ಒಂದೆರಡು ನಿದರ್ಶನಗಳನ್ನು ಇಲ್ಲಿ ಹೇಳಬಹುದಾಗಿದೆ. ಒಂದುದಿನ ಒಬ್ಬ ಗಿರಾಕಿಯು ತಾನು ಕೊಡಬೇಕಾದುದಕ್ಕಿಂತಲೂ ಹೆಚ್ಚಾಗಿ ಹಣವನ್ನು ಕೊಟ್ಟು ಹೊರಟುಹೋಗಿದ್ದಳು. ಗಿರಾಕಿಗಳು ಬಹಳಮಂದಿ ಬಂದು ಅಂಗಡಿಯಲ್ಲಿ ಮುತ್ತಿಕೊಂಡಿದ್ದುದರಿಂದ ಅದನ್ನು ಥಟ್ಟನೆ ಕಂಡುಹಿಡಿಯಲಾಗಲಿಲ್ಲ. ವ್ಯಾಪಾರವೆಲ್ಲಾ ಮುಗಿದಬಳಿಕ ಆ ದಿನದ ಒಟ್ಟು ವ್ಯಾಪಾರವೆಷ್ಟೆಂದು ಲೆಕ್ಕಹಾಕಿ ನೋಡಿದಾಗ, ಆ ಗಿರಾಕಿಯ ತಪ್ಪು ಗೋಚರವಾಯಿತು. ಕೂಡಲೆ ಏಬ್ರಹಾಮನು ಆಕೆಯ ಸ್ಥಳವನ್ನು ವಿಚಾ

ರಿಸಿಕೊಂಡು ಹೋಗಿ ಆ ಹೆಚ್ಚು ಹಣವನ್ನು ಆ ಗಿರಾಕಿಗೇ ಸಲ್ಲಿಸಿ ಬಂದನು. ಮತ್ತೊಂದು ವೇಳೆ ಪ್ರಮಾದವಶದಿಂದ ಕಡಿಮೆಯ ತೂಕದ ಬಟ್ಟನ್ನು ಹಾಕಿ ಪದಾರ್ಥವನ್ನು ತೂಗಿಕೊಡಿಸಿದ್ದನು. ಈ ತಪ್ಪು ಗೊತ್ತಾದ ಕೂಡಲೆ ಕಡಿಮೆ ಯಾಗಿದ್ದ ಪದಾರ್ಥವನ್ನು ಆ ಗಿರಾಕಿಯ ಮನೆಗೆ ತೆಗೆಸಿಕೊಂಡುಹೋಗಿ ಕೊಟ್ಟು ಬಂದನು. ಇಂತಹ ಪ್ರಾಮಾಣಿಕತೆಯನ್ನು ಕಂಡು ಜನರು ಅವನಿದ್ದ ಅಂಗಡಿಗೇ ಬಂದು ತಮತಮಗೆ ಬೇಕಾಗಿದ್ದ ವಸ್ತುಗಳನ್ನು ಕೊಂಡು ಕೊಳ್ಳುತ್ತ ಇದ್ದರು. ಕೆಲವು ದಿನಗಳಲ್ಲೇ ಏಬ್ರಹಾಮನ ಪ್ರಖ್ಯಾತಿಯು ಹೆಚ್ಚುತ್ತ ಬಂದಿತು.

## ಐದನೆಯ ಪ್ರಕರಣ

### ಹಾಕನ ದಂಗೆ ; ಸೈನ್ಯಾಧಿಕಾರಿ.

೧. ಹೀಗೆ ಲಿಂಕನನು ಎಲ್ಲರಿಗೂ ಬೇಕಾದವನಾಗಿ ಬಹು ಪ್ರಾಮಾಣಿಕತನದಿಂದ ವ್ಯಾಪಾರಮಾಡುತ್ತಿದ್ದನು. ಆದರೂ ಆ ಅಂಗಡಿಯು ಯಜಮಾನನಿಗೆ ದುರದೃಷ್ಟವಶದಿಂದ ಲಾಭವಾಗುತ್ತಿರಲಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಲಾಭಕ್ಕಿಂತಲೂ ನಷ್ಟವೇ ದಿನ ದಿನಕ್ಕೂ ಹೆಚ್ಚುತ್ತಿದ್ದಿತು. ಕೆಲವು ದಿನಗಳಲ್ಲಿಯೇ ಸರಕೆಲ್ಲವೂ ಮುಗಿದುವು. ಹೊಸ ಸರಕನ್ನುತರಲು ದುಡ್ಡಿನ ಅಭಾವವಾಯಿತು ; ಕಡೆಗೆ ಅಂಗಡಿಯ ಬಾಗಿಲನ್ನು ಮುಚ್ಚಿಬಿಡಬೇಕಾಯಿತು. ಆಗ ಲಿಂಕನ್ನನು ಊರಿಗೆ ಹಿಂದಿರುಗಿ ಬಂದು ಬಿಟ್ಟು, ಮುಂದೆ ತಾನಾವ ಕೆಲಸವಮಾಡಬಹುದೆಂದು ಯೋಚಿಸುತ್ತಿದ್ದನು.

೨. ಇಷ್ಟರಲ್ಲಿಯೇ ಕೆಂಪು ಇಂಡಿಯನರಲ್ಲಿ ಒಂದು ಪಂಗಡದವರು ತಮ್ಮ ದಳಪತಿಯಾದ ಹಾಕ್ (Hawk) ಎಂಬುವನ ಕೈಕೆಳಗೆ ದಂಗೆ ಎದ್ದಿರುವರೆಂಬ ಸುದ್ದಿಯು ಹುಟ್ಟಿತು. ಬಿಳಿಯ ಜನರು ಮಿಸಿಸಿಪ್ಪಿ ನದಿಯನ್ನು ದಾಟಿ ರಾಜ್ಯಗಳನ್ನು ಸ್ಥಾಪಿಸಿದಂತೆಲ್ಲಾ ಕಾಡುಜನರು ಗೊಣಗುಟ್ಟುತ್ತ ಪಶ್ಚಿಮಭಾಗದ ದುರ್ಗಮವಾದ ಕಾಡುಗಳಿಗೆ ಒತ್ತಿಕೊಂಡು ಹೋಗುತ್ತಿದ್ದರು. ಬಿಳಿಯಜನರು ಅಷ್ಟಕ್ಕೇ ತೃಪ್ತರಾಗದೆ "ಮೆತ್ತಗಿದ್ದವರಿಗೆ ಮತ್ತೆರಡು ಗುದ್ದು" ಎಂಬ ಗಾದೆಗೆ ಸರಿಯಾಗಿ ಕಾಡುಜನರು ಹಿಮ್ಮೆಟ್ಟಿದಂತೆಲ್ಲಾ ತಾವು ಮುಂದುಮುಂದಕ್ಕೆ ನುಗ್ಗುತ್ತ ಕಾಡುಪ್ರದೇಶದ

ಮರಗಿಡಗಳನ್ನೆಲ್ಲಾ ಕಡಿದು ವಾಸಕ್ಕೆ ಅನುಕೂಲಮಾಡಿಕೊಳ್ಳುತ್ತಿದ್ದರು. ಕೆಂಪು ಇಂಡಿಯನರನ್ನು ಆ ದೇಶದಿಂದಲೇ ಹೊರಡಿಸಬೇಕೆಂಬುದೇ ಅವರ ಉದ್ದೇಶವಾಗಿದ್ದಿತು ಆದುದರಿಂದ ಅವರು ಕ್ರಮೇಣ ಕೆಂಪು ಇಂಡಿಯನರಿಗೆ ಹೆಚ್ಚು ಹೆಚ್ಚಾಗಿ ತೊಂದರೆಯನ್ನುಂಟುಮಾಡುತ್ತ ಬರುತ್ತಿದ್ದರು. ಬಿಳಿಯ ಜನರ ಮುಂದೆ ಆ ಕಾಡುಜನರು ನಿಲ್ಲಲಾರದೆ ಸೋತು ಬೆಟ್ಟ ಗುಡ್ಡಗಳಿಗೆ ಓಡುತ್ತಿದ್ದರು. ಕಡೆಗೆ ಬಿಳಿಯ ಜನರ ಪ್ರಮುಖರು ಆ ಕೆಂಪು ಇಂಡಿಯನರ ಅಧಿಪತಿಗಳನ್ನು ಕುರಿತು—"ಇಲ್ಲಿನಾಯ್ ಪ್ರದೇಶಕ್ಕೆ ಉತ್ತರದಲ್ಲಿರುವ ರಾಜ್ಯವನ್ನೆಲ್ಲಾ ನಮಗೆ ಕೊಟ್ಟು ಮಿಸಿಸಿಪ್ಪಿನದಿಗೆ ಪಶ್ಚಿಮದಲ್ಲಿರುವ ಭಾಗವನ್ನು ಸ್ವೀಕರಿಸಿ" ಎಂದರು. ಮುಕ್ಕಾಲುಪಾಲು ಇಂಡಿಯನರಿಗೆ ಇದು ಸಮ್ಮತವಾಗಿರಲಿಲ್ಲ; ಆದರೂ ಬಲಾತ್ಕಾರದಿಂದ ಅದಕ್ಕೆ ಒಪ್ಪಿದರು. ಇಷ್ಟಕ್ಕೇ ತೃಪ್ತರಾಗದೆ ಬಿಳಿಯ ಜನರು ಪುನಃ ಅವರನ್ನು ಕಾಡತೊಡಗಿದರು. ಆ ಕಾಡುಜನರಲ್ಲಿ ಸ್ಯಾಕ್(Sac) ಎಂಬ ಪಂಗಡದ ಅಧಿಪತಿಯಾದ ಹಾಕನು ಮಾತ್ರ ಅದಕ್ಕೊಪ್ಪಲಿಲ್ಲ. ಬಿಳಿಯ ಜನರು ತಮ್ಮ ಪ್ರದೇಶಗಳನ್ನೆಲ್ಲಾ ಆಕ್ರಮಿಸಿಕೊಂಡುಬಿಟ್ಟುದರಿಂದ ಅವರು ವಿಶ್ವಾಸಾರ್ಹರಲ್ಲವೆಂದೂ, ಅಂತಹವರನ್ನು ತಮ್ಮೊಡೆಯರೆಂದು ಒಪ್ಪಿಕೊಳ್ಳುವುದು ಅವಮಾನವೆಂದೂ ಹೇಳಿ ತನ್ನ ಪಂಗಡದವರನ್ನು ಹುರಿದುಂಬಿಸಿ ಅವನೂ ಯುದ್ಧಸನ್ನದ್ಧನಾದನು. ಅವನ ಜೊತೆಗೆ ಇನ್ನು ಕೆಲವು ಪಂಗಡದವರೂ ಸೇರಲು ಮತ್ತಷ್ಟು ಧೈರ್ಯದಿಂದ ಮಿಸಿಸಿಪ್ಪಿ ನದಿಯನ್ನು ದಾಟಿ ತಮಗೆ ಮೊದಲು ಸೇರಿದ್ದ ಪ್ರದೇಶಗಳನ್ನೆಲ್ಲಾ ಒಂದೊಂದಾಗಿ ಆಕ್ರಮಿಸಿಕೊಳ್ಳಲಾರಂಭಿಸಿದನು ಈ ಸಮಾಚಾರವು ದೇಶದಮೇಲೆಲ್ಲಾ ಹರಡಿ ಬಿಳಿಯ ಜನರಲ್ಲಿ ಎಲ್ಲರಿಗೂ ಭೀತಿಯನ್ನುಂಟುಮಾಡಿತು. ಎಲ್ಲೆಲ್ಲಿ ನೋಡಿದರೂ ಅವರು ಈ ದಂಗೆಯ ವಿಚಾರವನ್ನೇ ಮಾತನಾಡುತ್ತಿದ್ದರು. ಇದನ್ನು ಅಡಗಿಸುವುದಕ್ಕೆ ಬಿಳಿಯ ಸೈನ್ಯವೊಂದನ್ನು ಕೂಡಿಸಲು ಕೊಂಚತಡವಾಯಿತು ತಮಗೆ ತಡೆಯಾವುದೂ ಒದಗದಿದ್ದುದರಿಂದ ಆ ಕಾಡುಜನರು ಲೂಟಿಗೆ ಆರಂಭಿಸಿ, ಹೆಂಗಸರುಮಕ್ಕಳೆಂದು ನೋಡದೆ ತಮ್ಮ ಕೈಗೆ ಸಿಕ್ಕಿದವರನ್ನೆಲ್ಲಾ ಕೊಲ್ಲುತ್ತ ಊರುಗಳಿಗೆ ಬೆಂಕಿ ಹಚ್ಚಿ ದೇಶದ ಮೇಲೆಲ್ಲಾ ಬಹಳ ಹಾವಳಿಯನ್ನು ಮಾಡುತ್ತಿದ್ದರು.

೩. ಬಿಳಿಯ ಜನರು ಕೈಯಿಂದಾದಷ್ಟು ತೀವ್ರವಾಗಿ ಸೈನ್ಯವನ್ನು ಕೂಡಿಸುತ್ತಿದ್ದರು. ಅನೇಕಾನೇಕತರುಣವೀರರು ಸ್ವದೇಶರಕ್ಷಣೆಗೋಸುಗ ನಾನು ತಾನೆಂದು ಮುಂದೆ ಬಂದು ಸೈನ್ಯಕ್ಕೆ ಸೇರುತ್ತಿದ್ದರು. ಯಾವ ಉದ್ಯೋಗವೂ ಇಲ್ಲದೆ ಸುಮ್ಮನೆ ಕುಳಿತ್ತಿದ್ದ ಏಬ್ರಹಾಮನಿಗೆ ಈ ಸಮಾಚಾರವು ತಿಳಿಯುತ್ತಲೇ ಅವನು ಬಂದು ಸೈನ್ಯಕ್ಕೆ ಸೇರಿದನು. ಆರುಅಡಿ ನಾಲ್ಕು ಅಂಗುಲ ಎತ್ತರವಾಗಿದ್ದ ಏಬ್ರಹಾಮನು ತನ್ನ ಸೈನಿಕರಿಗಿಂತಲೂ ಎತ್ತರವಾಗಿಯೂ ದೃಢಾಂಗನಾಗಿಯೂ ಇದ್ದನು. ಅವನಿಗೆ ಬಾಲ್ಯದಿಂದಲೂ ಎಷ್ಟು ಶ್ರಮವಾದರೂ ಸಹಿಸುವುದು ಚೆನ್ನಾಗಿ ಅಭ್ಯಾಸವಾಗಿದ್ದಿತು. ಅವನು ಅಲ್ಲಲ್ಲಿ ತೋರಿಸಿದ ಪರಾಕ್ರಮದಿಂದ ಸ್ವಲ್ಪಕಾಲದಲ್ಲಿಯೇ ಸಣ್ಣ ದಳವೊಂದಕ್ಕೆ ಅಧಿಪತಿಯಾದನು. ಏಬ್ರಹಾಮನಿಗೆ ಬಾಲ್ಯದಿಂದಲೂ ಪರಚಿತ್ತಾಕರ್ಷಣ ಶಕ್ತಿಯು ಚೆನ್ನಾಗಿದ್ದಿತು. ಅವನು ಚತುರನಾಗಿದ್ದುದರಿಂದ, ಬರಿಯುಶಕ್ತಿಯಿಂದಲೇ ಪ್ರಯೋಜನವಿಲ್ಲವೆಂದರಿತು, ಯುಕ್ತಿಯಿಂದ ಅನೇಕ ಕಷ್ಟಕಾರ್ಯಗಳನ್ನು ಸಾಧಿಸುತ್ತಿದ್ದನು.

೪. ಏಬ್ರಹಾಮನು ತನ್ನ ಸೈನಿಕರನ್ನು ಬಹುವಾಗಿ ಪ್ರೀತಿಸುತ್ತಿದ್ದುದಲ್ಲದೆ, ಅವರಲ್ಲಿ ನಂಬಿಕೆಯನ್ನಿಟ್ಟಿದ್ದನು. ತಮಗಿಂತಲೂ ಕೀಳಾದವರನ್ನು ತಿರಸ್ಕಾರಭಾವದಿಂದ ಕಾಣುವುದು ಮನುಷ್ಯಜಾತಿಗೇ ಬಂದ ಗುಣವಾದರೂ ಏಬ್ರಹಾಮನಲ್ಲಿ ಮಾತ್ರ ಈ ದುರ್ಗುಣದ ಸುಳಿವು ಕೂಡ ಇರಲಿಲ್ಲ. ಆದರೆ ಸೈನಿಕರಿಗೆ ತನ್ನ ಆಂತರ್ಯವನ್ನು ತೋರಿಸದೆ ಮರೆಮಾಡಿದ್ದನು. ಮೇಲೆ ನೋಡುವುದಕ್ಕೆಮಾತ್ರ ಕೋಪಿಯಾಗಿಯೂ, ಖಂಡಿತವಾದಿಯಾಗಿಯೂ ಕಂಡುಬಂದರೂ, ಅವನ ಹೃದಯವು ದಯಾರಸಪರಿಪೂರ್ಣವಾಗಿದ್ದಿತು. ಮೊದಲು ಚೆನ್ನಾಗಿ ಯೋಚಿಸದೆ ಅವನು ಯಾವಕಾರ್ಯಕ್ಕೂ ಕೈಹಾಕುತ್ತಿರಲಿಲ್ಲ; ತನಗೆ ಯುಕ್ತವೆಂದು ತೋರಿದ ಕೆಲಸಕ್ಕೆ ತಾನೇ ಮುಂದೆ ನುಗ್ಗುತ್ತಿದ್ದನು. ಆದುದರಿಂದ ಅವನ ಸೈನಿಕರೆಲ್ಲರೂ ಅವನನ್ನು ನಂಬಿ ಎಲ್ಲಿಗಾದರೂ ಕಣ್ಣುಮುಚ್ಚಿಕೊಂಡು ಹೋಗಲು ಸಿದ್ಧರಾಗಿರುತ್ತಿದ್ದರು.

೫. ಲಿಂಕನನು ಮೊದಲಿನಿಂದಲೂ ನ್ಯಾಯಪಕ್ಷಪಾತಿಯಾಗಿದ್ದನು. ಒಂದಾನೊಂದು ಕಾಲದಲ್ಲಿ ಈ ನ್ಯಾಯಪಕ್ಷಪಾತವು ಇವನಿಗೆ ಅಪಾಯ

ವನ್ನು ತಂದಿದ್ದಿತು ಆ ಸಮಯದಲ್ಲಿ ಅಂಜಿ ಮಾತನಾಡಲು ಕೊಂಚ ಹಿಂದೆಗೆದು ಅತ್ತಿತ್ತನೋಡಿದ್ದರೆ ಇವನ ಪ್ರಾಣವುಳಿಯುವುದೇ ಸಂಶಯವಾಗಿದ್ದಿತು. ಒಂದು ದಿನ ಏಬ್ರಹಾಮ್ ಲಿಂಕನ್ನನು ತನ್ನ ಸೈನ್ಯದೊಡನೆ ಒಂದು ಸ್ಥಳದಲ್ಲಿ ಬೀಡುಬಿಟ್ಟುಕೊಂಡಿದ್ದನು ಹಸಿವಿನಿಂದ ಶುಷ್ಕಶರೀರಿಯಾದ ಕೆಂಪು ಇಂಡಿಯನನೊಬ್ಬನು ತೂರಾಡುತ್ತ ಆ ಪಾಳೆಯದೊಳಕ್ಕೆ ಬಂದನು. ರಾತ್ರಿಯಲ್ಲಿ ಅವನಿಗೆ ಅದು ತಮ್ಮ ವಿರೋಧಿಗಳ ಪಾಳೆಯವೆಂಬುದು ತಿಳಿಯಲಿಲ್ಲ. ಅವನನ್ನು ಕಂಡೊಡನೆಯೇ ಕಾವಲುಗಾರರೆಲ್ಲಾ ಅವನನ್ನು ಸುತ್ತಲೂ ಮುತ್ತಿಕೊಂಡು, ನಾನಾಪ್ರಶ್ನೆಗಳನ್ನು ಕೇಳಲಾರಂಭಿಸಿದರು ಪಾಪ! ಆಬಡಪ್ರಾಣಿಗೆ ಮಾತನಾಡುವುದಕ್ಕೆ ಕೂಡ ಶಕ್ತಿಯಿರಲಿಲ್ಲ ಅಷ್ಟುಹೊತ್ತಿಗೆ ಕೆಲವು ಸೈನಿಕರು ಅಲ್ಲಿಗೋಡಿಬಂದು ಅವನನ್ನು ಕಂಡೊಡನೆಯೇ ಕೋಪಗೊಂಡು "ಇವನು ಗೂಢಚಾರನು ; ಇವನನ್ನು ಕೊಲ್ಲಿರಿ" ಎಂದು ಕೂಗಿದರು ಇನ್ನು ಕೆಲವರು ಬಂದೂಕವನ್ನೆತ್ತಿಹಿಡಿದು ಕೊಲ್ಲುವುದಕ್ಕೆ ಯತ್ನಿಸುತ್ತಿದ್ದರು. ಇದನ್ನು ನೋಡಿ ಆ ಪ್ರಾಣಿಯು ನಡುಗುತ್ತ ತನ್ನ ಆಯುಸ್ಸು ಅಂದಿಗೇ ಮುಗಿಯಿತೆಂದರಿತು ತನ್ನ ಹತ್ತಿರದ ಕಾಗದವೊಂದನ್ನು ತೆಗೆದು ಆ ಸೈನಿಕರ ಕೈಗೆ ಕೊಟ್ಟನು ಅದನ್ನು ಬಿಚ್ಚಿನೋಡಲು ಅದರಲ್ಲಿ ಹೀಗೆ ಬರೆದಿದ್ದಿತು :—

"ಈ ಕಾಗದವನ್ನು ತರುವ ಮನುಷ್ಯನು ನನಗೆ ಬೇಕಾದವನು. ಇವನೆಲ್ಲಿಗೆ ಹೋಗಬೇಕೆಂದರೂ ಅಡ್ಡಿಪಡಿಸದೆ ಬಿಟ್ಟುಬಿಡಬೇಕು

ಜನರಲ್ ಕಾಸ್"

೬. ಈ ಕಾಗದವನ್ನು ನೋಡಿದೊಡನೆಯೆ ಆ ಸೈನಿಕರ ಕೋಪಕ್ಕೆ ಮೇರೆ ಇಲ್ಲವಾಯಿತು. ಉರಿಯುವ ಬೆಂಕಿಗೆ ತುಪ್ಪ ಹಾಕಿದಂತಾಯಿತು. "ಏನು! ಸುಮ್ಮನೆ ಬಿಟ್ಟುಬಿಡುವುದೇ? ಈ ಕಾಗದವನ್ನು ಎಂದಿಗೂ ನಮ್ಮ ಜನರಲ್ ಬರೆದಿಲ್ಲ. ಇದೆಲ್ಲಾ ಸ್ಪಷ್ಟಮೋಸ" ಎಂದು ಕೂಗಿ ಎಲ್ಲರೂ ತಮ್ಮ ಬಂದೂಕಗಳನ್ನೆತ್ತಿಹಿಡಿದು ಗುರಿಕಟ್ಟಿ ಹಾರಿಸುವುದರಲ್ಲಿದ್ದರು. ಇಷ್ಟರಲ್ಲಿಯೇ ಲಿಂಕನನು ಅವರ ಮಧ್ಯದಲ್ಲಿ ಬಂದು ನಿಂತು "ಸೈನಿಕರೇ! ಹೀಗೆ ಮಾಡಬಾರದು. ಆ ಬಡವನನ್ನೆಂದಿಗೂ ಕೊಲ್ಲಬೇಡಿ" ಎಂದನು. ಅವನೊಂದು ನಿಮಿಷ ತಡಮಾಡಿದ್ದರೆ ಅಪಾಯವುಂಟಾಗುವಸಂಭವವಿದ್ದಿತು.

೭ ಇದನ್ನು ಕೇಳುತ್ತಲೇ ಸೈನಿಕರ ಕೋಪವೆಲ್ಲಾ ಲಿಂಕನ್ನಿನ ಮೇಲೆ ತಿರುಗಿತು ಅವರಲ್ಲೊಬ್ಬನು ಏಬ್ರಹಾಮನನ್ನು ಕುರಿತು "ಲಿಂಕನ್! ಇದು ಶುದ್ಧ ಹೇಡಿತನ" ಎಂದನು ಲಿಂಕನ್ನನು ತನ್ನ ಕೈಗಳನ್ನು ಸರಿಮಾಡಿಕೊಳ್ಳುತ್ತಾ "ನಾನು ಹೇಡಿಯೆಂದಾರಾದರೂ ತಿಳಿದಿದ್ದರೆ ಮುಂದೆ ಬಂದು ಪರೀಕ್ಷಿಸಬಹುದು" ಎಂದನು. ಆಗ ಅವರಲ್ಲಿ ಒಬ್ಬನು ನೀನು ನಮಗಿಂತಲೂ ಎತ್ತರವಾಗಿಯೂ, ಬಲವಾಗಿಯೂ ಇರುವೆ" ಎಂದನು.

"ಆದರೇನು? ನಿಮಗೆ ಬೇಕಾದ ಆಯುಧಗಳವೆಯಲ್ಲ! ಅವುಗಳನ್ನು ತಗೆದುಕೊಂಡು ಬರಬಹುದು" ಎಂದು ಲಿಂಕನ್ನನು ಹೇಳಿದನು.

ಕೊಂಚಹೊತ್ತು ಎಲ್ಲೆಲ್ಲಿಯೂ ನಿಶ್ಶಬ್ದವಾಗಿದ್ದಿತು; ಕೋಪಾವಿಷ್ಟರಾಗಿದ್ದ ಸಿಪಾಯಿಗಳು ಒಬ್ಬರ ಮುಖವನ್ನೊಬ್ಬರು ನೋಡಲಾರಂಭಿಸಿದರು. ಅವರಿಗೊಂದು ಬಗೆಯ ಭಯವೂ ನಾಚಿಕೆಯೂ ಏಕಕಾಲದಲ್ಲಿ ಉಂಟಾದುವು. ತಮ್ಮ ಆಟವು ಏಬ್ರಹಾಮನ ಮುಂದೆ ನಡೆಯದೆಂದು ತಿಳಿದು ತಮ್ಮ ಆಯುಧಗಳನ್ನು ನೆಲದಮೇಲಿಟ್ಟು ಲಿಂಕನ್ನಿನ ಕ್ಷಮೆಯನ್ನು ಬೇಡಿಕೊಂಡರು. ಈ ಸಮಯದಲ್ಲಿ ಇನ್ನಾರಾದರೂ ಆಗಿದ್ದರೆ ಪ್ರಾಣಾಪಾಯವನ್ನು ತಂದುಕೊಳ್ಳುತ್ತಿದ್ದರು. ಲಿಂಕನ್ನಿಗೆ ಯಾವಯಾವ ಸಮಯದಲ್ಲಿ ಹೇಗೆ ಮಾತನಾಡಬೇಕೆಂಬುದು ತಿಳಿದಿದ್ದಿತು. ಆದುದರಿಂದ ಅವನು ಅಮೇರಿಕದ ಸಂಯುಕ್ತಸಂಸ್ಥಾನದ ಅಧ್ಯಕ್ಷನಾದಾಗ ಪ್ರಾಪ್ತವಾದ ಅನೇಕ ಕಷ್ಟಗಳಿಂದ ಪಾರಾಗಲು ಸಹಾಯವಾಯಿತು.

೮. ಹೀಗೆ ಅನೇಕ ದಿನಗಳು ಕಳೆದುವು. ಸೋಮಾರಿಗಳಾಗಿ ತಿರಿದು ತಿಂದು ಕೊಬ್ಬಿದ್ದ ಸೈನಿಕರ ಹಾವಳಿಯನ್ನು ತಡೆಯುವುದು ಕಷ್ಟವಾಯಿತು ಮೇಲಿನ ಅಧಿಕಾರಿಗಳಾದರೂ ಮುಂದಕ್ಕೆ ಹೋಗಿ ಯುದ್ಧಮಾಡಲು ಅಪ್ಪಣೆ ಕೊಡಲಿಲ್ಲ. ಸೈನಿಕರಿಗೆ ಕಾದುಕಾದು ಬೇಸರವಾಗಿದ್ದಿತು. ಅವರೆಲ್ಲರೂ ಕೆಲವುಕಾಲದವರೆಗೆ ಮಾತ್ರ ಯುದ್ಧಮಾಡುತ್ತೇವೆಂದು ಬಂದಿದ್ದರು. ಆದುದರಿಂದ ಆ ಅವಧಿಯು ಕಳೆದೊಡನೆಯೇ ತಮ್ಮನ್ನು ಹಿಂದಕ್ಕೆ ಕಳುಹಿಸಬೇಕೆಂದು ಲಿಂಕನ್ನನ್ನು ಕೇಳಿಕೊಂಡರು. ಇನ್ನು ಅವರನ್ನಿಟ್ಟುಕೊಂಡಿರುವುದು ಒಳ್ಳೆಯದಲ್ಲವೆಂದರಿತು ಲಿಂಕನನು ಅವರೆಲ್ಲರನ್ನೂ ಮನೆಗೆ ಕಳುಹಿಸಿ ತಾನು ಬೇರೊಂದು ಸೈನ್ಯಕ್ಕೆ ಸೇರಿದನು.

೯ ಲಿಂಕನ್ನನು ಯುದ್ಧದಲ್ಲಿ ಶತ್ರುಗಳೊಡನೆ ತಾನೇ ಹೋರಾಡದಿದ್ದರೂ, ಪಾಳೆಯದಲ್ಲಿದ್ದುಕೊಂಡು ಯುದ್ಧದಲ್ಲಿ ಗಾಯಹೊಂದಿದ ಸೈನಿಕರನ್ನು ಉಪಚರಿಸುತ್ತಲೋ ಯುದ್ಧಮಾಡುತ್ತಿದ್ದ ಸೈನಿಕರಿಗೆ ಬೇಕಾದ ಪದಾರ್ಥಗಳನ್ನು ಒದಗಿಸುತ್ತಲೋ ಇದ್ದನು. ಅನಾಗರಕರಾದ ಕಾಡುಜನರು ಬಿಳಿಯಜನರ ಇದಿರಿಗೆ ಬಹುಕಾಲ ನಿಲ್ಲಲಾರದೆಹೋದರು. ದಿನದಿನಕ್ಕೆ ಅವರ ಹಾವಳಿಯು ಕಡಿಮೆಯಾಗುತ್ತ, ಅವರ ಶಕ್ತಿಯು ಕುಂದುತ್ತಿದ್ದಿತು. ಯುದ್ಧವು ಮೊದಲಿನಂತೆ ಒಂದೇ ಸಮವಾಗಿ ನಡೆಯದಿದ್ದರೂ ಅಲ್ಲಲ್ಲಿ ಸಣ್ಣಪುಟ್ಟ ಕದನಗಳೇನೋ ನಡೆಯುತ್ತಿದ್ದುವು. ಆ ದಂಗೆಕೋರರ ಅಧಿಪತಿಯಾದ ಹಾಕನು ಇನ್ನೂ ಸೆರೆಸಿಕ್ಕಿರಲಿಲ್ಲ. ಅವನಾದರೋ ಕೊಂಚವಾದರೂ ಹಿಂದೆಗೆಯದೆ ಮೊದಲಂತೆಯೇ ಬಿಳಿಯ ಜನರಿಗೆ ಕಿರುಕುಳವನ್ನುಂಟುಮಾಡುತ್ತಿದ್ದನು. ಅವನ ಸೈನ್ಯವು ದಿನದಿನಕ್ಕೆ ಕ್ಷಯಿಸುತ್ತಿದ್ದಿತು ; ಹೊಸಬರಾರೂ ಸೈನ್ಯಕ್ಕೆ ಸೇರುತ್ತಿರಲಿಲ್ಲ. ಈ ಸಂಗತಿಯನ್ನರಿತ ಬಿಳಿಯ ಜನರು ನಾನಾ ಕಡೆಯಲ್ಲಿ ಮುತ್ತಿಕೊಂಡು ಅವನನ್ನು ಸೆರೆಹಿಡಿದರು. ಬಿಳಿಯ ಸೈನಿಕರೆಲ್ಲರೂ ಬಹು ಸಂತೋಷಪಟ್ಟು ಅವನನ್ನು ಜೊತೆಯಲ್ಲಿ ಕರೆತಂದು ಆಗ ಸೇನಾಧ್ಯಕ್ಷನಾಗಿದ್ದ ಜಾಕ್ಸನ್ನಿ (Jackson) ನ ಮುಂದೆ ನಿಲ್ಲಿಸಿದರು. ಆ ಕೆಂಪು ಇಂಡಿಯನನು ಕೊಂಚವಾದರೂ ಹೆದರದೆ ಜಾಕ್ಸನನ್ನು ಕುರಿತು—"ನಿನ್ನಂತೆಯೇ ನಾನೂ ಮನುಷ್ಯನು. ನಾನೆಂದಿಗೂ ನಿನ್ನನ್ನಾಗಲೀ ನಿನ್ನ ಜನರನ್ನಾಗಲಿ ಗೆಲ್ಲಬೇಕೆಂದಿರಲಿಲ್ಲ. ನೀವು ನಮಗೆ ಮಾಡಿದ ಅಪಕಾರಕ್ಕೆ ತಕ್ಕ ಶಿಕ್ಷೆಯನ್ನು ಮಾಡುವುದೇ ನನ್ನ ಉದ್ದೇಶವಾಗಿದ್ದಿತು. ನಾನೂ ಸಹಿಸಬಹುದಾದ ಕಷ್ಟಗಳನ್ನೆಲ್ಲಾ ಸಹಿಸಿದೆನು. ಕೊನೆಗೆ ಮಿತಿಮೀರಿತು. ಇನ್ನು ಕೆಲವುದಿನಗಳು ನಾನು ಹಾಗೆಯೇ ಇದ್ದಿದ್ದರೆ, ನನ್ನ ಜನರೆಲ್ಲರೂ 'ಹಾಕನು ಶುದ್ಧ ಹೇಡಿ ; ಮುದುಕನಾಗಿ ಹೋದನು. ಇನ್ನು ಅವನಿಂದ ಕೆಲಸಕಾರ್ಯಗಳು ನಡೆಯುವುದಿಲ್ಲ" ಎಂದು ಹೇಳುತ್ತ ನನ್ನನ್ನು ಹಿಯಾಳಿಸುತ್ತಿದ್ದರು. ಈ ತಿರಸ್ಕಾರವನ್ನು ತಪ್ಪಿಸಿಕೊಳ್ಳುವುದಕ್ಕೋಸುಗ ನಾನು ಯುದ್ಧಕ್ಕೆ ಪ್ರಯತ್ನಿಸಬೇಕಾಯಿತೇ ಹೊರತು ಬೇರೆ ಯಾವ ಲಾಭಕ್ಕಾಗಿಯೂ ಅಲ್ಲ; ಯಾವ ತಪ್ಪನ್ನೂ ಮಾಡಿರುವುದಿಲ್ಲ." ಎಂದು ಹೇಳಿದನು. ಜಾಕ್ಸನ್ನನು ಅವನ ಧೈರ್ಯಕ್ಕೆ ಅತ್ಯಾಶ್ಚರ್ಯಪಟ್ಟನು.

೧೦. ಹಾಕನು ಸೆರೆ ಸಿಕ್ಕಿದೊಡನೆಯೇ ಯುದ್ಧವು ಮುಗಿಯಿತು. ಸೈನಿಕರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದರು. ಲಿಂಕನ್ನನೂ ನ್ಯೂ ಸೇಲಮ್ಮಿಗೆ ಬಂದುಬಿಟ್ಟನು. ಈ ಯುದ್ಧದಿಂದ ಅವನಿಗೆ ರಾಜಧರ್ಮ ಸೇವಾಧರ್ಮಗಳೆರಡೂ ತಿಳಿದಂತಾಯಿತು.

## ಆರನೆಯ ಪ್ರಕರಣ.

### ಚುನಾವಣೆ.

೧ ಸಂಯುಕ್ತಸಂಸ್ಥಾನಗಳ ಮೂಲನ್ಯಾಯವಿಧಾಯಕಸಭೆಗೆ ಪ್ರತಿಯೊಂದು ಸಂಸ್ಥಾನವೂ ತನ್ನ ಜನಸಂಖ್ಯೆಗೆ ತಕ್ಕಷ್ಟು ಮಂದಿ ಪ್ರತಿನಿಧಿಗಳನ್ನು ಕಳುಹಿಸುತ್ತಿದ್ದಿತು. ಈ ಪ್ರತಿನಿಧಿಗಳ ಚುನಾವಣೆಯು ಎರಡು ವರುಷಗಳಿಗೊಂದಾವೃತ್ತಿ ನಡೆಯುತ್ತಿದ್ದಿತು. ಯುದ್ಧಕ್ಕೆ ಹೋಗುವುದಕ್ಕೆ ಮುಂಚೆ ಲಿಂಕನ್ನನು ಸ್ಯಾಂಗ್‌ಮನ್ (Sangmon) ಸಂಸ್ಥಾನದ ಪರವಾಗಿ ಆ ಸಭೆಗೆ ಪ್ರತಿನಿಧಿಯಾಗಿ ಹೋಗಲು ತನ್ನ ಹೆಸರನ್ನು ಕೊಟ್ಟಿದ್ದನು. ಆ ವರುಷ ಹದಿಮೂರು ಜನರು ಚುನಾವಣೆಗೆ ನಿಂತಿದ್ದರು. ಆ ಚುನಾವಣೆಯು ಆಗಸ್ಟು ತಿಂಗಳಲ್ಲಿ ನಡೆದು ನಾಲ್ವರನ್ನು ಮಾತ್ರ ಆರಿಸಿ ಕಳುಹಿಸುತ್ತಿದ್ದರು. ಯುದ್ಧದಿಂದ ಹಿಂದಿರುಗಿ ಬಂದ ಮೇಲೆ ಬಹುಕಾಲ ವಿರಾಮವಿರಲಿಲ್ಲವಾದುದರಿಂದ ಇತರರಂತೆಯೇ ತಾನೂ ದೇಶದ ಮೇಲೆಲ್ಲಾ ಸುತ್ತಿ ಜನರನ್ನು ತನ್ನ ಕಡೆಗೆ ಮಾಡಿಕೊಳ್ಳಲು ಲಿಂಕನ್ನಿಗೆ ಅವಕಾಶವಿರಲಿಲ್ಲ. ಆದುದರಿಂದ ತನ್ನೂರಿನ ಜನರಿಗೆ ಮಾತ್ರ ಒಂದು ಸಣ್ಣ ಉಪನ್ಯಾಸವನ್ನು ಮಾಡಿ ತನ್ನಭಿಪ್ರಾಯಗಳನ್ನೂ ತಾನು ಮಾಡಬೇಕೆಂದಿದ್ದ ಕಾರ್ಯಗಳನ್ನೂ ಸೂಕ್ಷ್ಮವಾಗಿ ನಿರೂಪಿಸಿದನು. ಏಬ್ರಹಾಮನ ಸುಗುಣಾತಿಶಯವನ್ನರಿತ ಕೆಲವರು ಮಾತ್ರ, ಆ ಕಾರ್ಯವು ತಮ್ಮದೋ ಎಂಬಂತೆ ಆ ಸಂಸ್ಥಾನದಲ್ಲೆಲ್ಲಾ ತಿರುಗುತ್ತ ಜನರಿಗೆಲ್ಲರಿಗೂ ಲಿಂಕನ್ನನ್ನೇ ಆರಿಸಬೇಕೆಂದು ಹೇಳುತ್ತ ಬಂದರು.

೨. ಆ ಕಾಲದಲ್ಲಿ ದೇಶದಲ್ಲಿ ಎರಡು ಮುಖ್ಯ ಪಂಗಡಗಳಿದ್ದುವು. ಒಂದು ಪಂಗಡದವರಿಗೆ ಡಿಮೊಕ್ರಾಟ್ಸ್ (Democrats)—ಪ್ರಜಾಸತ್ತಾವಾ

ದಿಗಳು-ಎಂದೂ, ಮತ್ತೊಂದು ಪಂಗಡಕ್ಕೆ ಹ್ವಿಗ್ಸ್ (Whigs)-ಶ್ರೀಮಂತಸ ತ್ತಾವಾದಿಗಳು-ಎಂದೂ ಹೆಸರು. ಅಂಡ್ರುಜಾಕ್ಸನ್ನ(Andrew Jackson) ನು ಮೊದಲನೆಯ ಪಂಗಡದ ನಾಯಕನಾಗಿಯೂ, ಹೆನ್ರಿ ಕ್ಲೇ (Henry-Clay) ಯು ಎರಡನೆಯದರ ಪ್ರಮುಖನಾಗಿಯೂ ಇದ್ದರು. ಲಿಂಕನ್ನನು ಬಾಲ್ಯದಿಂದಲೂ ಹೆನ್ರಿ ಕ್ಲೇಯ ಅಸಾಧಾರಣವಾದ ಬುದ್ಧಿಶಕ್ತಿಯ ವಿಷಯ ವಾಗಿ ಕೇಳಿಯೂ, ಅವನ ಉಪನ್ಯಾಸಗಳನ್ನೋದಿಯೂ ಅವನ ಅಭಿಪ್ರಾ ಯಗಳನ್ನು ಬಹಳವಾಗಿ ಮೆಚ್ಚಿಕೊಂಡಿದ್ದನು. ಅವನ ಮನಸ್ಸು ಹ್ವಿಗ್ ಪಂಗಡದ ಕಡೆಗೇ ಎಳೆಯುತ್ತಿದ್ದಿತು. ಆದುದರಿಂದ ಈ ಸಮಯದಲ್ಲಿ ಲಿಂಕನ್ನನು ಹ್ವಿಗ್ ಪಂಗಡದ ಪರವಾಗಿ ಚುನಾವಣೆಗೆ ನಿಂತನು.

೩. ಸ್ವರಾಷ್ಟ್ರಯುದ್ಧವು (Civil War) ಇನ್ನೂ ಬಹುದೂರ ವಿದ್ದಿತಾದರೂ, ಆಗಾಗ ದಾಕ್ಷಿಣಾತ್ಯರಿಗೂ ಔತ್ತರೇಯರಿಗೂ ಅಂತಃ ಕಲಹಗಳು ತಲೆದೋರುತ್ತಲೇ ಇದ್ದುವು. ಉತ್ತರದಲ್ಲಿದ್ದ ರಾಜ್ಯಗಳು ನಾಗರಕತೆಗೆ ನೆಲೆಯಾಗಿಯೂ, ಕೈಗಾರಿಕೆ ಮೊದಲಾದ ಕುಶಲವಿದ್ಯೆಗಳಿಗೆ ತವರೂರಾಗಿಯೂ ಇದ್ದುವು ಅಲ್ಲಿಯ ಜನರು ತಮ್ಮ ದೇಶಕ್ಕೆ ಬೇಕಾದ ಸಾಮಾನುಗಳನ್ನೆಲ್ಲಾ ತಾವೇ ಒದಗಿಸಬಲ್ಲವರಾಗಿದ್ದುದರಿಂದ, ಇತರ ದೇಶ ದವರು ತಮ್ಮ ದೇಶಕ್ಕೆ ಪದಾರ್ಥಗಳನ್ನು ಕಳುಹಿಸುವುದನ್ನು ತಪ್ಪಿಸ ಬೇಕೆಂದು ಬಗೆದು ಆಮದು ಪದಾರ್ಥಗಳ (Imports) ಮೇಲೆ ಸುಂಕ ವನ್ನು ಹಾಕಿದರು. ಇದಕ್ಕೆ ಇತರ ದೇಶದವರು ತಮ್ಮೊಡನೆ ಪೈಪೋಟಿ ಮಾಡುವುದನ್ನು ತಪ್ಪಿಸಬೇಕೆಂಬುದೇ ಅವರ ಉದ್ದೇಶ. ಕೃಷಿಯಿಂದಲೇ ಜೀವಿಸುತ್ತಿದ್ದ ದಾಕ್ಷಿಣಾತ್ಯರು ಇದಕ್ಕೆ ಒಪ್ಪಲಿಲ್ಲ. ಇತರ ದೇಶದ ಪದಾರ್ಥಗಳು ತಮ್ಮ ದೇಶಕ್ಕೆ ಬಾರದೆಹೋದರೆ ತಮ್ಮ ದೇಶದ ವ್ಯಾಪಾ ರವೆಲ್ಲವೂ ಔತ್ತರೇಯರ ಕೈಯಲ್ಲಿ ನಿಂತು ಪದಾರ್ಥಗಳ ಬೆಲೆ ಯನ್ನು ಅವರ ಮನಸ್ಸಿಗೆಬಂದಂತೆ ಹೆಚ್ಚಿಸಬಹುದೆಂದೂ ಅದರಿಂದ ತಮಗೆ ಸರ್ವವಿಧದಲ್ಲಿಯೂ ಅನಾನುಕೂಲ್ಯವಾಗಬಹುದೆಂದೂ, ತಮ್ಮ ದ್ರವ್ಯವೆಲ್ಲ ವೂ ಔತ್ತರೇಯರ ಬೊಕ್ಕಸಕ್ಕೆ ಬೀಳುವುದೆಂದೂ ಯೋಚಿಸಿ ಆ ತೆರಿಗೆ ಯನ್ನು ತಪ್ಪಿಸಬೇಕೆಂದುಕೊಂಡರು. ಆಮದುಪದಾರ್ಥಗಳಮೇಲೆ ಔತ್ತ ರೇಯರು ಸರ್ಕಾರದ ಸಹಾಯದಿಂದ ಹಾಕಿದ್ದ ತೆರಿಗೆಯನ್ನು ತೆಗೆಯದಿದ್ದರೆ

ದಕ್ಷಿಣರಾಜ್ಯಗಳೆಲ್ಲವೂ ಪ್ರತ್ಯೇಕವಾಗುವೆವೆಂದು ಹೇಳಿದುವು. ಇದರಿಂದ ಈ ಎರಡು ಪಂಗಡಗಳಿಗೂ ಮನಸ್ಸು ಮುರಿಯಿತು.

೪. ಈ ವೈಮನಸ್ಯವು ದಿನದಿನಕ್ಕೂ ಪ್ರಬಲಿಸುತ್ತ ದೊಡ್ಡ ದ್ವೇಷವಾಗಿ ಬೆಳೆಯಿತು. ೧೮೩೨ನೆಯ ಇಸವಿಯಲ್ಲಿ ಸುಂಕವನ್ನು ಕೂಡಲೇ ಕಡಿಮೆಮಾಡದಿದ್ದರೆ ತಾನು ಬೇರೆಯಾಗುವೆನೆಂದು ದಕ್ಷಿಣಕಾರೊಲೀನವು ಹೇಳಿಬಿಟ್ಟಾಗ, ಸರ್ಕಾರದವರ ತೊಂದರೆ ಮೊದಲಾಯಿತು. ಇದುವರೆಗೂ ಅವರು ಈ ವಿಷಯವನ್ನಾಲೋಚಿಸಿಯೇ ಇರಲಿಲ್ಲ. "ಅಕ್ಕಿಯಮೇಲಾಸೆ ನೆಂಟರಮೇಲೆ ಪ್ರೀತಿ" ಎಂಬಂತೆ ಸರ್ಕಾರದವರಿಗೆ ಸಂಸ್ಥಾನಗಳೆಲ್ಲವೂ ಒಟ್ಟಾಗಿರಬೇಕೆಂದು ಇಷ್ಟ; ಸುಂಕವನ್ನು ಹಿಂದಿನಂತೆಯೇ ಎತ್ತಬೇಕೆಂದೂ ಆಸೆ. ೧೭೭೬ನೆಯ ವರ್ಷದಲ್ಲಿ ಈ ಸಂಸ್ಥಾನಗಳೆಲ್ಲವೂ ಒಟ್ಟುಸೇರಿ ಇಂಗ್ಲೆಂಡು ದೇಶದೊಡನೆ ಹೋರಾಡಿ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡು ತಮ್ಮದೊಂದು ಬಗೆಯ ರಾಜ್ಯಭಾರಕ್ರಮವನ್ನು ಸ್ಥಾಪಿಸಿಕೊಂಡಿದ್ದುವು. ಈಗ ಆ ಸಂಸ್ಥಾನಗಳ ಕಟ್ಟು ಒಡೆದುಹೋಗುವ ಸಮಯವೊದಗಿತು. ಸುಂಕವನ್ನು ಕಡಿಮೆಮಾಡದಿದ್ದರೆ ತಾನು ಸಂಸರ್ಗವನ್ನು ಬಿಟ್ಟುಹೋಗುವುದೇ ಖಂಡಿತವೆಂದು ದಕ್ಷಿಣಕಾರೊಲೀನವು ಮತ್ತೆಮತ್ತೆ ಹೇಳಿತು. ಇಂತಹ ಸಮಯದಲ್ಲಿ ಹೆನ್ರಿ ಕ್ಲೇಯು ಮುಂದೆಬಂದು ಸುಂಕಗಳನ್ನು ಕ್ರಮವಾಗಿ ಕಡಿಮೆಮಾಡಲಾಗುತ್ತದೆಂದು ಹೇಳಿ ಸಂಸರ್ಗಕ್ಕೆ ಉಂಟಾಗಿದ್ದ ವಿಪತ್ತನ್ನು ತಪ್ಪಿಸಿದುದಲ್ಲದೆ, ಎರಡು ಪಂಗಡಗಳಿಗೂ ಸಂಧಿಯನ್ನು ಮಾಡಿಸಿದನು. ಪಕ್ಷಾಪಕ್ಷ ಮನಸ್ತಾಪವೆಲ್ಲಾ ನಿಂತಂತಾಗಿ ದೇಶದಲ್ಲೆಲ್ಲಾ ಶಾಂತಿಯು ನೆಲೆಸಿತು.

೫. ಏಬ್ರಹಾಮನು ಆ ದೇಶದಲ್ಲಿ ನಡೆಯುತ್ತಿದ್ದ ವ್ಯಾಪಾರಗಳನ್ನು ಬಹು ಕುತೂಹಲದಿಂದ ಪರಿಶೀಲಿಸುತ್ತಿದ್ದನು. ನಿರ್ಮಲಾಕಾಶದಲ್ಲಿ ಸಣ್ಣ ಮೋಡಗಳೆದ್ದು ಅನೇಕ ದೊಡ್ಡವಾಗಿ ಬೆಳೆದು ಕೊನೆಗೆ ದಿನಮಣಿಯನ್ನು ಆಚ್ಛಾದಿಸಲು ಮಾಡಿದ ಯತ್ನವನ್ನೂ, ಸಕಾಲದಲ್ಲುಂಟಾದ ಬಿರುಗಾಳಿಯಿಂದ ಆ ಮೋಡಗಳೆಲ್ಲವೂ ಚೆದರಿಹೋಗಿ ಸೂರ್ಯನು ನಿರಾತಂಕವಾಗಿ ಪ್ರಕಾಶಿಸಲಾರಂಭಿಸಿದುದನ್ನೂ ನೋಡಿದ್ದ ಲಿಂಕನ್ನಿಗೆ ಪೂರ್ವದಿಂದಲೂ ಕ್ಲೇಯಲ್ಲಿ ಪೂಜ್ಯಬುದ್ಧಿ ಇದ್ದಿತೆಂದು ತಿಳಿಸಿರುವೆವು. ಈಗ ಆ ಪೂಜ್ಯ

ಭಾವವು ಮತ್ತಷ್ಟು ಹೆಚ್ಚಿತು. ತಾನೂ ಇನ್ನುಮೇಲೆ ಸಂಸರ್ಗವನ್ನು ಕಾಪಾಡುವುದನ್ನು ಮುಖ್ಯಕರ್ತವ್ಯವಾಗಿಯೂ, ಗುಲಾಮರ ಪಕ್ಷವಾಗಿ ಹೋರಾಡುವುದು ಎರಡನೆಯದಾಗಿಯೂ ತಿಳಿಯಬೇಕೆಂದುಕೊಂಡನು.

೬. ಚುನಾವಣೆಯ ಫಲಿತಾಂಶವು ಪ್ರಕಟವಾಯಿತು. ಲಿಂಕನ್ನಿನ ಹೆಸರು ಮೊದಲನೆಯ ನಾಲ್ಕರಲ್ಲಾವುದೂ ಆಗಿರಲಿಲ್ಲ. ಇದರಿಂದ ಲಿಂಕನ್ನನು ಆಶಾಭಂಗವಾಯಿತೆಂದು ಕುಗ್ಗಿಹೋಗಲಿಲ್ಲ. ಅವನು ಎಂದಿನಂತೆಯೇ ಸಂತೋಷದಿಂದಿದ್ದನು. ಲಿಂಕನ್ನನು ಎಗೆಗೆಡದೆ ಈಗಲ್ಲದಿದ್ದರೆ ಮುಂದಾದರೂ ಗೆಲ್ಲಬಹುದೆಂದು ಸಮಾಧಾನವನ್ನು ತಂದುಕೊಂಡನು. ಇನ್ನುಮುಂದೆ ಜೀವನಕ್ಕಾಗಿ ಮತ್ತೆ ಯಾವ ವೃತ್ತಿಯನ್ನವಲಂಬಿಸಬಹುದೆಂದು ಯೋಚಿಸುತ್ತಿದ್ದನು. ನ್ಯೂ ಸೇಲಂ ಕ್ರಮೇಣ ದೊಡ್ಡದೊಡ್ಡದಾಗಿ ಬೆಳೆಯುತ್ತಿದ್ದಿತು. ಲಿಂಕನ್ನನು ಅವರಿವರ ಮನೆಗಳಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ಜೀವನವನ್ನು ಸಂಪಾದಿಸಿಕೊಳ್ಳುತ್ತಿದ್ದನು. ಅವನು ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಂಡು ಸದಾ ಸಂತೋಷಿಯಾಗಿದ್ದನು. ಉಡುವುದಕ್ಕೆ ಸಾಮಾನ್ಯವಾದ ಬಟ್ಟೆ, ಹೊಟ್ಟೆತುಂಬ ಆಹಾರ, ಒಂದೆರಡು ಪುಸ್ತಕಗಳು, ಹಲವರು ಸ್ನೇಹಿತರು—ಇಷ್ಟು ಮಾತ್ರ ಇದ್ದರೆ ತಾನೇ ಅರಸೆಂದು ತಿಳಿಯುತ್ತಿದ್ದನು. ಅವನು ತನಗೆಷ್ಟು ತೊಂದರೆಗಳುಂಟಾದರೂ ತನ್ನ ವ್ಯಾಸಂಗವನ್ನು ಮಾತ್ರ ಬಿಡಲಿಲ್ಲ. ಲಿಂಕನ್ನಿಗೆ ಧರ್ಮಶಾಸ್ತ್ರದಲ್ಲಿ ಆಸಕ್ತಿ ಹೆಚ್ಚು. ಆದದರಿಂದ ಅವನು ಆಗಾಗ ನ್ಯಾಯಸ್ಥಾನಗಳ ಕೆಲಸಕಾರ್ಯಗಳನ್ನು ತಿಳಿಯಲಿಕ್ಕೂ, ನ್ಯಾಯಾಧಿಪತಿಗಳ ತೀರ್ಪನ್ನು ಕೇಳಲಿಕ್ಕೂ ನ್ಯಾಯಸ್ಥಾನಗಳಿಗೆ ಹೋಗುತ್ತಿದ್ದನು. ಇದೊಂದೂ ಥಾಮಸನಿಗೆ ಸರಿ ಹೋಗದು. ತನ್ನಮಗನು ಬರುಬರುತ್ತಾ ಸೋಮಾರಿಯಾಗುತ್ತಿರುವನೆಂದರಿತು ಅವನಮೇಲೆ ಆಗ್ರಹಮಾಡಿದನು. ಅವನ ಬಲತಾಯಿಯಾದರೋ ಲಿಂಕನ್ನಿನ ಗುಣವನ್ನರಿತವಳಾದುದರಿಂದ, ಅವನ ನಡತೆಗೆ ಸಂತೋಷಪಟ್ಟು ಗಂಡನಿಗೆ ಅನೇಕವೇಳೆ ಸಮಾಧಾನವನ್ನು ಹೇಳುತ್ತಿದ್ದಳು. ಕೆಲವರು ಹೊಟ್ಟೆಯಕಿಚ್ಚಿನಿಂದ ಏಬ್ರಹಾಮನು ಸೋಮಾರಿಯೆಂದೂ ಅಪ್ರಯೋಜಕನೆಂದೂ ಹೇಳುತ್ತಿದ್ದರೇ ಹೊರತು ಅವನ ನಡತೆಯನ್ನು ಬಲ್ಲವರಾರೂ ಹೀಗೆನ್ನುತ್ತಿರಲಿಲ್ಲ.

೭. ನ್ಯೂ ಸೇಲಂ ಮೊದಮೊದಲು ದೊಡ್ಡ ಪಟ್ಟಣವಾಗುವ ಸೂಚನೆಯನ್ನು ತೋರುತ್ತಿದ್ದುದಾದರೂ ಕ್ರಮೇಣ ಕ್ಷಯಿಸತೊಡಗಿತು. ಇದನ್ನು ನೋಡಿ ಅಲ್ಲಿಯ ನಿವಾಸಿಗಳು ಒಬ್ಬೊಬ್ಬರಾಗಿ ಆ ಸ್ಥಳವನ್ನು ಬಿಟ್ಟು ಹೊರಡಲಾರಂಭಿಸಿದರು ಈ ಮಧ್ಯೆ ಲಿಂಕನ್ನನು ಅಂಚೆಯಧಿಕಾರಿಯಾಗಿ ನಿಯಮಿತನಾದನು. ವಾರಕ್ಕೊಂದು ವೇಳೆ ಜವಾನನೊಬ್ಬನು ಆ ಊರಿಗೆ ಬಂದು ಒಂದೆರಡು ಕಾಗದಗಳನ್ನು ಏಬ್ರಹಾಮಿನ ಕೈಯಲ್ಲಿ ಕೊಟ್ಟು ಹೋಗುತ್ತಿದ್ದನು. ಆ ಊರಿಗೆ ಬಹು ಕಾಗದಗಳು ಬರುತ್ತಿರಲಿಲ್ಲ. ಆ ಕಾಲದಲ್ಲಿ ತಪಾಲುವೆಚ್ಚವನ್ನು ಕಾಗದ ಕಳುಹಿಸುವವರು ಮುಂಗಡವಾಗಿ ಕೊಡುತ್ತಿರಲಿಲ್ಲ. ಕಾಗದವು ತಲುಪಿದಮೇಲೆ ಪಡೆದುಕೊಂಡವರು ಕೊಡಬೇಕಾಗಿದ್ದಿತು. ಆದುದರಿಂದ ಲಿಂಕನ್ನನು ಕಾಗದವನ್ನು ಕೊಟ್ಟು ಹಣವನ್ನೂ ಬರಮಾಡಿಕೊಳ್ಳಬೇಕಾಗಿದ್ದಿತು. ವರ್ಷಕ್ಕೊಮ್ಮೆ ಮುಖ್ಯಾಧಿಕಾರಿಯೊಬ್ಬನು ಆ ಊರಿಗೆ ಬಂದು ಲಿಂಕನ್ನಿನ ಹತ್ತಿರಿದ್ದ ಹಣವನ್ನು ತೆಗೆದುಕೊಂಡುಹೋಗುತ್ತಿದ್ದನು. ಹಣವು ಲಿಂಕನ್ನಿನ ಕೈಯಲ್ಲಿದ್ದರೆ ಅದಕ್ಕೆ ಯಾವ ಭಯವೂ ಇರುತ್ತಿರಲಿಲ್ಲ.

೮. ಈ ಅಂಚೆಯ ಕೆಲಸವು ಬಹು ಸ್ವಲ್ಪವಾಗಿದ್ದುದರಿಂದ ಲಿಂಕನ್ನಿಗೆ ಓದಲು ಹೆಚ್ಚು ಕಾಲವು ದೊರೆಯುತ್ತಿದ್ದಿತು. ಇವನ ಚಟುವಟಿಕೆಯನ್ನೂ ಚತುರತೆಯನ್ನೂ ನೋಡಿ ಒಬ್ಬ ಮೋಜಣಿದಾರ (Surveyor) ನು ತನಗೊಬ್ಬ ಗುಮಾಸ್ತನು ಬೇಕೆಂದೂ, ಲಿಂಕನ್ನನು ಮೋಜಣಿ ಕೆಲಸವನ್ನು ಕಲಿಯಲು ಸಮ್ಮತಿಸಿದರೆ ತಾನು ಅವನಿಗೆ ಕೆಲಸವನ್ನು ಕಲಿಸಿಕೊಟ್ಟು ತನ್ನ ಬಳಿ ಗುಮಾಸ್ತನನ್ನಾಗಿಟ್ಟುಕೊಳ್ಳುವೆನೆಂದೂ ಹೇಳಿದನು. ಲಿಂಕನ್ನನು ಹೊಸಕೆಲಸಕ್ಕೆ ಕೈ ಹಾಕಲು ಅಷ್ಟು ಮನಸ್ಸಿಲ್ಲದಿದ್ದರೂ, ಅದಕ್ಕೆ ಒಪ್ಪಿಕೊಂಡು ಕೆಲಸವನ್ನು ಕಲಿಯಲಾರಂಭಿಸಿದನು. ಬಹು ಕ್ಷಿಪ್ರದಲ್ಲಿಯೇ ಕೆಲಸವನ್ನು ಕಲಿತು ತನ್ನ ಅಧಿಕಾರಿಗೆ ಅಚ್ಚುಮೆಚ್ಚಾದನು.

೯. ಮೊದಲು ಇತರರಿಗೆ ಅಡಿಯಾಳಾಗಿ ಸೇವಿಸಿ ದಣಿದಿದ್ದ ಅವನಿಗೆ ಇದೊಂದು ಸ್ವತಂತ್ರೋಪಾಯಮಾರ್ಗವು ದೊರಕಿದುದರಿಂದ ಲಿಂಕನ್ನಿಗೆ ಬಹು ಉತ್ತೇಜನವನ್ನುಂಟುಮಾಡಿತು. ಆಗ ಅವನಿಗೆ ಇಪ್ಪತ್ತೈದು

ವರ್ಷ. ವಯಸ್ಸಾದಂತೆಲ್ಲಾ ಅವನ ಮನಸ್ಸಿನಲ್ಲಿ ನಾನಾಬಗೆಯ ಆಲೋಚನೆಗಳು ತಲೆದೋರುತ್ತಿದ್ದುವು. ಒಂದ ವೇಳೆ, ತಾನು ಕಾಂಗ್ರೆಸ್ ಎಂಬ ದೇಶಸಭೆಯ ಸಾಮಾಜಿಕನಾಗಬೇಕೆಂದ ಕೊಳ್ಳುವನು ; ಮತ್ತೊಂದು ವೇಳೆ ದೇಶಾಧ್ಯಕ್ಷನಾದರೆ ಎಷ್ಟೋಜನರಿಗೆ ಸಹಾಯಮಾಡಬಹುದೆಂದುಕೊಳ್ಳುವನು. ಒಡನೆಯೇ ಎಲ್ಲವೂ ಸ್ವಪ್ನಪ್ರಾಯವೆಂದರಿತು ನಿರಾಶನಾಗುವನು. ಮತ್ತೆ ಆಶೆ ; ಪುನಃ ನಿರಾಶೆ—ಹೀಗೆ ಅಹೋರಾತ್ರಿಯಲ್ಲಿಯೂ ಯೋಚಿಸುತ್ತಿದ್ದನು. ತಾನು ಯಾವ ಪದವಿಗೆ ಹೋಗಬೇಕೆಂದು ಇಚ್ಛಿಸಿದರೂ, ಜನರಿಗೆ ಸಹಾಯಮಾಡುವುದಕ್ಕಲ್ಲದೆ ತನ್ನೊಬ್ಬನ ಸೌಖ್ಯಕ್ಕೋಸ್ಕರ ಯಾವ ದೊಡ್ಡ ಅಧಿಕಾರವನ್ನೂ ಅವನು ಬಯಸುತ್ತಿರಲಿಲ್ಲ. ದೇಶಕ್ಷೇಮವೇ ಅವನ ಮುಖ್ಯೋದ್ದೇಶವಾಗಿದ್ದಿತು. ಹಣದಮೇಲೆ ಅವನಿಗೆ ಅಷ್ಟು ಆಸೆ ಇರಲಿಲ್ಲ. ತಾನು ಯಾವರೀತಿಯಲ್ಲಿ ದೇಶಕ್ಕೆ ಹಿತವನ್ನುಂಟುಮಾಡಬಹುದೆಂದೂ, ಏನುಮಾಡಿದರೆ ಜನರಲ್ಲಿರುವ ಮೌಢ್ಯವು ಕಳೆದು ಹೋಗಿ ಇಹಪರಜ್ಞಾನವು ಅವರಿಗೆ ಲಭಿಸುವುದೆಂದೂ ನಿರಂತರವೂ ಯೋಚಿಸುತ್ತಿದ್ದನಲ್ಲದೆ ದೊಡ್ಡ ಅಧಿಕಾರ ದೊರೆತರೆ ತಾನು ಯಾವ ಬಗೆಯ ಬಟ್ಟೆಗಳನ್ನು ಹಾಕಿಕೊಳ್ಳಬೇಕು? ಎಷ್ಟು ಹಣವನ್ನು ಕೂಡಿಹಾಕಬಹುದು? ಎಂದು ಯೋಚಿಸುತ್ತಿರಲಿಲ್ಲ. ಹಣದ ವ್ಯವಹಾರವೇನೆಂಬುದನ್ನು ಲಿಂಕನ್ನನು ಚೆನ್ನಾಗಿ ತಿಳಿದಿರಲಿಲ್ಲ, ಸ್ವಲ್ಪ ಹಣವಿದ್ದರೆ ವೆಚ್ಚಮಾಡಿಬಿಡುತ್ತಿದ್ದನು. ತನ್ನಲ್ಲಿ ಇಲ್ಲದಿದ್ದರೆ ಇತರರಲ್ಲಿ ಸಾಲವನ್ನಾದರೂ, ವೆಚ್ಚಮಾಡಬೇಕೆಂದು ಯತ್ನಿಸುತ್ತಿರಲಿಲ್ಲ. ಸಾಲದ ಬಾಧ್ಯತೆಯು ಅವನಿಗೆ ಚೆನ್ನಾಗಿ ತಿಳಿದಿದ್ದಿತು ಜನರೆಲ್ಲರೂ ಯೋಚಿಸುವಂತೆ, ಹಣವು ಸೌಖ್ಯಕ್ಕೆ ಅವಶ್ಯಕವಾದುದಲ್ಲವೆಂದೂ, ಮನಸ್ಸೇ ಸೌಖ್ಯಕ್ಕೆ ಮೂಲವೆಂದೂ ತಿಳಿದಿದ್ದನು. ಆದುದರಿಂದ ಜನರ ಪ್ರೀತಿವಿಶ್ವಾಸಗಳನ್ನು ಸಂಪಾದಿಸಲು ಅವನು ಸದಾ ಯತ್ನಿಸುತ್ತಿದ್ದನೇ ಹೊರತು ಧನಾರ್ಜನೆಗೋಸ್ಕರ ಶ್ರಮಪಡುತ್ತಿರಲಿಲ್ಲ. ಅವನು ದೇಶಾಧ್ಯಕ್ಷನಾದಾಗ ವಾಷಿಂಗ್ಟನ್ನಿಗೆ ಹೋಗಲು ಬೇಕಾದಷ್ಟು ಹಣವಿಲ್ಲದೆ ಯಾರೋ ಸ್ನೇಹಿತರ ಹತ್ತಿರ ಕೊಂಚ ಹಣವನ್ನೂ, ಒಂದೆರಡು ಬಟ್ಟೆಗಳನ್ನೂ ತೆಗೆದುಕೊಂಡು ಹೋದನಂತೆ!

೧೦. ಮೋಜಣಿಯ ಕೆಲಸದಲ್ಲಿ ಎರಡು ವರ್ಷಗಳು ಕಳೆದುವು.

ಆಗ ಮತ್ತೆ ಸಂಸ್ಥಾನಗಳ ಪ್ರತಿನಿಧಿಗಳ ಚುನಾವಣೆಯು ಒದಗಿತು ಎಲ್ಲೆಲ್ಲಿಯೂ ಚುನಾವಣೆಯ ಕಾರ್ಯವು ಬಲುಬಿರುಸಾಗಿ ನಡೆಯುತ್ತಿದ್ದಿತು. ಈ ಸಾರಿಯೂ ಲಿಂಕನ್ನನು ಸ್ಪ್ರಿಂಗವುನ್ ಸಂಸ್ಥಾನದ ಪರವಾಗಿ ಪ್ರತಿನಿಧಿಯಾಗಲು ತನ್ನ ಹೆಸರನ್ನೂ ಕೊಟ್ಟನು. ಪೂರ್ವಕ್ಕಿಂತಲೂ ಈಗ ಅನೇಕರಿಗೆ ಲಿಂಕನ್ನಿನ ವಿಚಾರವು ತಿಳಿದಿದ್ದಿತು. ಆದುದರಿಂದ ಚುನಾವಣೆಯಲ್ಲಿ ಲಿಂಕನ್ನಿಗೂ ಸಾಮಾಜಿಕಪದವಿಯು ಲಭ್ಯವಾಗಿದ್ದಿತು.

---

## ಏಳನೆಯ ಪ್ರಕರಣ

### ನ್ಯಾಯವಾದಿತ್ವವು.

೧ ಬಡವರಿಗೆ ಅಕಸ್ಮಾತ್ತಾಗಿ ಲಕ್ಷ್ಮೀಕಟಾಕ್ಷ ಉಂಟಾಗಲು ಅವರಲ್ಲಿ ಅನೇಕ ಬದಲಾವಣೆಗಳುಂಟಾಗುವುವು ಅವರು ಬೇರೇ ಮನುಷ್ಯರಾಗುವರೆಂದರೆ ಅತಿಶಯೋಕ್ತಿಯಾಗಲಾರದು. ಭೂತದಯೆಯೂ, ನಮ್ರತೆಯೂ ಇತರ ಸುಗುಣಗಳೂ ಎಲ್ಲಿಯೋ ಮಾಯವಾಗಿ ತಮ್ಮ ಪೂರ್ವಸ್ಥಿತಿಯನ್ನು ಮರೆತು ಜನರನ್ನು ನಾನಾಬಗೆಯಿಂದ ಹಿಂಸಿಸಲಾರಂಭಿಸುವರು. ತಮ್ಮ ಆಗಿನ ಸ್ಥಿತಿಯೇ ಶಾಶ್ವತವೆಂದು ತಿಳಿದು ಮಾಡಬಾರದ ಕಾರ್ಯಗಳಿಗೆ ಮನಗೊಡುವರು. ಧನಮದೋನ್ಮತ್ತರಾಗಿ ತಮ್ಮ ಸಮಾನರಾರೂ ಇಲ್ಲವೆಂದು ತಿಳಿದು ಗರ್ವದಿಂದ ಉಬ್ಬುವರು. ಕಾಲವಶದಿಂದ ತಾವು ಹೇಗೆ ಅಕಸ್ಮಾತ್ತಾಗಿ ಉನ್ನತಪದವಿಗೆ ಬಂದರೋ ಹಾಗೆಯೇ ಆ ದೈವದೊಲುಮೆ ತಪ್ಪಲು ತಮ್ಮ ಪೂರ್ವಸ್ಥಿತಿಯೇ ತಮಗುಂಟಾಗಬಹುದೆಂಬುದನ್ನು ಮರೆಯುವರು. ಅನೇಕರಿಗೆ ಧನಪಿಶಾಚಿಯೊಂದು ಮಾತ್ರ ಬಿಡದೆ ಹಿಡಿದಿರುವುದು. ಅಂದಿನಿಂದ ಅವರು ಲಕ್ಷ್ಮೀಪ್ರಸಾದವನ್ನು ಹೊಂದಲಿಕ್ಕೆ ನಿರಂತರವೂ ಪ್ರಯತ್ನಿಸುತ್ತಿರುವರೇ ಹೊರತು, ತಮ್ಮ ಕರ್ತವ್ಯವೇನೆಂಬುದನ್ನು ಗಮನಿಸರು. "ಹಣಕ್ಕೆ ರಸಾಗು, ಆಳಾಗಬೇಡ" ವೆಂಬ ನುಡಿಯನ್ನು ಮರೆತು ಧನಕ್ಕೂ ಅಲ್ಪಭೋಗಗಳಿಗೂ ಅಡಿಯಾಳಾಗಿ ಪಾಪಕೂಪದಲ್ಲಿ ಮುಳುಗಲಾರಂಭಿಸುವರು.

೨. ಸಾಮಾನ್ಯ ಜನರೆಲ್ಲರಲ್ಲಿಯೂ, ಐಶ್ವರ್ಯವು ಹಸ್ತಗತವಾದಾಗ ಈ ಬಗೆಯ ವಿಕಾರಗಳುಂಟಾಗುವುವಾದರೂ, ಲಿಂಕನ್ನಿನಲ್ಲಿ ಸಾಮಾಜಿಕತೆಯು ಲಭಿಸಿದಮೇಲೆ ಯಾವ ಬಗೆಯ ವಿಕಾರವೂ ಕಂಡುಬಾರಲಿಲ್ಲ; ತಾನು ಯಾವ ರೀತಿ ನಡೆದರೆ ಜನರಿಗೆ ಶುಭವಾಗಬಹುದೆಂದು ಅಹೋರಾತ್ರಿಯೂ ಯೋಚಿಸುತ್ತಿದ್ದನು. ಇದುವರೆಗೂ ಲಿಂಕನ್ನಿಗೆ ಅಂತಹ ಉತ್ತರವಾದಿತ್ವವಿರಲಿಲ್ಲ. ಈಗಲಾದರೋ ಒಂದು ಕಡೆ ಜನರನ್ನು ಸಂತೋಷಗೊಳಿಸಬೇಕಾಗಿದ್ದಿತು; ಮತ್ತೊಂದು ಕಡೆ ಸರ್ಕಾರದ ಆಕ್ಷೇಪಣೆಗಳಿಗೆ ತಕ್ಕ ಸಮಾಧಾನವನ್ನು ಹೇಳಬೇಕಾಗಿದ್ದಿತು. ಸ್ವೇಚ್ಛೆಯಾಗಿ ಅಲೆಯುತ್ತಿದ್ದ ಕುದುರೆಯನ್ನು ಹಿಡಿದುತಂದು ಎರಡು ಕೋಗೀರುಗಳನ್ನು ಹೇರಿದಂತಾಯಿತು. ಈಗ ಲಿಂಕನ್ನಿಗೆ ಸ್ವಲ್ಪವಾದರೂ ಪಾಲುಮಾರಿಕೆಗೆ ಅವಕಾಶವಿರಲಿಲ್ಲ. ತಾನು ಬಯಸಿಬಂದ ಉದ್ಯೋಗದಲ್ಲಿ ಕೈಯಿಂದಾದಮಟ್ಟಿಗೆ ತನ್ನ ಕರ್ತವ್ಯವನ್ನೆಲ್ಲಾ ಸಂಪೂರ್ಣವಾಗಿ ಮಾಡಬೇಕೆಂಬುದೇ ಅವನ ಉದ್ದೇಶ. ಅವನು ಎಷ್ಟೋ ಎಚ್ಚರಿಕೆಯಿಂದ ಕೆಲಸಮಾಡುತ್ತಿದ್ದರೂ ಸರ್ವರನ್ನೂ ತೃಪ್ತಿಗೊಳಿಸುವುದು ಅಸಾಧ್ಯವಾಗಿದ್ದಿತು.

೩. ಈ ನೂತನಪದವಿಯಿಂದ ಆದಾಯಕ್ಕಿಂತಲೂ ಗೌರವವೇ ಹೆಚ್ಚಾಗಿದ್ದಿತು. ಹಣದಮೇಲೆ ಲಿಂಕನ್ನಿಗೆ ಆಸೆಯಿಲ್ಲದಿದ್ದುದರಿಂದಲೂ, ಗೌರವವೇ ಅವನಿಗೆ ಬೇಕಾಗಿದ್ದುದರಿಂದಲೂ ಅವನು ತನ್ನ ಜೊತೆಯವರಿಗಿಂತಲೂ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ, ಲಿಂಕನ್ನನು ಗಣ್ಯತೆಯಲ್ಲಿ ಎಲ್ಲರನ್ನೂ ಮೀರಿಸಿದ್ದನು. ಅವನು ಇಲ್ಲಿನಾಯ್ (Illinois) ಪ್ರಾಂತದ ಮುಖ್ಯಪಟ್ಟಣವಾಗಿದ್ದ ವ್ಯಾಂಡೇಲಿಯ (Vandalia) ಪಟ್ಟಣದಲ್ಲಿ ತನ್ನ ಕೆಲಸಕಾರ್ಯಗಳು ಮುಗಿದೊಡನೆಯೇ ತನ್ನೂರಿಗೆ ಹಿಂದಿರುಗಿ ಬಂದನು ಲಿಂಕನ್ನಿಗೆ ಧರ್ಮಶಾಸ್ತ್ರದಲ್ಲಿ ಬಹಳ ಅಭಿರುಚಿ ಇದ್ದಿತೆಂದು ಹಿಂದೆಯೇ ತಿಳಿಸಿದೆ. ಅವನು ಊರಿಗೆ ಹಿಂದಿರುಗಿ ಬಂದೊಡನೆಯೇ, ಆ ಊರಿನಲ್ಲಿ ವಾಸಿಸುತ್ತಿದ್ದ ಮೇಜರ್‌ಸ್ಟೂವರ್ಟ್ (Major Stuart) ಎಂಬೊಬ್ಬ ವಕೀಲನು ಲಿಂಕನ್ನನ್ನು ಕುರಿತು "ಲಿಂಕನ್! ನೀನು ನ್ಯಾಯಶಾಸ್ತ್ರವನ್ನೇಕೆ ಓದಬಾರದು?" ಎಂದು ಕೇಳಿದನು. ಒಡನೆಯೇ ಲಿಂಕನ್ನನು ತನಗೆ ಆ ಶಾಸ್ತ್ರದಲ್ಲಿ ಬಹುಪ್ರೀತಿಯಿದ್ದರೂ ಅದನ್ನು ಕಲಿಯಲು

ಬೇಕಾದ ಸಲಕರಣಗಳಲ್ಲವೆಂದು ಹೇಳಿದನು. ಅದನ್ನು ಕೇಳಿದೊಡನೆಯೇ ಆ ವಕೀಲನು ಸಂತೋಷಪಟ್ಟು ತನ್ನ ಹತ್ತಿರಿದ್ದ ಪುಸ್ತಕಗಳನ್ನೆಲ್ಲಾ ಕೊಟ್ಟುದಲ್ಲದೆ ಅವನಿಗೆ ತಿಳಿಯದ ವಿಷಯಗಳನ್ನೆಲ್ಲಾ ಮನಃಪೂರ್ವಕವಾಗಿ ಹೇಳಿಕೊಡುವೆನೆಂದನು. ಅಂದಿನಿಂದ ಏಬ್ರಹಾಮನು ಧರ್ಮಶಾಸ್ತ್ರವನ್ನೋದಿದನು. ಸ್ಟ್ಯುವರ್ಟ್ಸನ ಸಹಾಯದಿಂದ ಲಿಂಕನ್ನನು ಬಲುಬೇಗನೆ ಆ ಶಾಸ್ತ್ರದಲ್ಲಿ ಪಂಡಿತನಾದನು ಅವನು ಇನ್ನು ಮುಂದೆ ಜೀವನಕ್ಕಾಗಿ ಪೇಚಾಡಬೇಕಾಗಿರಲಿಲ್ಲ. ಮತ್ತೆ ಮೂರು ಸಾರಿ ನಡೆದ ಚುನಾವಣೆಯಲ್ಲಿಯೂ ಲಿಂಕನ್ನನ್ನೇ ಆರಿಸಿದುದರಿಂದ ಜನರೆಲ್ಲರೂ ಅವನನ್ನೆಷ್ಟು ಪ್ರೀತಿಸುತ್ತಿದ್ದರೆಂಬುದು ವ್ಯಕ್ತವಾಗುತ್ತದೆ. ಅವನು ಆ ಉದ್ಯೋಗದಲ್ಲಿ ಕೊಂಚವೂ ಪೋಲುಮಾಡದೆ ಅವಿಶ್ರಾಂತಶ್ರಮಪಟ್ಟು ತನ್ನ ಸಂಸ್ಥಾನಕ್ಕೆ ಬಹು ಸಹಾಯಮಾಡಿದನು.

೪. ಆ ಕಾಲದಲ್ಲಿ ಜನರು ಈಗಿನಂತೆ ನ್ಯಾಯಸ್ಥಾನಗಳನ್ನು ಹುಡುಕಿಕೊಂಡು ಅಲೆಯಬೇಕಾಗಿರಲಿಲ್ಲ. ನ್ಯಾಯಾಧಿಕಾರಿಗಳೇ ಊರಿಂದೂರಿಗೆ ಸುತ್ತುತ್ತ ಒಂದೊಂದು ಗ್ರಾಮದಲ್ಲಿಯೂ ನಿಂತು, ಅಲ್ಲಿಯ ವ್ಯಾಜ್ಯಗಳನ್ನು ಪರಿಹರಿಸಿ ಮುಂದಕ್ಕೆ ಹೊರಡುತ್ತಿದ್ದರು ನ್ಯಾಯವಿಮರ್ಶೆಗಾಗಿ ಲಿಂಕನ್ನನು ಒಂದುವೇಳೆ ಮನೆಬಿಟ್ಟು ಹೊರಟರೆ ಹಿಂದಿರುಗುವುದಕ್ಕೆ ಎರಡು ಮೂರು ತಿಂಗಳುಗಳಾಗುತ್ತಿದ್ದುವು ಈ ಮಧ್ಯೆ ಮನೆಯ ಸಮಾಚಾರಗಳು ಹೇಗಿದ್ದರೂ ಅವನಿಗೆ ತಿಳಿಯುತ್ತಿರಲಿಲ್ಲ. ಅವನು ಮನೆಯಗೀಳನ್ನು ಇಟ್ಟುಕೊಳ್ಳುತ್ತಲೂ ಇರಲಿಲ್ಲ

೫. ಈ ಮಧ್ಯದಲ್ಲಿ, ದೇಶಾಧ್ಯಕ್ಷರ ಚುನಾವಣೆಯು ನಡೆದು ಡೆಮೊಕ್ರಾಟ್ (Democrat) ಪಂಗಡದವನಾದ ವಾನ್ ಬ್ಯೂರೆನ್ (Von Buren) ಎಂಬವನು ದೇಶಾಧ್ಯಕ್ಷನಾದನು. ರಿಪಬ್ಲಿಕ್ (Re-public) ಪಂಗಡದವನಾದ ಹೆನ್ರಿ ಕ್ಲೇಯನ್ನು ಆ ಪದವಿಗೆ ತರಬೇಕೆಂದು ಮಾಡಿದ ಲಿಂಕನ್ನಿನ ಪ್ರಯತ್ನವು ಸಾರ್ಥಕವಾಗಲಿಲ್ಲ. ಇಷ್ಟರಲ್ಲಿ ಇಲಿನಾಯ್ ಸಂಸ್ಥಾನದ ರಾಜಧಾನಿಯು ವ್ಯಾಂಡೇಲಿಯದಿಂದ ಸ್ಪ್ರಿಂಗ್ ಫೀಲ್ಡಿಗೆ ಬಂದಿತು. ಲಿಂಕನ್ನನು ಮಾತ್ರ ತಾನು ಮೊದಲಿಂದ ವಾಸವಾಗಿದ್ದ ನ್ಯೂಸೇಲಮನ್ನು ಬಿಡದಿದ್ದನು. ಅವನ ಪೂರ್ವಸ್ನೇಹಿತನಾಗಿದ್ದ ಸ್ಟ್ಯುವರ್ಟನು ಈಗ ಸ್ಪ್ರಿಂಗ್

ಫೀಲ್ಡಿನಲ್ಲಿ ವಾಸಮಾಡುತ್ತ, ಲಿಂಕನ್ನನೂ ಅಲ್ಲಿಗೆ ಬರಬೇಕೆಂದು ಆಗಾಗ ಕಾಗದವನ್ನು ಬರೆಯುತ್ತಿದ್ದನು ಕೊನೆಗೆ ಏಬ್ರಹಾಮನು ಆ ಊರಿಗೆ ಹೋಗಿ ಸ್ಟುವರ್ಟನೊಡನೆ ಇದ್ದುಕೊಂಡು ಇಬ್ಬರೂ ಜಟ್ಟಿಗೆ ವಕೀಲುತನವನ್ನು ಮಾಡುತ್ತಿದ್ದರು

೬. ಲಿಂಕನ್ನನು ವಕೀಲನಾಗಿದ್ದಾಗ, ಧರ್ಮಬುದ್ಧಿಗೂ, ಪ್ರಾಮಾಣಿಕತೆಗೂ ಪ್ರಖ್ಯಾತನಾಗಿದ್ದನು. ಆ ಉದ್ಯೋಗದಲ್ಲಿ ದುರ್ಗುಣಗಳನ್ನು ಕಲಿಯಲು ಅವಕಾಶಗಳಿದ್ದರೂ ಲಿಂಕನ್ನನು ಅವುಗಳಿಗಾಸ್ಪದ ಕೊಡಲಿಲ್ಲ. ಜನರು ನ್ಯಾಯಸ್ಥಾನಕ್ಕೆ ಬಾರದೆ ತಮ್ಮ ವ್ಯಾಜ್ಯಗಳನ್ನು ತಾವೇ ಪರಿಹರಿಸಿಕೊಳ್ಳಬೇಕೆಂಬುದೇ ಅವನ ಅಭಿಮತವಾಗಿದ್ದಿತು. ಆದುದರಿಂದ ಅವನಲ್ಲಿಗೆ ಆರಾದರೂ ವ್ಯಾಜ್ಯವನ್ನು ತಂದರೆ ಅವರಿಗೆ ಮೇಲೆ ಹೇಳಿದ ತತ್ವವನ್ನುಪದೇಶಿಸಿ ಅವರನ್ನು ಹಿಂದಕ್ಕೆ ಕಳುಹಿಸುತ್ತಿದ್ದನು ಆದುದರಿಂದ ಅವನಿಗೆ ಎಷ್ಟು ದ್ರವ್ಯಲಾಭವಾಗಿರಬಹುದೆಂಬುದನ್ನು ವಾಚಕರೇ ಯೋಚಿಸಬಹುದು. ಈಗಿನ ಕೆಲವರು ವಕೀಲರಂತೆ ಇಲ್ಲದ ವ್ಯಾಜ್ಯಗಳನ್ನು ಹುಟ್ಟುಹಾಕಿ, ಅಪರಾಧಿಯ ಪಕ್ಷವನ್ನು ಹಿಡಿದು ವಾದಿಸುತ್ತಾ, ಮಾತಿಗೆ ಮೊದಲೇ ಬರಬೇಕಾದ ಹಣವನ್ನು ಕಿತ್ತುಕೊಂಡು, ಆ ಕಕ್ಷಿಯು ಜುಟ್ಟು ತಮ್ಮ ಕೈಗೆ ಸಿಕ್ಕಿದೊಡನೆಯೇ, ಬಹು ತುಚ್ಛಭಾವದಿಂದ ಕಾಣುವಂತಹವನಾಗಿರಲಿಲ್ಲ. ನ್ಯಾಯಮಾರ್ಗದಲ್ಲಿ ತನಗೆ ಬಂದ ಅಲ್ಪವನ್ನೇ ಅಧಿಕವೆಂದರಿತು ಸಂತೋಷಪಡುತ್ತಿದ್ದನು. ಅವನೊಂದು ದಿನವಾದರೂ ಅಪರಾಧಿಯ ಪಕ್ಷವನ್ನು ವಹಿಸಿದವನಲ್ಲ. ಸುಳ್ಳು ಹೇಳುವುದೆಂದರೆ ಅವನಿಗಾಗದು. ಇದನ್ನು ಮುಂದಿನ ಪ್ರಕರಣದಿಂದ ಅರಿಯಬಹುದು.

೭. ಒಂದು ದಿನ ಒಬ್ಬ ಕಕ್ಷಿಯು ಲಿಂಕನ್ನಿನಬಳಿಗೆ ಬಂದು ತನ್ನ ವ್ಯಾಜ್ಯದವಿಚಾರವನ್ನು ಸಮಗ್ರವಾಗಿ ತಿಳಿಸಿ ತನ್ನ ಪಕ್ಷವನ್ನು ಹಿಡಿದು ವಾದಿಸಿದರೆ ಬೇಕಾದಷ್ಟು ಹಣವನ್ನು ಕೊಡುವುದಾಗಿ ಹೇಳಿದನು. ಲಿಂಕನ್ನನು ಕೊಂಚಹೊತ್ತು ಆಲೋಚಿಸಿ "ಅಯ್ಯಾ ! ಮೊದಲು ನೀನು ತಪ್ಪುಮಾಡಿದುದುಂಟೋ ?" ಎಂದನು.

"ಅಹುದು, ಸ್ವಾಮಿ ! ಅದನ್ನು ನಾನೊಪ್ಪಿಕೊಳ್ಳುವೆನು." ಎಂದು ಕಕ್ಷಿಯು ಹೇಳಿದನು.

ಲಿಂಕನ್—"ಹಾಗಾದರೆ ನನ್ನಿಂದ ನಿನಗೇನೂ ಸಹಾಯವಾಗದು."

ಕಕ್ಷಿ—"ಅದೇಕೆ, ಸ್ವಾಮಿ?"

ಲಿಂಕನ್—"ತಪ್ಪುಮಾಡಿದವನೆಂದು ನೀನೇ ಒಪ್ಪಿಕೊಳ್ಳುತ್ತೀಯೆ! ಹೀಗಿರುವಾಗ ನಾನು ಹೇಗೆ ನಿನ್ನನ್ನು ನಿರಪರಾಧಿಯೆಂದು ನಿದರ್ಶನ ಪಡಿಸಲಿ?"

ಕಕ್ಷಿ—"ಸ್ವಾಮಿ! ತಮ್ಮ ಕಷ್ಟಕ್ಕೆ ಸರಿಯಾದ ಮರ್ಯಾದೆ ಮಾಡಿದರಾಯಿತಲ್ಲವೆ?"

ಲಿಂಕನ್—"ಅಯ್ಯಾ! ನಿನ್ನ ಮರ್ಯಾದೆಗೋಸುಗ, ಎಂದೂ ಸುಳ್ಳನ್ನಾಡದಿರುವ ನಾನು ಈಗ ಸುಳ್ಳು ಹೇಳುವೆನೆಂದರಿತೆಯಾ? ನೀನು ಪಾಪ ಕೂಪದಲ್ಲಿ ಬಿದ್ದಿರುವುದಲ್ಲದೆ ನನ್ನನ್ನೂ ಎಳೆದುಕೊಳ್ಳಲು ಯತ್ನಿಸುವೆಯಾ? ಅದೆಂದಿಗೂ ಆಗದು. ಇನ್ನು ಮತ್ತೆಲ್ಲಿಗಾದರೂ ಹೋಗು"

ಕಕ್ಷಿ—"ಸ್ವಾಮಿ! ಅದನ್ನು ಕೇಳುವುದಕ್ಕೋಸುಗ ನಾನು ನಿಮ್ಮಲ್ಲಿಗೆ ಬಾರಲಿಲ್ಲ. ಈಗ ಒಂದೇಮಾತು ಹೇಳಬಿಡಿ; ಈ ವ್ಯಾಜ್ಯದಲ್ಲಿ ನನ್ನ ಪಕ್ಷವನ್ನು ವಹಿಸಿ ಮಾತನಾಡುವಿರೋ ಇಲ್ಲವೋ?"

ಲಿಂಕನ್—"ಖಂಡಿತವಾಗಿಯೂ ಇಲ್ಲ."

ಕಕ್ಷಿ—"ಹೋಗಿ ಸ್ವಾಮಿ! ನಿಮ್ಮಂತಹ ವಕೀಲರನ್ನೆಷ್ಟುಮಂದಿಯನ್ನೋ ನೋಡಿದೇನೆ ನೀವಿಲ್ಲದಿದ್ದರೆ ಇನ್ನಾರೂ ವಕೀಲರೇ ಇಲ್ಲವೆಂದರಿತಿರಾ? ಹಣವೊಂದಿದ್ದರೆ ನಾನುತಾನೆಂದು, ಕರೆಯದಿದ್ದರೂ ವಕೀಲರು ಬರುತ್ತಾರೆ" ಎಂದು ಹೇಳಿ ಹೊರಟುಹೋಗುತ್ತಿದ್ದನು. ಆಗ ಲಿಂಕನ್ನನು ಅವನನ್ನು ಕರೆದು ಕುಳ್ಳಿರಿಸಿಕೊಂಡು "ಅಯ್ಯಾ! ನಾನು ನಿನ್ನ ಪಕ್ಷವನ್ನು ವಹಿಸಲಿಲ್ಲವೆಂದು ಆಗ್ರಹಮಾಡದಿರು. ಅನ್ಯಾಯವಾಗಿ ಇತರರಿಗೆ ಕೊಟ್ಟು ನಿನ್ನ ದ್ರವ್ಯವನ್ನು ಹಾಳುಮಾಡಿಕೊಳ್ಳುವುದಕ್ಕಿಂತ ಈಗ ನಿಮ್ಮೂರಿಗೆ ಹೋಗಿ ವ್ಯಾಜ್ಯವನ್ನು ನಿಮ್ಮಲ್ಲಿಯೇ ಪರಿಹರಿಸಿಕೊಳ್ಳ. ನ್ಯಾಯಸ್ಥಾನಕ್ಕೆ ಬರುವುದರಿಂದ ದ್ರವ್ಯನಾಶವೊಂದೇ ಅಲ್ಲ; ಮನುಷ್ಯನಿಗೆ ಅತಿ ಅಮೂಲ್ಯಾಭರಣವಾದ ಮಾನವೂ ಹಾನಿಯಾಗುವುದು" ಎಂದು ಹೇಳಿ ಕಳುಹಿಸಿಕೊಟ್ಟನು.

೮. ಇದರಿಂದ ಲಿಂಕನ್ನಿನಲ್ಲಿ ಎಷ್ಟು ಮಟ್ಟಿಗೆ ಧರ್ಮಬುದ್ಧಿ ಇದ್ದಿತೆಂಬುದು ವ್ಯಕ್ತವಾಗುತ್ತದೆ. ಇಂತಹವ್ಯಾಜ್ಯವು ಮತ್ತಾರಿಗಾದರೂ ಸಿಕ್ಕಿದ್ದರೆ, ಅದು ಬಹು ಕಠಿನವೆಂದು ಒಂದಕ್ಕೆರಡರಷ್ಟು ಹಣವಸೂಲು ಮಾಡಿಕೊಂಡು ಒಂದೆರಡು ದಿನ ನ್ಯಾಯಸ್ಥಾನದಲ್ಲಿ ವಾದಿಸಿದಂತೆ ಮಾಡಿ ಇದಿರು ಪಕ್ಷದ ವಕೀಲನೊಡನೆಯೂ, ನ್ಯಾಯಾಧಿಪತಿಯೊಡನೆಯೂ ಮಾತನಾಡಿ ಕೊನೆಗೆ ಎರಡು ಕಕ್ಷಿಗಳಿಗೂ ರಾಜಿಮಾಡಿಸುತ್ತಿದ್ದರು. ಇಷ್ಟಕ್ಕೆ ಆ ಕಕ್ಷಿಗಳು ವಕೀಲನ ಬುದ್ಧಿಶಕ್ತಿಗೆ ಮೆಚ್ಚಿ ಉಬ್ಬಿಹೋಗುತ್ತಿದ್ದರು. ಈಗಲೂ ಇಂತಹ ಸಂಭವಗಳುಂಟಾಗುವುದೇನೂ ಅಪೂರ್ವವಲ್ಲ. ಮೊದಲೇ ಸಂಧಿಮಾಡಿಸಲು ಅಸಮರ್ಥನಾದಾಗ ಲಿಂಕನ್ನನು ನ್ಯಾಯಪಕ್ಷವನ್ನೇ ವಹಿಸುತ್ತಲಿದ್ದನು ಆದುದರಿಂದ ಅವನು ಒಂದುದಿನವಾದರೂ ವಾದದಲ್ಲಿ ಸೋತವನೇ ಅಲ್ಲ.

೯. ಮತ್ತೊಂದು ವೇಳೆ ಅವನ ಸ್ನೇಹಿತನು ಅಪರಾಧಿಯು ಪಕ್ಷವನ್ನವಲಂಬಿಸಿ ಮಾತನಾಡಲು, ಕೂಡಲೇ ಲಿಂಕನ್ನನು ಕೋಪಗೊಂಡು “ ಆ ಮನುಷ್ಯನು ಅಪರಾಧಿಯಾಗಿದ್ದರೂ, ಅವನ ಪಕ್ಷವಾಗಿ ಮಾತನಾಡುತ್ತಿ ! ಇದು ನಿನಗೆ ಧರ್ಮವಲ್ಲ ” ಎಂದನು.

## ಎಂಟನೆಯ ಪ್ರಕರಣ.

### ಗುಲಾಮರ ವೃತ್ತಾಂತವು.

೧. ಗುಲಾಮರ ವ್ಯಾಪಾರವನ್ನು ೧೬೯೧ರಲ್ಲಿ ಡಚ್ಚರು ಪ್ರಾರಂಭಿಸಿದಂದಿನಿಂದ, ಅಮೇರಿಕಾದಲ್ಲಿ ಗುಲಾಮರ ಸಂಖ್ಯೆಯು ಹೆಚ್ಚುತ್ತಲೇ ಇದ್ದಿತು. ಅದಕ್ಕೆ ಮೊದಲು, ಅಮೇರಿಕಾದಲ್ಲಿ ಗುಲಾಮರೇ ಇರಲಿಲ್ಲ. ಆ ವ್ಯಾಪಾರದಿಂದ ಡಚ್ಚರಿಗುಂಟಾಗುತ್ತಿದ್ದ ಲಾಭವನ್ನು ನೋಡಿ ಇತರ ದೇಶದವರೂ ಆ ಹೀನವೃತ್ತಿಯನ್ನಾರಂಭಿಸಿದ್ದರು. ಕಾಲಾಂತರದಲ್ಲಿ ಇಂಗ್ಲೆಂಡ್ ಮತ್ತು ಅಮೇರಿಕಾಗಳೂ ಕೂಡ ಈ ವ್ಯಾಪಾರದಲ್ಲಿ ಪ್ರವೇಶಿಸಿದ್ದುವು. ಈ ವ್ಯಾಪಾರದ ರುಚಿಯನ್ನು ಆಂಗ್ಲೇಯರು ಕಂಡುಕೊಂಡೊಡನೆಯೇ

ತಮ್ಮ ವ್ಯಾಪಾರವನ್ನು ಹೆಚ್ಚು ಮಾಡಿ ಆಫ್ರಿಕಾಖಂಡದಿಂದ ನಿಗ್ರೋಜನರ
ನ್ನು ಸೆರೆಹಿಡಿದುತಂದು ಅಮೇರಿಕಾದವರಿಗೆ ಮಾರಿ ಬಹುಲಾಭವನ್ನು ಸಂ
ಪಾದಿಸುತ್ತಿದ್ದರು. ಅಮೇರಿಕಾದವರಿಗೆ ಸಾಕಾದಷ್ಟು ಲಾಭವೂ, ಹೊಲದಲ್ಲಿ
ಕೆಲಸಮಾಡಲು ಅಗ್ಗವಾಗಿ ಜನರೂ ದೊರೆಯುತ್ತಿದ್ದುದರಿಂದ ಆ ವ್ಯಾಪಾರ
ದಲ್ಲಿ ಅವರಿಗೆ ದೋಷವೇನೂ ಕಂಡುಬಾರದೆ ದಿನದಿನಕ್ಕೂ ತಮ್ಮ ವೃತ್ತಿ
ಯನ್ನು ಹೆಚ್ಚಿಸುತ್ತಿದ್ದರು. ಈ ಕಾಲದಲ್ಲಿ ಸುಮಾರು ಒಟ್ಟು ನಲವತ್ತು
ಲಕ್ಷ ಮಂದಿ ಗುಲಾಮರು ಅಮೇರಿಕಾದಲ್ಲಿದ್ದರು.

೨. ಗುಲಾಮರಿಗೆ ಕೊಡುತ್ತಿದ್ದ ಹಿಂಸೆಗಳ ವಿಚಾರವಾಗಿ ಕೊಂಚ
ವಿವರಿಸಬೇಕಾಗಿದೆ. ಅಮೇರಿಕಾದವರು ಬಿಳಿಯ ಜನರೊಬ್ಬರೇ ಮನುಷ್ಯ
ರೆಂದೂ, ಕಪ್ಪಗಿದ್ದವರೆಲ್ಲಾ ಪಶುಗಳೆಂದೂ ತಿಳಿದಿದ್ದರು. ಆದುದರಿಂದಲೇ
ಒಡೆಯರು ತಮ್ಮ ಗುಲಾಮರನ್ನು ಎತ್ತು ಕುದುರೆಗಳಿಗಿಂತಲೂ, ನಿಕೃಷ್ಟವಾಗಿ
ನೋಡುತ್ತಿದ್ದರು. ಏಟು ಮುಂದು ; ಮಾತು ಹಿಂದು ಆಗಿದ್ದಿತು. ಏಟು
ತಿಂದುತಿಂದು ಆ ಗುಲಾಮರ ಮೈ ಜಡ್ಡುಕಟ್ಟಿಹೋಗಿದ್ದಿತು. ಮಳೆಬಿಸಿಲು
ಗಳೆನ್ನದೆ ಅವರಿಂದ ದುಡಿಸಿಕೊಳ್ಳುತ್ತಿದ್ದರು. ಉಡುವುದಕ್ಕೂ ಹೊದೆಯು
ವುದಕ್ಕೂ ಒಂದೇ ಬಟ್ಟೆ ; ಅವರಿಗೆ ಹೊಟ್ಟೆತುಂಬ ಆಹಾರವನ್ನೂ ಕೊಡು
ತ್ತಿರಲಿಲ್ಲ. ಹೊಲದಲ್ಲಿ ಕೆಲಸವು ಮುಗಿದು ಸಾಯಂಕಾಲವಾದೊಡನೆಯೇ,
ಯಜಮಾನನು ಅವರನ್ನೆಲ್ಲಾ ಅಟ್ಟಿಕೊಂಡುಬಂದು ಹಂದಿಗಳಂತೆ ಒಂದು
ದೊಡ್ಡಿಗೆ ಕೂಡಿ ಬೀಗಹಾಕುತ್ತಿದ್ದನು. ಅಲ್ಲಿ ಕಟ್ಟಳೆಯಮೇರೆ, ಆ ಗುಲಾ
ಮರೊಬ್ಬೊಬ್ಬರಿಗೂ ಒಂದೊಂದು ಹಿಡಿ ಗೋದಿಯನ್ನು ಕೊಡುತ್ತಿದ್ದರು.
ಅದನ್ನು ಆ ಬಡಪ್ರಾಣಿಗಳೇ ಒಬ್ಬೊಬ್ಬರಾಗಿ ಆ ದೊಡ್ಡಿಯ ಮಧ್ಯದಲ್ಲಿದ್ದ
ಕಲ್ಲಿನಲ್ಲಿ ಬೀಸಿಕೊಂಡು ರೊಟ್ಟಿಮಾಡಿಕೊಳ್ಳಬೇಕಾಗಿದ್ದಿತು. ಬಲಶಾಲಿ
ಗಳಾಗಿದ್ದವರು ಇತರರೊಡನೆ ಕಾದಾಡಿ ತಮ್ಮ ಕೆಲಸವನ್ನು ತೀವ್ರವಾಗಿ
ಮುಗಿಸಿಕೊಂಡು ಮಲಗಲಿಕ್ಕೆ ಹೋಗುತ್ತಿದ್ದರು. ಬಲಹೀನರು ಕೊನೆಯ
ವರೆಗೂ ಕಾದಿರಬೇಕಾಗಿದ್ದಿತು. ಮಲಗುವುದಕ್ಕೆ ಒಂದುಹಿಡಿ ಹುಲ್ಲು ಕೂಡ
ಇಲ್ಲದೆ ಬರಿಯ ನೆಲದ ಮೇಲೆ ಮಲಗಬೇಕಾಗಿದ್ದಿತು. ಅವರಿಗೆ ಕೊಟ್ಟಿದ್ದ
ಬಟ್ಟೆಯು ಮೈತುಂಬ ಹೊದೆದುಕೊಳ್ಳುವುದಕ್ಕೆ ಕೂಡ ಸಾಲುತ್ತಿರಲಿಲ್ಲ.
ರಾತ್ರಿ ಚಳಿಯಿಂದ ನಿದ್ರೆಬಾರದೆ ಬೆಳಗಿನಜಾವದಲ್ಲಿ ಸ್ವಲ್ಪ ನಿದ್ರೆಹತ್ತಿದ

ಕೂಡಲೆ ಅವರ ಯಜಮಾನನು ಬಂದು ಒದೆದು ಎಬ್ಬಿಸಿ ಹೊಲಕ್ಕೆ ಅಟ್ಟು ತ್ತಿದ್ದನು. ಗಂಡುಸರು ಹೆಂಗುಸರೆಂಬ ಭೇದವಿಲ್ಲದೆ ಯಜಮಾನನು ಅವರನ್ನು ವಿಧವಿಧವಾಗಿ ಹಿಂಸಿಸುತ್ತಿದ್ದನು. ಬೆಳಗ್ಗೆ ಹೊಲಕ್ಕೆ ಹೊರಡಲು ಯಾರಾ ದರೂ ದೇಹಾಲಸ್ಯದಿಂದ ಹಿಂದುಮುಂದು ನೋಡಿದುದೇ ಆದರೆ ಆ ಯಜ ಮಾನನು ಕೊಂಚವೂ ಕನಿಕರವಿಲ್ಲದೆ ಅಂತಹವರನ್ನು ಹೊಡೆದು ಬಡಿದು ಓಡಿಸುತ್ತಿದ್ದನು. ಇನ್ನು ಹೆಂಡಿರು ಮಕ್ಕಳಿದ್ದವರ ಪಾಡನ್ನಂತೂ ಹೇಳತೀ ರದು. ಗಂಡನೊಂದುಕಡೆ; ಹೆಂಡಿತಿಯೊಂದುಕಡೆ. ಒಂದುಸಲ ಬೇರೆಯಾ ಗಲುಪುನಃ ಅವರು ಒಬ್ಬರನ್ನೊಬ್ಬರು ನೋಡುವ ಸಂಭವವೇ ಇರಲಿಲ್ಲ.

೩. ಆಗಾಗ ಒಬ್ಬೊಬ್ಬರು ಕೃಪಾಳುಗಳಲ್ಲಿ ಆ ಗುಲಾಮರ ಕಷ್ಟದ ವಿಚಾರವು ತಲೆದೋರುತ್ತಿದ್ದುವು. ಲಿಂಕನ್ನನು ಎರಡನೆಯ ಸಾರಿ ನ್ಯೂ ಆರ್ಲಿಯನ್ಸಿಗೆ ಹೋದಾಗ ಆ ಗುಲಾಮರ ಮಾರಾಟದ ಅಂಗಡಿಗಳನ್ನು ನೋಡಿಬಂದಿದ್ದನು. ಅಂದಿನಿಂದ ಆ ನಿಗ್ರೋಜನರ ಕಷ್ಟಗಳು ಅವನ ಕಣ್ಣಿಗೆ ಕಟ್ಟಿದಂತಾಗಿದ್ದುವು. ಗುಲಾಮತನವನ್ನೇ ನಿರ್ಮೂಲಮಾಡಬೇ ಕೆಂಬುದು ಅವನ ಇಷ್ಟವಾದರೂ, ಆ ಬಡಪಾಯಿಗಳ ಮೇಲಿನ ಕರುಣದಿಂದ ನ್ಯಾಯಮಾರ್ಗವನ್ನು ಅತಿಕ್ರಮಿಸುವ ಇಷ್ಟವು ಅವನಿಗೆ ಇರಲಿಲ್ಲ. ಆ ಗುಲಾಮರಿಗೆ ಒಡನೆಯೇ ಸ್ವಾತಂತ್ರ್ಯವನ್ನುಂಟುಮಾಡುವುದರಿಂದ ಅವ ರಿಗೆ ಉಪಕಾರಮಾಡುವುದಕ್ಕೆ ಬದಲು ಕಷ್ಟವನ್ನು ಹೆಚ್ಚಿಸಿದಂತಾಗುವು ದೆಂದು ತಿಳಿದು, ಲಿಂಕನ್ನನು ತಕ್ಕಸಮಯವನ್ನು ನಿರೀಕ್ಷಿಸುತ್ತಾ ಸುಮ್ಮ ನಿದ್ದನು.

೪. ಆ ಕಾಲದಲ್ಲಿ ಅಮೇರಿಕಾಖಂಡದಲ್ಲಿ ಎರಡು ಪಂಗಡಗಳಿ ದ್ದುವು. ಗುಲಾಮರನ್ನಿಟ್ಟುಕೊಳ್ಳುವುದರಲ್ಲೇನೂ ತಪ್ಪಿಲ್ಲವೆಂದೂ, ಆ ನೀಗ್ರೋಜನರು ತಮ್ಮೂರಿನಲ್ಲಿರುವುದಕ್ಕಿಂತಲೂ ಇಲ್ಲಿ ಸೌಖ್ಯವಾಗಿರುವ ರೆಂದೂ, ಕಪ್ಪು ಜನರು ಕೆಲಸಮಾಡಲಿಕ್ಕೂ, ಬಿಳಿಯ ಜನರು ಅವರನ್ನಾಳ ಲಿಕ್ಕೂ ಹುಟ್ಟಿರುವರೆಂಬುದಾಗಿಯೂ ವಾದಿಸುತ್ತ ಒಂದು ಪಂಗಡದವರು ಗುಲಾಮರ ಸಂಖ್ಯೆಯನ್ನು ಕ್ರಮೇಣ ಹೆಚ್ಚಿಸುತ್ತಲೇ ಇದ್ದರು. ಮತ್ತೊಂದು ಪಂಗಡದವರಿಗೆ, ಇವರು ಬದ್ಧದ್ವೇಷಿಗಳಾಗಿ, ತಮ್ಮ ಜೊತೆಯ ಮನುಷ್ಯರನ್ನು ಗುಲಾಮರನ್ನಾಗಿ ಮಾಡಿಕೊಂಡು ಅವರಿಂದ ಶುಶ್ರೂಷೆ

ಯನ್ನು ಕೈಕೊಳ್ಳುವುದು ಬಹು ನೀಚವಾದಕೆಲಸವೆಂದು ಎಲ್ಲೆಲ್ಲಿಯೂ ಜನರಿಗೆ ಬೋಧಿಸಲಾರಂಭಿಸಿದ್ದರು. ಈ ಎರಡನೆಯ ಪಂಗಡದವರು ಮೊದಮೊದಲು ಸಂಖ್ಯೆಯಲ್ಲಿ ಬಹು ಕಡಿಮೆಯಾಗಿದ್ದು ೧೯ನೆಯ ಶತಮಾನದ ಇಸವಿಯಿಂದೀಚೆಗೆ ಪ್ರಬಲಿಸಿ ಎಲ್ಲೆಲ್ಲಿಯೂ ಹರಡಿಕೊಂಡು ಜನರ ಮನಸ್ಸನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳುತ್ತಿದ್ದರು. ಮೊದಲನೆಯ ಪಂಗಡದವರಿಗೆ ಡೆಮೋಕ್ರಾಟ್ (Democrat) ಎಂತಲೂ ಎರಡನೆಯದಕ್ಕೆ ಹ್ವಿಗ್ಸ್ (Whigs) ಎಂತಲೂ ಹೆಸರು. ಈ ಎರಡು ಪಂಗಡಗಳಿಗೂ ಮಧ್ಯೆ ಮತ್ತೊಂದು ಪಂಗಡವು ಕ್ರಮವಾಗಿ ತಲೆಯನ್ನೆತ್ತುತ್ತಿದ್ದಿತು. ಇವರು ದಾಸ್ಯವೃತ್ತಿಯನ್ನು ದ್ವೇಷಿಸುವವರಾದರೂ, ಹಿಂದುಮುಂದಿನ ಆಲೋಚನೆಯಿಲ ದೆ ಗುಲಾಮರಿಗೆಲ್ಲರಿಗೂ ಸ್ವಾತಂತ್ರ್ಯವನ್ನು ಕೊಟ್ಟುಬಿಟ್ಟರೆ ಅವರಿಗೆ ತಾವು ಮಾಡುವ ಉಪಕಾರಕ್ಕಿಂತಲೂ ಅಪಕಾರವು ಹೆಚ್ಚಾಗುವುದೆಂದೂ, ಅವರೊಡೆಯರಿಗೆ ಮಹಾನಷ್ಟವುಂಟಾಗುವುದೆಂದೂ, ದಾಸ್ಯವನ್ನು ಕ್ರಮ ಕ್ರಮವಾಗಿ ತಪ್ಪಿಸಬೇಕೆಂದೂ ಹೇಳುತ್ತಿದ್ದರು. ಈ ಮೂರನೆಯ ಪಂಗಡಕ್ಕೆ ರಿಪಬ್ಲಿಕನ್ಸ್ (Republicans) ಎಂದು ಹೆಸರು. ಲಿಂಕನ್ನನು ಈ ಮೂರನೆಯ ಪಂಗಡಕ್ಕೆ ಸೇರಿದವನು. ಗುಲಾಮರಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಅವರ ಯಜಮಾನರಿಗೆ ಬಹು ನಷ್ಟವನ್ನುಂಟುಮಾಡಿ, ಅವರ ದ್ವೇಷವನ್ನು ಸಂಪಾದಿಸಿಕೊಳ್ಳುವುದು ಲಿಂಕನ್ನಿಗೆ ಇಷ್ಟವಿರಲಿಲ್ಲ. ಎರಡುಪಂಗಡಕ್ಕೂ ನಷ್ಟವಾಗದ ಮಾರ್ಗವಾವುದಾದರೂ ಉಂಟೋ, ಎಂದು ಅವನು ಯೋಚಿಸುತ್ತಿದ್ದನು. ಅವರ ಜೀವನೋಪಾಯಮಾರ್ಗವಾವುದೆಂಬುದನ್ನು ತೋರಿಸಿಕೊಡದೆ ಅವರಿಗೆ ಸ್ವಾತಂತ್ರ್ಯವನ್ನುಂಟುಮಾಡಿ ಅನೇಕ ಕಷ್ಟಗಳಿಗೆ ಗುರಿಮಾಡುವುದು ಸರಿಯಲ್ಲವೆಂದು ಅವನು ತಿಳಿದಿದ್ದನು.

೫. ಗುಲಾಮರಿಗೆ ಸ್ವಾತಂತ್ರ್ಯವನ್ನುಂಟುಮಾಡಬೇಕೆಂದು ಯೋಚಿಸುತ್ತಿದ್ದವರೆಲ್ಲಾ ಔತ್ತರೇಯರೇ. ಇವರಿಗೆ ಗುಲಾಮರು ಅಷ್ಟು ಆವಶ್ಯಕವಾಗಿರಲಿಲ್ಲ. ಅದು ಮುಖ್ಯವಾಗಿ ಕೈಗಾರಿಕೆಗಳು ನಡೆಯುತ್ತಿದ್ದ ಪ್ರದೇಶ. ಅಲ್ಲಿಯ ಕಾರ್ಖಾನೆಗಳಲ್ಲಿ ಕೆಲಸಮಾಡಲು ನಾಜೂಕಾದ ಚಟುವಟಿಕೆಯುಳ್ಳ ಜನರು ಬೇಕಾಗಿದ್ದರೇ ಹೊರತು, ನೀಗ್ರೋಜನರ ಒರಟು ಕೆಲಸದಿಂದ ಅವರಿಗಷ್ಟು ಉಪಯೋಗವಾಗುವ ಸಂಭವವಿರಲಿಲ್ಲ. ದಕ್ಷಿಣದಲ್ಲಿಯಾದರೋ

ಬಹುಭಾಗದ ಜನರು ಬೇಸಾಯದಿಂದ ಜೀವಿಸುತ್ತಿದ್ದರು. ಹತ್ತಿಯ ವ್ಯವಸಾಯವೇ ಬಹು ಮುಖ್ಯವಾಗಿದ್ದಿತು. ತಮ್ಮ ಹತ್ತಿ ಹೊಲಗಳಲ್ಲಿ ಕೆಲಸಮಾಡುವುದಕ್ಕೆ ಕಾಯಶಕ್ತಿಯೊಂದಲ್ಲದೆ ಬುದ್ಧಿಶಕ್ತಿಯು ಬೇಡವಾಗಿದ್ದುದರಿಂದ ಅವರಿಗೆ ಗುಲಾಮರ ಕೆಲಸವು ಆವಶ್ಯಕವಾಗಿದ್ದಿತು. ನೀಗ್ರೊ ಜನರು ಸ್ವಲ್ಪ ಬೆಲೆಗೆ ಬರುತ್ತಲೂ, ಬಲು ಕಷ್ಟಪಟ್ಟು ಕೆಲಸಮಾಡುತ್ತಲೂ ಇದ್ದರು. ಅವರು ಗುಲಾಮರಿಗೆ ಕಷ್ಟವೇನೂ ಇಲ್ಲವೆಂದು ವಾದಿಸುತ್ತಿದ್ದರು. ಗುಲಾಮರನ್ನಿಟ್ಟುಕೊಂಡಿದ್ದವರಲ್ಲಿ ಒಳ್ಳೆಯವರೂ ಅಲ್ಲಲ್ಲಿ ಕೆಲವರಿದ್ದರು.

೬. ಔತ್ತರೇಯರು ಗುಲಾಮರ ಬಿಡುಗಡೆಗೆ ಪ್ರಯತ್ನಮಾಡಲಾರಂಭಿಸಿದಾಗ, ದಾಕ್ಷಿಣಾತ್ಯರಿಗೆ ಬಹುಕೋಪವುಂಟಾಗಿ ಸಮಯ ಬಂದರೆ ಔತ್ತರೇಯರಿಗೆ ತಕ್ಕ ಬುದ್ಧಿಯನ್ನು ಕಲಿಸಬೇಕೆಂದುಕೊಂಡಿದ್ದರು. ಈ ಸೂಚನೆಯನ್ನು ಲಿಂಕನ್ನನೇ ಮೊದಲಾದ ಕೆಲವರು ಕಂಡುಕೊಂಡು ಅದಕ್ಕೆ ಅವಕಾಶ ಕೊಡದಂತೆ ಉಪಾಯವನ್ನಾಲೋಚಿಸುತ್ತಿದ್ದರು. ಅವರು ಆಗ ದೇಶದಲ್ಲಿ ಕಂಡುಬರುತ್ತಿದ್ದ ಶಾಂತಿಯನ್ನೆಂದಿಗೂ ನಂಬಿರಲಿಲ್ಲ; ಅದು ಬಿರುಗಾಳಿಗೆ ಮುಂಚೆ ಪ್ರಕೃತಿಯಲ್ಲುಂಟಾಗುವ ಶಾಂತಿಗೆ ಸಮಾನವಾದುದೆಂದು ತಿಳಿದಿದ್ದರು. ಮತ್ತೆ ಕೆಲವರಾದರೋ ಅದೇ ನಿಶ್ಚಯವಾದುದೆಂದು ನಂಬಿ ಮೈಮರೆತಿದ್ದರು. ಲಿಂಕನ್ನಿನ ಪಂಗಡದವರು ಮುಂದೆ ಬರುವ ಬಿರುಗಾಳಿಯನ್ನು ನಿವಾರಿಸಲು ತಕ್ಕ ಸಲಕರಣೆಗಳನ್ನು ಅಣಿಮಾಡಿಕೊಳ್ಳುತ್ತಿದ್ದರು.

೭. ಬೇರೆಬೇರೆ ಪಂಗಡಗಳ ಉಪನ್ಯಾಸಕರು ಅಲ್ಲಲ್ಲಿ ಉಪನ್ಯಾಸಗಳನ್ನು ಮಾಡಿ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುತ್ತಿದ್ದರು. ಹೀಗೆಯೇ ಏಬ್ರಹಾಮನೂ ರಿಪಬ್ಲಿಕ್ ಪಂಗಡದವನಾಗಿ ದೇಶದ ಮೇಲೆ ಸುತ್ತುತ್ತ ಅಲ್ಲಲ್ಲಿ ಗುಲಾಮರ ವಿಚಾರವಾಗಿ ತಮ್ಮ ಪಂಗಡದವರಿಗಿದ್ದ ಅಭಿಪ್ರಾಯವನ್ನು ಜನಗಳಿಗೆ ತಿಳಿಸುತ್ತಿದ್ದನು. ಇವನ ಪೂರ್ವಸ್ನೇಹಿತನಾದ ಸ್ಟೀವನ್ ಡಗ್ಲಸ್ (Stephen Douglas) ಎಂಬವನೂ ಡೆಮೊಕ್ರ್ಯಾಟ್ ಪಂಗಡದವನಾಗಿ ಎಲ್ಲೆಲ್ಲಿಯೂ ಉಪನ್ಯಾಸಗಳನ್ನು ಮಾಡುತ್ತಿದ್ದನು. ಅನೇಕ ಸಮಯಗಳಲ್ಲಿ ಲಿಂಕನ್ನನು ಅವನನ್ನು ಇದಿರಿಸಬೇಕಾಗುತ್ತಿದ್ದಿತು. ಡಗ್ಲ

ಸನು ಸದ್ವಂಶಸ್ಥನಾಗಿಯೂ, ನೋಡುವುದಕ್ಕೆ ಸುಲಕ್ಷಣವಾಗಿಯೂ, ವಿದ್ಯಾವಂತನಾಗಿಯೂ ಇದ್ದುದಲ್ಲದೆ ಅವನಲ್ಲಿ ವಾಚಾಲತೆಯೂ ಬಹಳವಿದ್ದಿತು. ಆದುದರಿಂದ ಅವನನ್ನು ನೋಡಿದೊಡನೆಯೇ ಜನರಿಗೆ ಅವನ ಪಕ್ಷವನ್ನೇ ವಹಿಸಬೇಕೆಂಬ ಕುತೂಹಲವುಂಟಾಗುತ್ತಿದ್ದಿತು. ಅಂತಹವನೊಡನೆ ಲಿಂಕನ್ನನು ಬಹುಕಾಲ ಹೋರಾಡಬೇಕಾಯಿತು. ಲಿಂಕನ್ನನು ಉಪನ್ಯಾಸಕ್ಕೆ ಪ್ರಾರಂಭಿಸಿದೊಡನೆಯೇ ಅವನ ಮಾತಿಗೂ, ಬಟ್ಟೆಬರೆಗೂ ಜನರು ಹಾಸ್ಯ ಮಾಡುತ್ತ, ವಿಲಕ್ಷಣವಾದ ಹೆಸರು ಹಿಡಿದು ಕೂಗಿ ಗದ್ದಲಮಾಡುತ್ತಿದ್ದರು. ಲಿಂಕನ್ನನಾದರೋ ಅದಾವುದಕ್ಕೂ ಲಕ್ಷ್ಯಮಾಡದೆ ತನ್ನ ಕಾರ್ಯದಲ್ಲಿ ತಾನು ಸಂತತವಾಗಿ ನಿರತನಾಗಿರುತ್ತಿದ್ದನು. ಮೊದಮೊದಲು ಇವನಿಗೆ ಡಗ್ಲಸಿನಿಂದ ಕೆಲವುಕಡೆಗಳಲ್ಲಿ ಅವಮಾನವಾದರೂ ಕ್ರಮೇಣ ಇವನ ಪಕ್ಷವೇ ಗೆಲ್ಲುತ್ತ ಬಂದಿತು. ಎಡೆಬಿಡದೆ ತೊಟ್ಟಿಕ್ಕುತಿರುವ ನೀರಿಂದ ಅತಿ ಕಠಿಣ ಶಿಲೆಯೂ ಸವೆದುಹೋಗುವುದಷ್ಟೆ!

೮. ಹೀಗೆ ಎರಡುವರುಷಗಳು ಕಳೆದುವು. ದೇಶದಲ್ಲೆಲ್ಲೆಲ್ಲಿಯೂ ಶಾಂತಿಯು ನೆಲೆಗೊಂಡಿದ್ದಿತು. ಗುಲಾಮರಿಗೆ ಕಷ್ಟವೇನೂ ಇಲ್ಲದೆ ಸುಖವಾಗಿಯೇ ಇರುವರೆಂದು ಜನರು ತಿಳಿದರು. ೧೮೨೦ರಲ್ಲಿ ಸ್ವತಂತ್ರ ದಾಸ್ಯ ಸಂಸ್ಥಾನ (Free and Slave States) ಗಳಿಗೆ ೩೬ನೆಯ ಅಕ್ಷಾಂಶರೇಖೆಯನ್ನು ಎಲ್ಲೆಯಾಗಿ ಗೊತ್ತುಮಾಡಿಕೊಂಡು ಅದಕ್ಕೆ ಉತ್ತರದಲ್ಲಿರುವ ಸಂಸ್ಥಾನಗಳೆಲ್ಲಾ ಸ್ವಾತಂತ್ರ್ಯವಾದಿರಾಜ್ಯ (Free States) ಗಳೆಂದೂ ಅದಕ್ಕೆ ದಕ್ಷಿಣದಲ್ಲಿದ್ದುವೆಲ್ಲಾ ದಾಸ್ಯವಾದಿರಾಜ್ಯಗಳೆಂದೂ ಕರೆಯುತ್ತಿದ್ದರು. ಆ ವರ್ಷದಲ್ಲಿಯೇ ದೊಡ್ಡ ಸಂಸ್ಥಾನವಾಗಿದ್ದ ಮಿಸೌರಿಯು ದಾಸ್ಯವಾದಿವಿಭಾಗಕ್ಕೆ ಸೇರಿತು. ಭ್ರಾತೃರೇಯರಲ್ಲಿ ಅನೇಕರಿಗೆ ಇದು ಸರಿಹೋಗದೆ ಬಹು ಕಠಿನವಾಗಿ ಹೋರಾಡತೊಡಗಿದರು. ಸಂಸ್ಥಾನಗಳ ಸಂಸರ್ಗದಲ್ಲಿ ದಾಸ್ಯವಾದಿರಾಜ್ಯಗಳ ಸಂಖ್ಯೆಯು ಹೆಚ್ಚಿದಂತೆಲ್ಲಾ ಆ ಪ್ರಾಂತಗಳ ಪ್ರತಿನಿಧಿಗಳೂ ಹೆಚ್ಚಿ ಗುಲಾಮರ ವ್ಯಾಪಾರವು ತಗ್ಗುವುದಕ್ಕವಕಾಶವಿಲ್ಲದೇ ಅದು ದಿನಕ್ರಮೇಣ ಹೆಚ್ಚುವುದಕ್ಕೆ ಅನುಕೂಲಿಸುತ್ತಿದ್ದುದೆ ಇದಕ್ಕೆ ಕಾರಣ. ಇನ್ನು ಮುಂದಕ್ಕೆ ಯಾವ ರಾಜ್ಯವು ಸಂಸರ್ಗಕ್ಕೆ ಸೇರಬೇಕಾದರೂ ತಾವು ಯಾವಪಕ್ಷದವರೆಂಬುದನ್ನು ತಿಳಿಸಬೇಕೆಂದು ಕಟ್ಟಳೆಯಾಯಿತು. ಇದರಿಂದ ಯಾವುದಾದರೂ

ಸಂಸ್ಥಾನವು ಸಂಸರ್ಗಕ್ಕೆ ಸೇರಬೇಕಾದರೆ ಸರ್ಕಾರದವರು ಪರ್ಯಾಲೋಚಿಸುವುದಕ್ಕನುಕೂಲವಾಯಿತು. ಮಿಸೂರಿಯು ದಾಸ್ಯಸೀಮೆಯೆಂದು ಸಂಸರ್ಗಕ್ಕೆ ಸೇರಿದಾಗ ದೇಶದಲ್ಲೆಲ್ಲಾ ಗಲಭೆಯುಂಟಾಯಿತು. ಮತ್ತೆ ಕ್ಲೇಯು ಮುಂದೆ ಬಂದು ನಿಂತು ಮಿಸೂರಿ ಒಡಂಬಡಿಕೆ (Missouri Compromise) ಎಂಬ ಕಟ್ಟಡಕವೊಂದನ್ನು ಮಾಡಿ ಆಗ ದೇಶಕ್ಕೊದಗಿದ್ದ ತೊಂದರೆಯನ್ನು ತಪ್ಪಿಸಿದನು. ಸದ್ಯಕ್ಕೆ ಎಲ್ಲೆಯ ಗದ್ದಲವು ಅಲ್ಲಿಯೇ ಅಡಗಿತು.

## ಒಂಬತ್ತನೆಯ ಪ್ರಕರಣ.

### ಮೆಕ್ಸಿಕೋಯುದ್ಧ

೧. ಲಿಂಕನ್ನನು ೧೮೪೨ನೆಯ ವರುಷದಲ್ಲಿ ಎಂದರೆ ತನ್ನ ೩೩ನೆಯ ವಯಸ್ಸಿನಲ್ಲಿ ಕೆಂಟಕ್ಕಿ ದೇಶದ ಮೇರಿ ಟಾಡ್ ಎಂಬಾಕೆಯನ್ನು ಮದುವೆಯಾದನು. ನೋಡುವುದಕ್ಕೆ ಆಕೆಯು ರೂಪವತಿಯಾಗಿದ್ದುದೂ ಅಲ್ಲದೆ, ವಿದ್ಯಾವತಿಯೂ ಆಗಿದ್ದಳು. ಗೃಹಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಆಕೆಗಿಂತಲೂ ಶಕ್ತರಾದವರಾರೂ ಆ ಸುತ್ತುಮುತ್ತಲಲ್ಲಿ ಇರಲಿಲ್ಲವಾದುದರಿಂದ ನೆರೆಹೊರೆಯ ಹೆಂಗುಸರು ತಮಗೇನು ತಿಳಿಯದಿದ್ದರೂ ಬಂದು ಆಕೆಯನ್ನು ಕೇಳಿ ತಿಳಿದುಕೊಂಡು ಹೋಗುತ್ತಿದ್ದರು. ಆದರೂ ಆಕೆಯು ತನಗೆ ಕೊಂಚ ವಿದ್ಯೆಯು ಬರುತ್ತದೆಂಬ ಗರ್ವದಿಂದ ಕೊಬ್ಬಿ ಮೆರೆಯುತ್ತಿರಲಿಲ್ಲ. ಪತಿಯ ಹಿತವನ್ನೇ ಕೋರುತ್ತಾ ಆತನ ಪ್ರೀತಿಯನ್ನು ಸಂಪಾದಿಸಿಕೊಳ್ಳಲು ಸದಾ ಆಕೆಯು ಯತ್ನಿಸುತ್ತಿದ್ದಳು. ಆತನ ಆಯತಿಗೆ ಮೀರಿದ ಒಡವೆಗಾಗಲಿ ಬಟ್ಟೆಬರೆಗಾಗಲಿ ಒಂದು ದಿನವಾದರೂ ಕಾಡುತ್ತಿರಲಿಲ್ಲ. ಲಿಂಕನ್ನನು ಅಷ್ಟು ಧನವಂತನಲ್ಲದಿದ್ದರೂ, ಗಂಡಹೆಂಡಿರಿಬ್ಬರೂ ಒಬ್ಬರಿಗೊಬ್ಬರು ನೆರವಾಗಿ ಸಂಸಾರವನ್ನು ನಡೆಸುತ್ತಿದ್ದುದರಿಂದ ತೃಪ್ತಿ ಸಂತೋಷಗಳು ಆ ಮನೆಯಲ್ಲಿಯೇ ನೆಲೆಸಿದ್ದುದರಲ್ಲಿ ಆಶ್ಚರ್ಯವೇನು ?

೨. ಏಬ್ರಹಾಮನಿಗೆ ಕಾಲಕ್ರಮದಲ್ಲಿ ನಾಲ್ವರು ಮಕ್ಕಳಾದರು. ಅವರಲ್ಲಿ ಕಡೆಯ ಮೂವರು ಕೆಲವು ವರ್ಷಗಳು ಬಳೆದು ಸತ್ತುಹೋದರು.

ಇಂತಹ ವಿಯೋಗದಿಂದ ಸಾಮಾನ್ಯರಿಗೆ ಸಹಿಸಲಾರದ ದುಃಖವಾದರೂ, ಲಿಂಕನ್ನನೂ ಅವನ ಸತಿಯೂ ಆ ಶೋಕವನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ 'ಕೊಟ್ಟದೇವರು ಕಿತ್ತುಕೊಂಡು ಹೋದರೆ ಕುಟ್ಟಿಕೊಂಡು ಅಳಲೇಕೆ?' ಎಂಬಂತೆ ಸ್ವಸ್ಥಚಿತ್ತರಾಗಿರುತ್ತಿದ್ದರು. ಅವರ ಹಿರಿಯ ಮಗನಾದ ರಾಬರ್ಟ್ ಲಿಂಕನ್ನನು ದೊಡ್ಡವನಾದ ಮೇಲೆ ಸೈನ್ಯದಲ್ಲಿ ಕಾರ್ಯದರ್ಶಿಯಾದನು.

೩. ಲಿಂಕನ್ನನು ಪ್ರಜಾಪ್ರತಿನಿಧಿಸಭೆಯಲ್ಲಿದ್ದಷ್ಟು ಕಾಲವೂ ನಿರ್ವಂಚನೆಯಿಂದ ಕೆಲಸಮಾಡುತ್ತ ತನ್ನ ಸಂಸ್ಥಾನಕ್ಕೆ ಬಹುಸಹಾಯಮಾಡಿದನು. ಅಷ್ಟರಿಂದಲೇ ಅವನು ತೃಪ್ತನಾಗದೆ ಅವನು ಒಟ್ಟುದೇಶಕ್ಕೆಲ್ಲಾ ಸಹಾಯಮಾಡಬಹುದಾದ ಆವುದಾದರೊಂದು ಉದ್ಯೋಗವನ್ನು ಸಂಪಾದಿಸಬೇಕೆಂದುಕೊಂಡನು. ಈಸಲ ಅವನ ದೃಷ್ಟಿಯು ರಾಷ್ಟ್ರಸಭೆ (Congress) ಯ ಮೇಲೆ ಬಿದ್ದಿತು. ಆ ಸಭೆಗೆ ತಾನು ಸದಸ್ಯನಾದರೆ ಆಗ ರಾಷ್ಟ್ರಕ್ಕೆಲ್ಲಾ ದೊಡ್ಡ ಉಪಕಾರವನ್ನು ಮಾಡಬಹುದೆಂದು ಭಾವಿಸಿದನು. ಈ ಮಧ್ಯೆ ಗುಲಾಮರ ವಿಷಯವು ಮತ್ತೊಂದು ವೇಳೆ ತಲೆಯೆತ್ತಿದ್ದು ಹೆನ್ರಿ ಕ್ಲೇಯ ಬುದ್ಧಿಬಲದಿಂದ ಅಲ್ಲಿಯೇ ತಣ್ಣಗಾಗಿದ್ದಿತು.

೪. ಇಲ್ಲಿ ಅಮೇರಿಕಾದೇಶದ ರಾಜ್ಯಭಾರವನ್ನು ಕುರಿತು ಸ್ವಲ್ಪ ತಿಳಿಸಬೇಕಾಗಿದೆ. ಈ ದೇಶದಲ್ಲಿ ಪ್ರಜಾಪ್ರತಿನಿಧಿಪ್ರಭುತ್ವವು ನೆಲೆಗೊಂಡಿದೆ. ಈ ಪ್ರಭುತ್ವಾಧ್ಯಕ್ಷನೇ ರಾಷ್ಟ್ರಕ್ಕೆಲ್ಲಾ ಅಧಿಪತಿ. ಅವನೇ ಮುಖ್ಯ ಸೇನಾಧಿಪತಿಯೂ ಹೌದು. ಅವನು ರಾಷ್ಟ್ರೀಯಸಭೆಯ ಅಭಿಮತವಿಲ್ಲದೆ ಯಾವಕಾರ್ಯವನ್ನೂ ಮಾಡಲಾಗದು. ಈ ಸಭೆಯಲ್ಲಿ ಸೆನೆಟ್ ಎಂದೂ, ಪ್ರಜಾಪ್ರತಿನಿಧಿಸಭೆಯೆಂದೂ ಹೆಸರಿರುವ ಎರಡು ವಿಭಾಗಗಳುಂಟು. ಸೆನೆಟ್ಟಿಗೆ ಸದಸ್ಯರುಗಳನ್ನು ಆರುವರುಷಕ್ಕೊಂದಾವೃತ್ತಿಯೂ, ಪ್ರಜಾಪ್ರತಿನಿಧಿ (Representative) ಸಭೆಗೆ ಎರಡು ವರುಷಕ್ಕೊಂದುಬಾರಿಯೂ ಆರಿಸುವರು. ಪ್ರತಿಯೊಂದು ಸಂಸ್ಥಾನವೂ ಸೆನೆಟ್ಟಿಗೆ ಇಬ್ಬರನ್ನೂ ಪ್ರಜಾಪ್ರತಿನಿಧಿಸಭೆಗೆ ತನ್ನ ಜನಸಂಖ್ಯೆಗೆ ತಕ್ಕಂತೆ ಪ್ರತಿನಿಧಿಗಳನ್ನೂ ಕಳುಹಿಸುತ್ತದೆ. ೨೧ ವರುಷಕ್ಕೆ ಕಡಿಮೆ ಇಲ್ಲದ ಪ್ರತಿಯೊಬ್ಬ ಪುರುಷನಿಗೂ ಪ್ರಜಾಪ್ರತಿನಿಧಿಸಭೆಗೆ ಮೆಂಬರನ್ನು ಆರಿಸುವ ಹಕ್ಕುಂಟು. ಪ್ರತಿಯೊಂದು

ಸಂಸ್ಥಾನದಲ್ಲಿಯೂ, ಒಬ್ಬ ಗೌರ್ನರ್ (Governor), ಒಂದು ಸೆನೆಟ್, ಒಂದು ಪ್ರಜಾಪ್ರತಿನಿಧಿಸಭೆ ಉಂಟು. ಈ ಸಂಸ್ಥಾನಗಳು ಒಳಆಡಳ ತಕ್ಕೆ ದೇಶಾಧ್ಯಕ್ಷನ ಅನುಮತಿಯನ್ನು ಕೇಳಬೇಕಾಗುದಿಲ್ಲ.

೫. ಲಿಂಕನ್ನನು ರಾಷ್ಟ್ರೀಯ ಸಭೆಯ ಸದಸ್ಯನಾಗಬೇಕೆಂಬ ಉದ್ದೇಶದಿಂದ ೧೮೪೦ರಲ್ಲಿ ನಡೆದ ನ್ಯಾಯವಿಧಾಯಕಸಭೆಗೆ ತನ್ನ ಹೆಸ ನ್ನು ಕೊಡಲಿಲ್ಲ. ರಾಷ್ಟ್ರೀಯಸಭೆಯ ಸದಸ್ಯರುಗಳ ಚುನಾವಣೆಯು ೧೮೪೪ರಲ್ಲಿ ನಡೆಯುವುದಾಗಿದ್ದಿತು. ಆ ಸಮಯವನ್ನೇ ಇದಿರುನೋಡ ತ್ತಿದ್ದ ಏಬ್ರಹಾಮ್‌ಲಿಂಕನ್ನನು ತನ್ನ ಹೆಸರನ್ನು ಕೊಟ್ಟನು. ಇದನ್ನು ತಿಳಿ ಇವನ ಸ್ನೇಹಿತರೆಲ್ಲರೂ ಒಟ್ಟುಗೂಡಿ ದೇಶದ ಮೇಲೆಲ್ಲಾ ಸುತ್ತಿ ಉಪನ್ಯಾ ಗಳನ್ನು ಮಾಡಿ ಎಷ್ಟೋ ಕಷ್ಟಪಟ್ಟರೂ ಲಿಂಕನ್ನಿಗೆ ಚುನಾವಣೆಯಾ ಲಿಲ್ಲ ಈ ಬಗೆಯ ಆಶಾಭಂಗಗಳು ಪದೇ ಪದೇ ತನಗೆ ಆಗುತ್ತಿದ್ದರು ಲಿಂಕನ್ನನು ಕೊಂಚವೂ ಗಮನಿಸದೆ ಪುನಃಪುನಃ ಯತ್ನಿಸುತ್ತಿದ್ದನು ಆಶ ಭಂಗದಿಂದ ಅವನ ಉತ್ಸಾಹವು ಕುಂದುವುದಕ್ಕೆ ಬದಲು ವೃದ್ಧಿಯಾಗುತ್ತಿ ದ್ದಿತು. ಲಿಂಕನ್ನನು ಎಂದಿನಂತೆಯೇ ಸ್ವಸ್ಥಚಿತ್ತನಾಗಿ ತನ್ನ ಕಾರ್ಯದಲ್ಲಿ ಮಗ್ನನಾಗಿರುತ್ತಿದ್ದನು ಇಷ್ಟರಲ್ಲಿಯೇ ದೇಶಾಧ್ಯಕ್ಷನ ಚುನಾವಣೆಗೆ ಪ್ರಯ ತ್ನಗಳು ನಡೆಯಲಾರಂಭವಾಗುವು. ಲಿಂಕನ್ನಿನ ಪೂರ್ವಸ್ನೇಹಿತನಾದ ಹೆನ್ರಿ ಕ್ಲೇಯು ಈ ಸಲ ಚುನಾವಣೆಗೆ ನಿಂತಿದ್ದನು. ಕ್ಲೇಯ ನಡೆನುಡಿಗಳನ್ನೆಷ್ಟು ಮೆಚ್ಚಿದ್ದನೆಂಬುದನ್ನು ಮೊದಲೇ ತಿಳಿಸಿರುವೆವು. ಈಗ ಅಂತಹವನು ಚುನಾ ವಣೆಗೆ ನಿಂತಿದ್ದುದರಿಂದ ಲಿಂಕನ್ನನು ಅವನನ್ನೇ ದೇಶಾಧ್ಯಕ್ಷನನ್ನಾಗಿ ಮಾ ಬೇಕೆಂದು ಬಗೆದು ದೇಶದಮೇಲೆಲ್ಲಾ ಸುತ್ತುತ್ತ ಉಪನ್ಯಾಸಗಳನ್ನು ಮಾಡು ತ್ತಿದ್ದನು. ಆದರೆ ಅವನ ಶ್ರಮವೆಲ್ಲಾ ನಿರರ್ಥಕವಾಗಿ ಡೆಮೊಕ್ರಾಟ್ ಪಂ ಡದವನಾದ ಜೇಮ್ಸ್ ಪೋಲ್ಕ (James Polk)ನು ದೇಶಾಧ್ಯಕ್ಷನಾದನು. ಅ ನು ದಾಸ್ಯವಾದಿಯಾಗಿದ್ದುದರಿಂದ, ದಾಸ್ಯನಿರೋಧಕರಾದ ಔತ್ತರೇಯರಿ ದೊಡ್ಡ ಪೆಟ್ಟು ಬಿದ್ದಂತಾಗಿ ಅದುವರೆಗೂ ದಾಸ್ಯವನ್ನು ತಪ್ಪಿಸಲು ಅವರ ಮಾಡಿದ್ದ ಕೆಲಸವೆಲ್ಲವೂ ನಿರರ್ಥಕವಾಗುವ ಸಂಭವವೊದಗಿತು. ಪೋಲ್ಕನ ದಾಸ್ಯದಲ್ಲಿ ತಪ್ಪೇನೂ ಇಲ್ಲವೆಂದರಿತಿದ್ದುದರಿಂದ ಅದನ್ನು ಹೆಚ್ಚಿಸಲು ಅನೇ ನಿಯಮಗಳನ್ನು ಮಾಡುವವನಾಗಿದ್ದನು. ಔತ್ತರೇಯರಲ್ಲಿ ಗೊಣಗಾ

ವಾರಂಭವಾಯಿತು. ಹೀಗಿರುವಲ್ಲಿ ಟೆಕ್ಸಾಸ್ ಸಂಸ್ಥಾನವು ದಾಸ್ಯವಾದಿ ಸೀಮೆಯಾಗಿ ಸಂಸರ್ಗಕ್ಕೆ (Union) ಸೇರಲು ಪ್ರಯತ್ನಮಾಡಿದಾಗ ದಾಕ್ಷಿಣಾತ್ಯರೆಲ್ಲರೂ ಆ ಸಂಸ್ಥಾನಕ್ಕೆ ಒತ್ತಾಸೆಮಾಡಿದರು. ಅದು ಸಂಸರ್ಗಕ್ಕೆ ಸೇರುವುದನ್ನು ತಪ್ಪಿಸಬೇಕೆಂದು ಔತ್ತರೇಯರು ಇನ್ನಿಲ್ಲದಷ್ಟು ಪ್ರಯತ್ನ ಮಾಡಿದರೂ ಕೊನೆಗೆ ದಾಕ್ಷಿಣಾತ್ಯರ ಹಠವೇ ಗೆದ್ದು ಟೆಕ್ಸಾಸು ಸಂಸರ್ಗಕ್ಕೆ ಸೇರಿತು. ಇದರಿಂದ ಸಂಸರ್ಗದಲ್ಲಿ ದಾಸ್ಯವಾದಿಗಳ ಪಂಗಡವು ಬಲವಾಯಿತು.

೬. ಈಮಧ್ಯೆ ದೊಡ್ಡ ಗದ್ದಲವೊಂದು ಆರಂಭವಾಯಿತು. ೧೮೨೦ನೆಯ ವರ್ಷದ ವರೆಗೂ ಟೆಕ್ಸಾಸ್ ದೇಶವು ಸ್ಪೈಯಿನ್ ರಾಜ್ಯಕ್ಕೆ ಸೇರಿದ್ದಿತು. ಅದೇ ವರುಷದಲ್ಲಿ ಮೆಕ್ಸಿಕೋ ದೇಶವು ಸ್ಪೈಯಿನ್ನಿನ ಅಧೀನದಿಂದ ತಪ್ಪಿಸಿಕೊಳ್ಳಲು, ಅದರ ಪಕ್ಕದಲ್ಲಿಯೇ ಇದ್ದ ಟೆಕ್ಸಾಸೂ ಸ್ವತಂತ್ರವಾಯಿತು. ಈ ಎರಡು ಸೀಮೆಗಳ ಮಧ್ಯದಲ್ಲಿದ್ದ ಪ್ರದೇಶವೆಲ್ಲಾ ಕಾಡು ಬೆಳೆದುಕೊಂಡಿದ್ದುದರಿಂದ ಜನರು ಆ ಕಾಡುಪ್ರದೇಶವೇನೂ ಉಪಯೋಗವಾದುದಲ್ಲವೆಂದರಿತು ಆಯಾ ಸೀಮೆಗಳ ಎಲ್ಲೆಯನ್ನು ಗೊತ್ತುಮಾಡಲಾರದೆ ಬಿಟ್ಟುಬಿಟ್ಟಿದ್ದರು. ಜನರು ಕ್ರಮೇಣ ನಾಗರಿಕರಾಗಲು ಆ ಅರಣ್ಯಪ್ರದೇಶವು ಬಹಳ ಪ್ರಯೋಜನಕರವಾದುದೆಂದರಿತು ಸುತ್ತುಮುತ್ತಿನ ಜನರು ಅದನ್ನಾಕ್ರಮಿಕೊಳ್ಳಲಾರಂಭಿಸಿದ್ದರು. ಟೆಕ್ಸಾಸ್ ದೇಶದ ಜನಸಂಖ್ಯೆಯು ಹೆಚ್ಚಿ ಅದು ಸಂಸರ್ಗಕ್ಕೆ ಸೇರಿತು. ಒಡನೆಯೇ ಆ ಎರಡು ರಾಜ್ಯಗಳಿಗೂ ತಮ್ಮ ಎಲ್ಲೆಕಟ್ಟಿನ ವಿಚಾರದಲ್ಲಿ ವಿವಾದವು ಮೊದಲಾಯಿತು. ತಾವು ತಾವೇ ಸಾಧ್ಯವಾದಷ್ಟು ಕಾಡುಪ್ರದೇಶವನ್ನಾಕ್ರಮಿಸಿಕೊಳ್ಳಬೇಕೆಂದು ಎರಡು ಪಂಗಡದವರೂ ಯತ್ನಿಸುತ್ತಿದ್ದರಾದುದರಿಂದ ಒಬ್ಬೊಬ್ಬರು ಒಂದೊಂದು ಎಲ್ಲೆಯನ್ನು ಗೊತ್ತುಮಾಡಿಕೊಂಡರು. ಒಬ್ಬರ ಮಾತನ್ನು ಇನ್ನೊಬ್ಬರು ಒಪ್ಪಲಿಲ್ಲ. ಒಬ್ಬರಾದರೂ ತಮ್ಮ ಹಕ್ಕಿನಲ್ಲಿ ತಿಲಾಂಶವನ್ನಾದರೂ ಬಿಟ್ಟುಕೊಡಲು ಸಮ್ಮತಿಸರು. ಆದುದರಿಂದ ಆ ಎಲ್ಲೆಯನ್ನು ಗೊತ್ತುಮಾಡಲು ಯುದ್ಧವಲ್ಲದೆ ಮತ್ತಾವ ಉಪಾಯವೂ ಇರಲಿಲ್ಲ. ಮೆಕ್ಸಿಕೋದೇಶವು ಯುದ್ಧವನ್ನಾರಂಭಿಸಿತು. ಟೆಕ್ಸಾಸು ಸಂಸರ್ಗದ ಸಹಾಯವನ್ನು ಕೇಳಿತು. ದೇಶಾಧ್ಯಕ್ಷನಾದ ಪಾಲ್ಕನು

(Polk) ವಿವೇಕಿಯಾಗಿದ್ದಿದ್ದರೆ ಯುದ್ಧಕ್ಕೆ ಕೈಹಾಕದೇ ಆ ಎರಡು ದೇಶಗಳಿಗೂ ಉಂಟಾಗಿದ್ದ ವಿವಾದವನ್ನು ಹಾಗೆಯೇ ಪರಿಹರಿಸುತ್ತಿದ್ದನು. ಆದರೆ ಅವನಿಗೆ ಆಕಾಲದಲ್ಲಿ ದಂಡೋಪಾಯವೊಂದು ಹೊರತು ಮತ್ತೊಂದು ಉಪಾಯವು ಸರಿದೋರಲಿಲ್ಲ. ಆದುದರಿಂದ ಯುದ್ಧಕ್ಕೆ ಮೊದಲಾಯಿತು.

೭. ಅಮೇರಿಕದ ಸಂಸರ್ಗವು ಟೆಕ್ಸಾಸ್ ಪರವಾಗಿ ಮೆಕ್ಸಿಕೋ ದೇಶದೊಡನೆ ಯುದ್ಧಕ್ಕೆ ಹೊರಟಿತು. ಪೋಲ್ಕನು ಸಂಸರ್ಗದ ಮುಖ್ಯ ಸೇನಾಧಿಪತಿಯಾಗಿದ್ದ ಟೆಯ್ಲರ್ (Taylor) ಎಂಬಾತನಿಗೆ ಹೇಳಿದನು. ಟೆಯ್ಲರನು ವಯೋವೃದ್ಧನೂ ಜ್ಞಾನವೃದ್ಧನೂ ಆಗಿದ್ದನು. ಆತನು ಅನುಭವಶಾಲಿಯೂ ಯುಕ್ತಾಯುಕ್ತವಿಚಾರಜ್ಞನೂ ಆಗಿದ್ದುದರಿಂದ ಕಣ್ಣುಮುಚ್ಚಿಕೊಂಡು ಯುದ್ಧಸಾಗರದಲ್ಲಿ ದುಮುಕುವುದು ಅವನಿಗೆ ಇಷ್ಟವಿರಲಿಲ್ಲ ಆದರೂ ದೇಶಾಧ್ಯಕ್ಷನ ಮಾತನ್ನು ಮೀರಲಾರದೆ ಸೈನ್ಯ ಸಮೇತನಾಗಿ ಹೊರಟನು. ಮೆಕ್ಸಿಕೋ ಜನರುಇವನ ಇದಿರಿಗೆ ನಿಲ್ಲಲಾರದೆ ಓಡಿಹೋದರು. ಇಷ್ಟಕ್ಕೆ ಬಿಡದೆ ಟೆಯ್ಲರನು ಅವರನ್ನು ಹರಿಸಿಕೊಂಡು ಮೆಕ್ಸಿಕೋ ದೇಶದೊಳಕ್ಕೆ ನುಗ್ಗಿದನು ಶತ್ರುಸೈನ್ಯಕ್ಕೆ ತಮ್ಮ ದೇಶದಲ್ಲಿ ಮತ್ತಷ್ಟು ಬಲವು ಸೇರಲು ಮೆಕ್ಸಿಕೋ ಜನರು ಹಿಂದಿರುಗಿ ಟೆಯ್ಲರನ್ನು ಇದಿರಿಸಿದರು. ಈಗ ಟೆಯ್ಲರನಿಗೆ ತೊಂದರೆಯಾಯಿತು.

೮. ಈ ಯುದ್ಧವು ಅನೇಕರಿಗೆ ಇಷ್ಟವಾಗಿರಲಿಲ್ಲ. ಇದರಿಂದ ದೇಶಕ್ಕೆಲ್ಲಾ ಅಪಾರವಾದ ನಷ್ಟವು ಸಂಭವಿಸುವುದೆಂದು ಅವರು ವಾದಿಸಿದರು. ಯಾವುದೋ ಒಂದು ಅಲ್ಪ ವ್ಯಾಜ್ಯಕ್ಕೋಸುಗ ಯುದ್ಧವನ್ನು ಪ್ರಾರಂಭಿಸಿ ಅಷ್ಟು ಜನರನ್ನು ಕೊಲ್ಲಿಸುವುದು ಯುಕ್ತವಲ್ಲವೆಂದು ಗೊಣಗುಟ್ಟಿದರು. ದೇಶಾಧ್ಯಕ್ಷನಿಗೆ ಯುದ್ಧದಲ್ಲಿ ಇಷ್ಟವೆಂದೂ, ಅದರಲ್ಲಿ ಅಭಿಲಾಷೆ ಇಲ್ಲದಿದ್ದರೆ ಮೊದಲೇ ಆ ವ್ಯಾಜ್ಯವನ್ನು ಸುಲಭೋಪಾಯದಲ್ಲಿ ಸರಿಪಡಿಸುತಿದ್ದನೆಂದೂ ಅವರು ತಿಳಿದುದಲ್ಲದೆ, ಆ ಯುದ್ಧದ ಅನಾಹುತಗಳಿಗೆಲ್ಲಾ ಪೋಲ್ಕನನ್ನೇ ಗುರಿಮಾಡಿದರು. ಹೀಗೆ ಮಾಡಿದ ಜನರಲ್ಲಿ ಲಿಂಕನ್ನನೂ ಒಬ್ಬನು.

೯. ಯುದ್ಧವು ಕೊಂಚ ಹೆಚ್ಚುಕಡಿಮೆ ಒಂದು ವರ್ಷ ನಡೆದು ಕಡೆಗೆ ಮೆಕ್ಸಿಕನರು ಇನ್ನು ಹೆಚ್ಚುಕಾಲ ಹೋರಾಡಲಾರದೆ ಸಂಧಿಗೆ ಪ್ರಾರ್ಥಿಸಿದರು. ಸಂಧಿಯಾಗಿ ಎಲ್ಲವೂ ಗೊತ್ತಾಯಿತು. ಈ ಯುದ್ಧದಿಂದ

ಅನೇಕ ಫಲವತ್ತಾದ ಪ್ರದೇಶಗಳು ಸಂಯುಕ್ತಸಂಸ್ಥಾನಗಳಿಗೆ ಸೇರಿದುವಾದರೂ ಭ್ರಾತ್ತರೇಯರು ಈ ಲಾಭವನ್ನು ತೃಣಕ್ಕಿಂತಲೂ ಕೀಳಾಗಿ ತಿಳಿದು ಯುದ್ಧದಲ್ಲಿ ಹತರಾದ ಸಾವಿರಾರು ವೀರಯೋಧರಿಗೋಸುಗ ಕಣ್ಣೀರು ಸುರಿಸುತ್ತ ಪೊಲ್ಕನನ್ನು ಬೈದರು. ದೇಶದಮೇಲೆಲ್ಲಾ ಜಯಸೂಚಕೋತ್ಸವಗಳು ನಡೆಯುತ್ತಿರುವಲ್ಲಿ ಅನೇಕ ಗೃಹಗಳು ಶ್ಮಶಾನಸದೃಶಗಳಾಗಿ, ಜನರ ಆರ್ತಸ್ವರದಿಂದ ತುಂಬಿದ್ದುವು

೧೦ ಈ ಯುದ್ಧವು ನಡೆಯುತ್ತಿರುವಾಗಲೇ ಚುನಾವಣೆಯು ನಡೆದು ಲಿಂಕನ್ನನು ಒಬ್ಬ ಸದಸ್ಯನಾಗಿ ರಾಷ್ಟ್ರೀಯಸಭೆ (Congress) ಯಲ್ಲಿ ಕುಳಿತನು. ಇವನು ತನ್ನ ನೂತನಪದವಿಗೆ ಬಂದೊಡನೆಯೇ ಪೊಲ್ಕನ ರಾಜ್ಯಭಾರದಲ್ಲಿದ್ದ ಅವಿವೇಕಗಳನ್ನೂ ಹುಳುಕುಗಳನ್ನು ಎತ್ತಿಹಾಕಿ ಖಂಡಿಸಿ ಎಲ್ಲೆಲ್ಲಿಯೂ ಉಪನ್ಯಾಸಮಾಡಲಾರಂಭಿಸಿದನು. ಲಿಂಕನ್ನನು ಇಂತಹ ದೊಡ್ಡಪದವಿಗೆ ಬಂದರೂ ತನ್ನ ಪೂರ್ವದ ಉಡುಪನ್ನುಮಾತ್ರ ಬದಲಾಯಿಸಲಿಲ್ಲ. ಹಿಂದಿನಂತೆಯೇ ಅವನ ಬಟ್ಟೆಬರೆಗಳು ಬಹು ಬಿಗಿಯಾಗಿ ಕೈಕಾಲುಗಳು ಹೊರಗೆ ಚಾಚಿಕೊಂಡಿದ್ದುವು. ಇದರಿಂದ ಮೊದಮೊದಲು ಇವನು ಅನೇಕರ ಹಾಸ್ಯಕ್ಕೆ ಗುರಿಯಾದರೂ, ಅದನ್ನು ಸಡ್ಡೆಮಾಡದೆ ತನ್ನ ಕೆಲಸಕಾರ್ಯಗಳಲ್ಲಿ ಮಗ್ನನಾಗಿರುತ್ತಿದ್ದನು. ಬಹುಕಾಲದಿಂದಲೂ ಅಪೇಕ್ಷಿಸುತ್ತಿದ್ದು ಸಿಕ್ಕಿದ ಆ ಪದವಿಗೆ ತಾನು ಅರ್ಹನೆನಿಸಿಕೊಳ್ಳಲು ಸದಾಪ್ರಯತ್ನಿಸುತ್ತಿದ್ದನು. ಅವನು ಸ್ಪ್ರಿಂಗ್‌ಫೀಲ್ಡಿನಲ್ಲಿದ್ದಾಗ ಎಲ್ಲರಿಗಿಂತಲೂ ಬುದ್ಧಿವಂತನಾಗಿದ್ದನು. ಇಲ್ಲಿ ಅವನು ಅನೇಕ ಮೇಧಾವಿಗಳಲ್ಲೊಬ್ಬನು. ಸಾಮಾನ್ಯ ಜನರು ಅವನ ವಿಷಯವಾಗಿ ತಮತಮಗೆ ತೋರಿದಂತೆ ಮಾತನಾಡಿಕೊಳ್ಳುತಿದ್ದರೇ ಹೊರತು ಅವನ ಸ್ನೇಹಿತರೆಲ್ಲರೂ ಅವನಿಗೆ ಎಷ್ಟೋಮರ್ಯಾದೆಯನ್ನು ಕೊಡುತ್ತಿದ್ದರು. ಲಿಂಕನ್ನನು ಬಾಹ್ಯಾಡಂಬರಕ್ಕೆ ಕೊಂಚವೂ ಮನಗೊಟ್ಟವನಲ್ಲ. ಅವನು ಆ ಪದವಿಯಲ್ಲಿದ್ದಾಗ ಅವನ ಸ್ನೇಹಿತರು "ಲಿಂಕನ್! ನೀನೂ ಒಂದುದಿನ ದೇಶಾಧ್ಯಕ್ಷನಾಗುವೆ" ಎಂದರೆ ಅವನು ನಕ್ಕು ಅದೆಲ್ಲಾ ಸ್ವಪ್ನಪ್ರಾಯವೆಂದು ಹೇಳುತ್ತಿದ್ದನು.

೧೧ ಮೆಕ್ಸಿಕೋ ಯುದ್ಧವು ಮುಗಿದಮೇಲೆ ಟೆಯ್ಲರನು ಜನರ

ವಿಶ್ವಾಸಕ್ಕೆ ಪಾತ್ರನಾದನು. ಮುಂದೆ ದೇಶಾಧ್ಯಕ್ಷರ ಚುನಾವಣೆಯಲ್ಲಿ ಅವನನ್ನೇ ಆರಿಸಬೇಕೆಂದು ಲಿಂಕನ್ನನು ಎಲ್ಲರಿಗೂ ಹೇಳುತ್ತಾ ಬಂದನು. ಟೆಯ್ಲರನು ಅಧ್ಯಕ್ಷನಾದರೆ ತನಗೆ ಆವುದಾದರೊಂದು ದೊಡ್ಡ ಉದ್ಯೋಗವು ದೊರೆಯುವುದೆಂದು ಲಿಂಕನ್ನನು ತಿಳಿದಿದ್ದನು. ಆದರೆ ಇದರಲ್ಲಿಯೂ ಅವನಿಗೆ ಆಶಾಭಂಗವಾಯಿತು. ಚುನಾವಣೆ ನಡೆದು ಟೆಯ್ಲರನು ಅಧ್ಯಕ್ಷನಾಗಲು, ಅವನು ಲಿಂಕನ್ನಿನ ನಡತೆಗೆ ಮೆಚ್ಚಿ ದೂರದಲ್ಲಿದ್ದ ಆರೆಗಾನ್ (Oregon)ದೇಶದ ಗವರ್ನರಾಗಿ ನಿಯಮಿಸಿದ್ದನು. ಅದು ಲಿಂಕನ್ನನಿಗೆ ಇಷ್ಟವಾಗಿರಲಿಲ್ಲ; ವಾಷಿಂಗ್‌ಟನ್ ಪಟ್ಟಣದಲ್ಲಿಯೇ ಯಾವುದಾದರೂ ಕೆಲಸವು ದೊರೆಯಬಹುದೆಂದು ನಂಬಿದ್ದನು. ಇದರಿಂದ ಟೆಯ್ಲರನು ಕೃತಘ್ನನೆಂದು ನಾವು ತಿಳಿಯಲಾಗದು. ಅವನಿಗೆ ಲಿಂಕನ್ನಿನ ಹೆಸರುಮಾತ್ರ ತಿಳಿದಿದ್ದುದಲ್ಲದೆ ಅವನ ಸ್ವಭಾವವು ಚೆನ್ನಾಗಿ ಗೊತ್ತಿರಲಿಲ್ಲ. ಲಿಂಕನ್ನಿನ ಹೆಂಡತಿಯು ಅಷ್ಟು ದೂರದೇಶಕ್ಕೆ ಹೋಗಲು ಒಪ್ಪಲಿಲ್ಲವಾಗಿ ಲಿಂಕನ್ನನು ಆಕೆಲಸಕ್ಕೆ ರಾಜಿನಾಮೆ ಕೊಟ್ಟು ತನ್ನ ಊರಿಗೆ ಬಂದು ಪೂರ್ವದಂತೆ ವಕೀಲವೃತ್ತಿಯಿಂದ ಜೀವನಮಾಡುತ್ತಿದ್ದನು.

## ಹತ್ತನೆಯ ಪ್ರಕರಣ

### ಗುಲಾಮರ ವೃತ್ತಾಂತ

೧ ಮಿಸೌರಿ ದೇಶವು ದಾಸ್ಯವಾದಿಸೀಮೆಯಾಗಿ ಸಂಸರ್ಗಕ್ಕೆ ಸೇರಿದಾಗ ಕೊಂಚ ಗಲಭೆಯಾಗಿ, ಕ್ಲೇ(Clay)ಯ ಯುಕ್ತಿಯಿಂದ ಎಲ್ಲವೂ ಸಮಾಧಾನಸ್ಥಿತಿಗೆ ಬಂದು ದಾಸ್ಯಸ್ವಾತಂತ್ರ್ಯವಾದ ಸೀಮೆಗಳಿಗೆ ಎಲ್ಲೆಯನ್ನು ಗೊತ್ತುಮಾಡಿದ್ದುದು ಸರಿಯಷ್ಟೆ. ಈ ವಿಷಯವಾಗಿ ಒಂದು ನಿಬಂಧನೆಯೂ ಆಗಿದ್ದಿತು. ಈಗ ಆ ನಿಬಂಧನೆಯನ್ನು ತೆಗೆದುಹಾಕುವ ಸಂಭವವು ಒದಗಿತು. ಹಿಂದೆ ಗೊತ್ತುಮಾಡಿದ್ದ ೩೬ನೆಯ ಅಕ್ಷಾಂಶರೇಖೆಯು ಕ್ಯಾಲಿಫೋರ್ನಿಯಾ ದೇಶದ ಮಧ್ಯಭಾಗದಲ್ಲಿ ಹೋಗುತ್ತಿದ್ದಿತು. ಅಲ್ಲಿ ಕ್ರಮೇಣ ಜನಸಂಖ್ಯೆಯು ಹೆಚ್ಚಿ ದೇಶವು ಸಂಸರ್ಗಕ್ಕೆಸೇರಲು ಪ್ರಯತ್ನಮಾಡಿತು. ಶ್ವಾತ್ತರೇಯರು ಅದು ಸ್ವತಂತ್ರ ವಾದಿಸಂಸ್ಥಾನವಾ

ಗಿಯೂ, ದಾಕ್ಷಿಣಾತ್ಯರು ಅದು ದಾಸ್ಯವಾದಿಸಂಸ್ಥಾನವಾಗಿಯೂ, ಸಂಸರ್ಗಕ್ಕೆ ಸೇರಬೇಕೆಂದರು. ಈಗಾಗಲೇ ಸರ್ಕಾರದಲ್ಲಿ ದಾಕ್ಷಿಣಾತ್ಯರ ಬಲವು ಹೆಚ್ಚಿ ಕೆಲಸಕಾರ್ಯಗಳೆಲ್ಲವೂ ಅವರಿಗೆ ಅನುಕೂಲವಾದಂತೆ ನಡೆಯುತ್ತಿದ್ದುವು ಇನ್ನು ಕ್ಯಾಲಿಫೋರ್ನಿಯಾವೂ (California) ದಾಸ್ಯವಾದಿ ಸಂಸ್ಥಾನವಾಗಿ ಸಂಸರ್ಗಕ್ಕೆ (Union) ಸೇರಲು, ಔತ್ತರೇಯರು ತಮ್ಮ ಪ್ರತಾಪವೇನೂ ನಡೆಯದೆಂದು ತಿಳಿದು, ಆ ದೇಶವನ್ನು ಸ್ವಾತಂತ್ರ್ಯವಾದಿ ಸೀಮೆಯಾಗಿ ಸಂಸರ್ಗಕ್ಕೆ ಸೇರಿಸಿಕೊಳ್ಳಬೇಕೆಂದು ಪುನಃ ಪ್ರಯತ್ನಮಾಡಲಾರಂಭಿಸಿದರು. ಈ ಮಧ್ಯದಲ್ಲಿ ಕ್ಯಾಲಿಫೋರ್ನಿಯದಲ್ಲಿ ಅಪಾರವಾದ ಚಿನ್ನದ ಗಣಿಗಳು ಸಿಕ್ಕಿದ್ದುದರಿಂದ, ಮತ್ತಷ್ಟು ಗಲಬೆಗೆ ಅವಕಾಶವಾಯಿತು ಎರಡು ಪಂಗಡದವರೂ ತಮ್ಮ ಹಕ್ಕನ್ನು ಉಳಿಸಿಕೊಳ್ಳಲು ಯುದ್ಧಕ್ಕೆ ನುಗ್ಗುವುದಕ್ಕೂ ಹಿಂದೆಗೆಯುತ್ತಿರಲಿಲ್ಲ. ಇವರಿಬ್ಬರಿಗೂ ಮುಂದೆ ನಡೆಯಬಹುದಾದ ಮಹಾಯುದ್ಧದ ಸೂಚನೆಗಳು ಈಗಲೇ ತಲೆದೋರುತ್ತಿದ್ದುವು.

೨. ಈ ಎರಡು ಪಂಗಡಗಳಿಗೂ ಸಂಧಿಮಾಡಬೇಕೆಂದು ಯಾರು ಎಷ್ಟೆಷ್ಟು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಮತ್ತೆ, ಹೆನ್ರಿ ಕ್ಲೇಯೇ (Henry Clay) ಮಧ್ಯಸ್ಥಿಕೆಬಂದು, ಔತ್ತರೇಯರಿಗೆ ಹಿತವಾಗುವಂತೆ, ಕ್ಯಾಲಿಫೋರ್ನಿಯವು ಸ್ವಾತಂತ್ರ್ಯವಾದ ಸಂಸ್ಥಾನವಾಗಿ ಸಂಸರ್ಗಕ್ಕೆ ಸೇರಬೇಕೆಂದೂ, ದಾಕ್ಷಿಣಾತ್ಯರಿಗೆ ಒಪ್ಪಿಗೆಯಾಗುವಂತೆ ತಮ್ಮೊಡೆಯರಿಂದ ತಪ್ಪಿಸಿಕೊಂಡು ಓಡಿಹೋದ ಗುಲಾಮರವಿಷಯದಲ್ಲಿ ಕಠಿನವಾದ ನಿಬಂಧನೆಯೊಂದನ್ನು ರಚಿಸುವಂತೆಯೂ, ಮಾಡುವುದಾಗಿ ಮಾತುಕೊಟ್ಟು, ಸಮಾಧಾನಪಡಿಸಿದನು. ಈ ನಿಬಂಧನೆಯಿಂದ, ಯಾವನಾದರೊಬ್ಬ ಗುಲಾಮನು ತನ್ನ ಯಜಮಾನನ ಹಿಂಸೆಯನ್ನು ಸಹಿಸಲಾರದೆ ದಕ್ಷಿಣದೇಶವನ್ನು ಬಿಟ್ಟು ಉತ್ತರದೇಶಕ್ಕೆ ಓಡಿಬಂದರೆ, ಅವನನ್ನು ಹಿಡಿದು ಒಡನೆಯೇ ಅವನ ಪೂರ್ವದ ಯಜಮಾನನಲ್ಲಿಗೆ ಕಳುಹಿಸಬೇಕಾದುದು ಔತ್ತರೇಯರ ಕರ್ತವ್ಯವಾಯಿತು. ಈ ಮಧ್ಯಸ್ಥಿಕೆಯನ್ನು ಎರಡುಪಂಗಡಗಳವರೂ ಒಪ್ಪಿಕೊಂಡು ತಮ್ಮ ಮನಸ್ತಾಪಗಳನ್ನು ಅಲ್ಲಿಗಲ್ಲಿಗೇ ಮರೆತು ಸುಮ್ಮನಾದರು. ಓಡಿಹೋದ ಗುಲಾಮರ ವಿಷಯವಾಗಿ ೧೮೫೦ನೆಯ ಇಸವಿಯಲ್ಲಿ ಒಂದು ನಿಬಂಧನೆ ಏರ್ಪಟ್ಟಿತು.

K.526

೩. ಸದ್ಯಕ್ಕೆ ತೊಂದರೆಯೂ ತಪ್ಪಿ ಶಾಂತಿಯುಂಟಾದಂತಾಯಿತು. ದೂರದರ್ಶಿಗಳಾದ ಕೆಲವರುಮಾತ್ರ ಜನರಮನಸ್ಸನ್ನು ಅರಿತಿದ್ದುದರಿಂದ ಕೊಂಚಕಾಲದಲ್ಲಿಯೇ ದೊಡ್ಡ ಗೊಂದಲವಾಗದಿರದೆಂದು ತಿಳಿದೇಇದ್ದರು. ಅವರ ಯೋಚನೆಯೇ ನಿಜವಾಗಿ ಪರಿಣಮಿಸಿತು. ಕ್ಲೇಯ ಯುಕ್ತಿಗೆ ಸಂತೋಷಪಟ್ಟಿದ್ದವರೆಲ್ಲಾ ಈಗ ಗೊಣಗಲಾರಂಭಿಸಿದರು. ಔತ್ತರೇಯರಿಗೆ ಗುಲಾಮರ ವಿಷಯವಾದ ನಿಬಂಧನೆಯು ಸರಿಹೋಗಲಿಲ್ಲ. ಓಡಿಬಂದ ಗುಲಾಮರನ್ನು ಹಿಡಿದು ಅವರನ್ನು ಮತ್ತೆ ಅವರ ಪೂರ್ವದ ಯಜಮಾನರಲ್ಲಿಗೆ ಕಳುಹಿಸಿ ಸ್ವಾತಂತ್ರ್ಯವಾದಿ ಸಂಸ್ಥಾನ (Free State) ವೆಂಬುದಕ್ಕೆ ಅರ್ಥವೇನೆಂದು ಅವರು ವಾದಿಸಿದರು. ಕ್ಯಾಲಿಫೋರ್ನಿಯವು ಸ್ವಾತಂತ್ರ್ಯವಾದಿಸಂಸ್ಥಾನವಾಗಿ ಸಂಸರ್ಗಕ್ಕೆ ಸೇರಿದುದು, ದಾಕ್ಷಿಣಾತ್ಯರಿಗೆ ಸರಿದೋರಲಿಲ್ಲ. ಇದರಿಂದ ತಮ್ಮ ವಿರೋಧಿಗಳಾದ ಔತ್ತರೇಯರ ಬಲವು ಮತ್ತೂ ಹೆಚ್ಚಿತೆಂದು ಅವರು ತಿಳಿದಿದ್ದರು. ಅಂತು ಎರಡು ಪಂಗಡಗಳಿಗೂ ಅಸಮಾಧಾನವು ಪ್ರಬಲಿಸುತ್ತಿದ್ದಿತು.

೪. ದೇಶಸ್ಥಿತಿಯು ಹೀಗಿರುವಲ್ಲಿ ಸ್ಟೌ (H. B. Stowe) ಎಂಬಾಕೆಯು ಗುಲಾಮರಕಷ್ಟಗಳನ್ನೂ ಅವರ ಯಜಮಾನರ ಕ್ರೂರಕೃತ್ಯಗಳನ್ನೂ ವಿಶದವಾಗಿ ತಿಳಿಯಪಡಿಸುವ ಒಂದು ಕಾದಂಬರಿಯನ್ನು (Uncle Tom's Cabin) ಬರೆದು ೧೮೫೨ರಲ್ಲಿ ಪ್ರಚುರಪಡಿಸಿದಳು. ಗುಲಾಮರ ಬಿಡುಗಡೆಗೆ ಈ ಪುಸ್ತಕವು ಬಹಳ ಸಹಾಯವಮಾಡಿತು. ಇದನ್ನು ಓದುತ್ತ ಓದುತ್ತ ಅಂತ್ಯವು ಸಮೀಪಿಸಿದಂತೆಲ್ಲಾ ಎಂತಹ ಕಠಿನಮನಸ್ಕನಿಗೂ ಹೃದಯದಲ್ಲೊಂದು ಬಗೆಯ ದುಃಖವುಂಟಾಗಿ ಕೊನೆಗೆ ನಿಟ್ಟುಸಿರುಬಿಡುತ್ತ, ಕಂಬನಿಗರೆಯುತ್ತ ಪುಸ್ತಕವನ್ನು ಕೆಳಗಿಟ್ಟುಬಿಡುವಂತಾಗುವುದು. ಇಂತಹ ಪುಸ್ತಕವು ಪ್ರಚುರವಾಗುತ್ತಲೇ ಔತ್ತರೇಯರಿಗೆ ಮತ್ತಷ್ಟು ಬಲವುಂಟಾದಂತಾಯಿತು. ಮೊದಲೇ ಹೊಗೆಯಾಡುತ್ತಿದ್ದ ಅವರ ಕ್ರೋಧಾಗ್ನಿಯು ಈಗ ಒಮ್ಮಿಂದೊಮ್ಮೆ ಹೊತ್ತಿಕೊಂಡು ಉರಿಯತೊಡಗಿತು. ಒಡನೆಯೇ ಗುಲಾಮರಿಗೆ ಸ್ವಾತಂತ್ರ್ಯವನ್ನು ಉಂಟುಮಾಡಬೇಕೆಂದು ಬೊಬ್ಬೆಯುಂಟಾಯಿತು.

೫. ದೇಶದಲ್ಲೆಲ್ಲಾ ಈ ಬಗೆಯ ಕ್ಷೋಭೆಯಾಗುತ್ತಿರುವಾಗ ಲಿಂಕನ್ನನು ಏನುಮಾಡುತ್ತಿದ್ದನು? ಆರೆಗಾನ್ ದೇಶದ ಗೌರ್ನರ್ ಪದವಿಯನ್ನು

ಅವನು ನಿರಾಕರಿಸಿದ ಮೇಲೆ ಕೆಲವು ಕಾಲ ರಾಜ್ಯದ ಆಡಳಿತಗಳ ಗೋಜನ್ನು ಬಿಟ್ಟಿದ್ದನು. ಆದರೂ ಅವನು ದೇಶದ ಸ್ಥಿತಿಯನ್ನು ಎಚ್ಚರದಿಂದ ಪರಿಶೀಲಿಸುತ್ತಿದ್ದುದರಿಂದ, ಬಹುಭಯಂಕರವಾದ ಬೇಗೆಯುಂಟಾಗುವು ದೆಂದು ಮೊದಲೇ ನಿರೀಕ್ಷಿಸಿದ್ದನು. ಆಗ ಡೆಮೊಕ್ರ್ಯಾಟ್ (Democrat) ಪಂಗಡದ ಫ್ರ್ಯಾಂಕ್ಲಿನ್ ಪಿಯರ್ಸ್ (Franklin Pierce) ಎಂಬಾತನು ದೇಶಾಧ್ಯಕ್ಷನಾಗಿದ್ದನು. ಆತನು ದಾಕ್ಷಿಣಾತ್ಯನಲ್ಲದಿದ್ದರೂ ದಾಸ್ಯವಾದಿಯಾಗಿದ್ದುದರಿಂದ, ದಾಕ್ಷಿಣಾತ್ಯರಿಗೇ ಅನುಕೂಲನಾಗಿದ್ದನು. ಈ ಮಧ್ಯೆ, ೧೮೫೪ರಲ್ಲಿ, ಮಿಸೌರಿ ಒಪ್ಪಂದವನ್ನು (Missouri Compromise) ನಿರಾಕರಿಸುವರೆಂಬ ಸಮಾಚಾರವು ಹುಟ್ಟಿ, ದೇಶದಮೇಲೆಲ್ಲಾ ದೊಡ್ಡ ಗದ್ದಲವುಂಟಾಯಿತು. ಆ ಸುದ್ದಿಯು ಲಿಂಕನ್ನಿನ ಕಿವಿಗೆ ಬೀಳುತ್ತಲೇ ಅವನು ಚಕಿತನಾಗಿ ಮುಂಚಿನಂತೆ ಸುಮ್ಮನಿರದೆ, ಆ ಒಪ್ಪಂದವನ್ನು ಹೇಗಾದರೂ ರಕ್ಷಿಸಬೇಕೆಂದು ಶಪಥಮಾಡಿಕೊಂಡು ದೇಶಕ್ಷೇಮಕ್ಕೋಸುಗ ತನ್ನ ಸೌಖ್ಯವನ್ನೂ ತುಚ್ಛವಾಗೆಣಿಸಿ ರಾಜ್ಯದ ಆಡಳಿತಗಳಲ್ಲಿ ಮತ್ತೊಮ್ಮೆ ಕೈಹಾಕಿದನು. ಎಷ್ಟು ಕಷ್ಟಪಟ್ಟಾದರೂ ಆ ಒಪ್ಪಂದವನ್ನು ನಿಲ್ಲಿಸಬೇಕೆಂಬುದೇ ಅವನ ದೃಢಸಂಕಲ್ಪವಾಗಿದ್ದಿತು. ಒಂದುವೇಳೆ ಮಿಸೌರಿ ಒಪ್ಪಂದವು ನಿರಾಕೃತವಾದರೆ, ದಾಸ್ಯಾಭಿಮಾನಿಗಳ ಅಧಿಕಾರವು ಮತ್ತೂ ಹೆಚ್ಚಿ ಗುಲಾಮರ ಸ್ಥಿತಿಯು ಇನ್ನೂ ಶೋಚನೀಯವಾಗಬಹುದೆಂದೂ ಆಮೇಲೆ ಗುಲಾಮರ ಸಂಖ್ಯೆಯು ಕಡಿಮೆಯಾಗುವುದಕ್ಕೆ ಅವಕಾಶವೇ ಇರುವುದಿಲ್ಲವೆಂದೂ ಅವನು ತಿಳಿದಿದ್ದನು.

೬. ಎಂದಿನಂತೆಯೇ ಈ ಕಾರ್ಯದಲ್ಲಿಯೂ ಲಿಂಕನನು ತನ್ನ ಪೂರ್ವವಿರೋಧಿಯಾದ ಡಗ್ಲಸನ್ನು (Douglas) ಇದಿರಿಸಬೇಕಾಯಿತು. ಈಚೆಗೆ ಡಗ್ಲಸನು ಬಹಳ ಪ್ರಬಲಿಸಿ ೧೮೫೪ರಲ್ಲಿ ಕಾನ್ಸಾಸ್-ನೆಬ್ರಾಸ್ಕದ ನಿಬಂಧನೆಯೊಂದನ್ನು (Kansas-Nebraska Bill) ಹೊರಡಿಸಲು ಯತ್ನಿಸುತ್ತಿದ್ದನು. ಅದರಲ್ಲಿ ಮಿಸೌರಿ ಒಪ್ಪಂದದ ನಿರಾಕರಣವೂ ಒಂದು ಭಾಗವಾಗಿದ್ದಿತು. ಈ ನಿಬಂಧನೆಯಿಂದ ಕಾನ್ಸಾಸ್ ಮತ್ತು ನೆಬ್ರಾಸ್ಕ ದೇಶಗಳನ್ನು ಬೇರೆಬೇರೆಯಾಗಿ ವಿಂಗಡಿಸಿ, ಅಲ್ಲಿಯ ನಿವಾಸಿಗಳ ಅಭಿಪ್ರಾಯದಂತೆ ದಾಸ್ಯವಾದಿರಾಜ್ಯವಾಗಿಯೋ ಇಲ್ಲವೇ ಸ್ವಾತಂತ್ರ್ಯವಾದಿರಾಜ್ಯವಾಗಿಯೋ

ಸಂಸರ್ಗಕ್ಕೆ ಸೇರಿಸಬೇಕೆಂಬುದೇ ಡಗ್ಲಸಿನ ಈ ನೂತನನಿಬಂಧನೆಯ ಆಶಯವು. ಯಾವ ಕಾರ್ಯಕ್ಕಾದರೂ ಪ್ರಜೆಗಳ ಸಮ್ಮತಿಯೇ ಮುಖ್ಯವಾಗಿ ಬೇಕಾಗಿದ್ದುದರಿಂದ, ಈಬಗೆಯ ರಾಜ್ಯಭಾರಕ್ಕೆ ಪ್ರಜಾಸತ್ತಾತ್ಮಕ ರಾಜ್ಯಭಾರ (Popular Sovereignty) ಎಂಬ ಹೆಸರನ್ನು ಕೊಡಬಹುದು. ಡಗ್ಲಸನೇ ಈ ಏರ್ಪಾಡಿಗೆ ಮೂಲಕರ್ತೃವಾದುದರಿಂದ, ಅವನು ದೇಶದ ಮೇಲೆಲ್ಲಾ ಸಂಚರಿಸುತ್ತಾ ಈ ಹೊಸ ರಾಜ್ಯಭಾರದಲ್ಲಿಯ ಗುಣಗಳನ್ನು ಎಲ್ಲರಿಗೂ ತಿಳಿಯಹೇಳುತ್ತಾ, ಎಲ್ಲೆಲ್ಲೂ ಉಪನ್ಯಾಸಮಾಡುತ್ತಿದ್ದನು. ಜನರು ಅವನ ಮಾತಿಗೆ ಬೆರಗಾಗಿ ಆ ಏರ್ಪಾಡಿನಲ್ಲಿ ಯಾವುದಾದರೂ ಕುಂದು ಕೊರತೆಗಳಿರಬಹುದೆಂಬುದನ್ನು ಕೂಡಾ ಆಲೋಚಿಸದೆ, ಅವನ ಪಕ್ಷವನ್ನೇ ವಹಿಸಲಾರಂಭಿಸಿದ್ದರು. ಇಷ್ಟೇ ಅಲ್ಲದೆ ಡಗ್ಲಸನ ಸೌಶೀಲ್ಯವೂ ವಾಗ್ಮಿತೆಯೂ ಎಂತಹವರನ್ನಾದರೂ ಮರುಳುಮಾಡುತ್ತಿದ್ದುವು. ಅವನು ಉಪನ್ಯಾಸಮಾಡುವುದಕ್ಕೆ ಪ್ರಾರಂಭಿಸಿದೊಡನೆಯೇ ಜನರ ವಿಚಾರಶಕ್ತಿಯು ಎಲ್ಲೋ ಮಾಯವಾಗಿ ಮೂಕಪ್ರಾಣಿಗಳಂತೆ ಅವನೆಳೆದ ದಾರಿಗೇ ಅವರು ಹೋಗುತ್ತಿದ್ದರು. ಬಾಹ್ಯಾಡಂಬರದಿಂದ ಬೆರಗಾಗುತ್ತಿದ್ದ ಅನೇಕರಿಗೆ ಅವನ ಅಭಿಪ್ರಾಯದಲ್ಲಿ ತಪ್ಪುಗಳೇನೂ ತೋರುತ್ತಿರಲಿಲ್ಲ.

೭. ಸರ್ವವಿಧದಲ್ಲಿಯೂ ತನಗೆ ಮೇಲಾಗಿದ್ದ ಡಗ್ಲಸನೊಡನೆ ಲಿಂಕನ್ನನು ಹೋರಾಡಬೇಕಾಯಿತು. ಅವನು ಡಗ್ಲಸಿನ ಅಭಿಪ್ರಾಯಗಳನ್ನೆಲ್ಲಾ ಖಂಡಿಸಿ ಎಲ್ಲಾ ದೋಷಗಳನ್ನೂ ಉದ್ಘಾಟಿಸುತ್ತಿದ್ದನಾದರೂ, ಅವನ ಸರಸವಾದ ಉಪನ್ಯಾಸಗಳನ್ನು ಕೇಳಿದ ಜನರಿಗೆ ಲಿಂಕನ್ನಿನ ಖಂಡನೆಗಳಲ್ಲಿ ಅಭಿರುಚಿ ಇರಲಿಲ್ಲ. ಅವನ ವೇಷಭೂಷಣಗಳನ್ನು ನೋಡಿ ಬೆರಗಾಗಿದ್ದವರಿಗೆ ಅವನು ಒಬ್ಬ ಕಾಡುಮನುಷ್ಯನೇನೋ ಎಂಬ ಭ್ರಾಂತಿಯುಂಟಾಗುತ್ತಿದ್ದಿತು ಆದರೂ ಏಬ್ರಹಾಮನು ಧೈರ್ಯಗೆಡದೆ ದೇಶದಮೇಲೆಲ್ಲಾ ಸುತ್ತುತ್ತಾ, ಉಪನ್ಯಾಸಗಳನ್ನು ಮಾಡಿ ಸಮಯದೊರೆತೆಡೆಗಳಲ್ಲಿ ಡಗ್ಲಸನನ್ನು ಸಂಧಿಸಿ, ಅವನೊಡನೆ ವಾದಮಾಡಿ ಅವನನ್ನು ಸೋಲಿಸಿ ಅಟ್ಟುತ್ತಿದ್ದನು. ಲಿಂಕನ್ನನು ಎಷ್ಟು ಹಠವಾದಿಯೋ ಡಗ್ಲಸನೂ ಅಷ್ಟೇ ಹಠವಾದಿ; ಒಂದುಕಡೆ ತನಗೆ ಅಪಜಯವಾಗಲು ಅಲ್ಲಿಗೇ ತನ್ನ ಕೆಲಸವನ್ನು ಸಾಕುಮಾಡದೆ ಇನ್ನೂ ಹೆಚ್ಚು ಉತ್ಸಾಹದಿಂದ ಮತ್ತೆ ಬೇರೆಡೆಗೆ ಹೋಗಿ

ಅವನು ಉಪನ್ಯಾಸವನ್ನು ಮಾಡುತ್ತಿದ್ದನು. ಲಿಂಕನನ್ನನು ಇಲಿನಾಯ್ (Illinois) ಮೊದಲಾದ ಪ್ರದೇಶಗಳಲ್ಲಿ ಮಾಡಿದ ಉಪನ್ಯಾಸಗಳ ಸಾರಾಂಶವನ್ನು ಈ ಮುಂದೆ ಹೇಳುವಂತೆ ತಿಳಿಸಬಹುದು.

೮. "ಬಿಳಿಯುಜನರು ತಮ್ಮ ರಾಜ್ಯಭಾರವನ್ನು ತಾವೇ ಮಾಡಿಕೊಂಡರೆ ಅದು ಸ್ವತಂತ್ರರಾಜ್ಯಭಾರವೆನಿಸಿಕೊಳ್ಳುವುದು. ಆದರೆ ಅವರು ಇತರಜನರನ್ನು ಆಳಲು ಯತ್ನಿಸಿದರೆ, ಅದೆಂದಿಗೂ ಸ್ವತಂತ್ರರಾಜ್ಯಭಾರವಾಗಿರದೆ ನಿರಂಕುಶಪ್ರಭುತ್ವವೆನಿಸಿಕೊಳ್ಳುವುದು. ಸುಮಾರು ನಾಲ್ವತ್ತು ವರ್ಷಗಳಿಗೆ ಹಿಂದೆ, 'ದೈವಸೃಷ್ಟಿಯಲ್ಲಿ ಪ್ರತಿಯೊಬ್ಬನೂ ಸಮಾನನು; ಒಬ್ಬರಿಗೊಬ್ಬರಿಗೆ ಭೇದವಿಲ್ಲ; ಬಣ್ಣದಲ್ಲಿ ಬೇರೆಯಾಗಿದ್ದರೆತಾನೇ ಏನು? ದೇವರು ನಮ್ಮನ್ನು ನಿರ್ಮಿಸಲು ಎಷ್ಟು ಕಷ್ಟಪಟ್ಟಿರುವನೋ ಅವರನ್ನು ಸೃಜಿಸಲೂ ಅಷ್ಟೇ ಕಷ್ಟಪಟ್ಟಿರುವನು' ಎಂದು ನಾವೆಲ್ಲರೂ ಹೇಳುತ್ತಿದ್ದೆವು. ಈಗಲಾದರೋ ನಾವುಗಳು ಕಣ್ಣುಮುಚ್ಚಿಕೊಂಡು ನಮಗಿಂತಲೂ ಬಲಹೀನರಾಗಿರುವವರನ್ನು ಮೇಲಕ್ಕೆ ಎತ್ತಲು ಯತ್ನಿಸದೆ, ಅವರನ್ನು ಇನ್ನೂ ನೆಲಕ್ಕೆ ತುಳಿಯಬೇಕೆಂದಿರುತ್ತೇವೆ. ಬಿಳಿಯ ಜನರು ಆಳುವುದಕ್ಕೂ ಕಪ್ಪು ಜನರು ಅವರಿಗೆ ಸೇವೆಮಾಡುವುದಕ್ಕೂ ಹುಟ್ಟಿರುವರೆಂಬ ದುರಭಿಪ್ರಾಯವು ಈಗೀಗ ನಮ್ಮಲ್ಲಿ ತಲೆದೋರುತ್ತಿದೆ! ಸೃಷ್ಟಿಕ್ರಮದ ಮಾರ್ಗವೇ ಈ ಪರಿಯೆಂದು ನಾವು ವಾದಿಸುತ್ತಿರುವೆವು! ಈಗ ಮತ್ತೊಬ್ಬರನ್ನು ಆಳುವುದೇ ಸ್ವತಂತ್ರರಾಜ್ಯಭಾರದ ಪರಮತತ್ತ್ವವೆಂದು ನಾವು ತಿಳಿದಿರುವೆವು! ನಾವು ಧನಲೋಭದಿಂದ ಧರ್ಮವನ್ನು ಬಿಡುವುದು ಯುಕ್ತವಲ್ಲ. ದೇವರಿಗೆ ಬಡವರಲ್ಲಿರುವಷ್ಟು ಪ್ರೀತಿವಿಶ್ವಾಸಗಳು ಬಲ್ಲಿದರಲ್ಲಿ ಇರುವುದಿಲ್ಲ. ನಾವು ಸ್ವತಂತ್ರರಾಜ್ಯಾಭಿಲಾಷಿಗಳಾದರೆ, ಮೊದಲು ನಮ್ಮ ಕೈಕೆಳಗಿರುವ ಜನರಿಗೆ ಸ್ವಾತಂತ್ರ್ಯವನ್ನು ಉಂಟುಮಾಡಬೇಕು. ಆದರೆ ಎಷ್ಟು ಕಷ್ಟಬಂದರೂ ಸಂಸರ್ಗವನ್ನು ಕಾಪಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವು" ಈ ಬಗೆಯ ಅಭಿಪ್ರಾಯಗರ್ಭಿತವಾದ ಉಪನ್ಯಾಸಗಳನ್ನು ಹೇಳುತ್ತಲೇ ಅನೇಕರ ಮನಸ್ಸು ಇವನ ಕಡೆಗೆ ಬಂದಿತು.

೯. ಡಗ್ಲಸನೂ ಲಿಂಕನ್ನನೂ ಬಹು ಸ್ನೇಹಿತರಾಗಿದ್ದರು. ಕಾಲಗತಿಯಿಂದ ಒಬ್ಬರನ್ನೊಬ್ಬರು ಇದಿರಿಸಬೇಕಾಯಿತು. ಹೀಗೆ ಅಭಿಪ್ರಾಯ

ಭೇದದಿಂದ ತತ್ಕಾಲಕ್ಕೆ ವಿರೋಧಿಗಳಾಗಿದ್ದರೂ ಅವರ ಸ್ನೇಹಕ್ಕೇನು ಕುಂದಕಬಾರಲಿಲ್ಲ. ಅವರು ಪೂರ್ವದಂತೆ ಒಬ್ಬರಲ್ಲೊಬ್ಬರು ದೃಢವಾದ ಮೈತ್ರಿಯನ್ನೂ ಪೂರ್ಣವಿಶ್ವಾಸವನ್ನೂ ಇಟ್ಟಿದ್ದರು. ಜನರು ಎಷ್ಟೇ ತನ್ನನ್ನು ಮೆಚ್ಚಿಕೊಂಡಿದ್ದರೂ ಲಿಂಕನ್ನನೇ ತನಗಿಂತಲೂ ಬುದ್ಧಿವಂತನೆಂದು ಡಗ್ಲಸನು ತಿಳಿದಿದ್ದುದರಿಂದ ಅವನು ಲಿಂಕನ್ನನ್ನು ಇದಿರಿಸಲು ಹಿಂದೆಗೆಯುತ್ತಿದ್ದನು. ಲಿಂಕನ್ನಾದರೂ ತನ್ನ ಜಯದಿಂದ ಉಬ್ಬಿಹೋಗಲಿಲ್ಲ. ಕಾಲಕ್ರಮದಲ್ಲಿ ಲಿಂಕನ್ನಿನ ಪಂಗಡವೇ ಗೆಲ್ಲುತ್ತಾ ಬಂದಿತಾದರೂ, ೧೮೫೪ರಲ್ಲಿ ಕೂಡಿದ ರಾಷ್ಟ್ರೀಯಸಭೆ (Congress)ಯಲ್ಲಿ ಡೆಮೋಕ್ರ್ಯಾಟ್ ಪಂಗಡಕ್ಕೆ ಬಹುಮತವು ದೊರೆತು, ಕಾನ್‌ಸಾಸ್–ನೆಬ್ರಾಸ್ಕ ನಿಬಂಧನೆಯು ಆಚರಣೆಗೆ ಬಂದೇಬಿಟ್ಟಿತು.

---

## ಹನ್ನೊಂದನೆಯ ಪ್ರಕರಣ.

---

### ದಾಸ್ಯವಾದಿಗಳಿಗೂ ಅವರ ವಿರೋಧಿಗಳಿಗೂ ನಡೆದ ಹೋರಾಟ

೧. ಕಾನ್ಸಾಸ್–ನೆಬ್ರಾಸ್ಕ ನಿಬಂಧನೆಯಿಂದ ದಾಸ್ಯವಾದಿಗಳಾದ ದಾಕ್ಷಿಣಾತ್ಯರಿಗೆ ಬಹು ಆನಂದವಾದುದಲ್ಲದೆ, ಅವರ ಪ್ರಾಬಲ್ಯವು ಮತ್ತಷ್ಟು ಹೆಚ್ಚಿತು. ಅದನ್ನು ನೋಡಿ ಔತ್ತರೇಯರು ಸಹಿಸಲಾರದೆ ಹೋದರು. ಸಮಯಸಿಕ್ಕಿದೊಡನೆಯೇ ತಮ್ಮ ದ್ವೇಷವನ್ನು ತೀರಿಸಿಕೊಳ್ಳಬೇಕೆಂದು ಕಾದಿದ್ದರು. ಅಷ್ಟರಲ್ಲಿ ತಪ್ಪಿಸಿಕೊಂಡು ಓಡಿಬಂದಿದ್ದ ಗುಲಾಮನೊಬ್ಬನನ್ನು ಬಾಸ್ಟನ್ನಗರದವರು ಹಿಡಿದು ಅವನ ಪೂರ್ವದ ಯಜಮಾನನಲ್ಲಿಗೆ ಕಳುಹಿಸಿದರೆಂಬ ವೃತ್ತಾಂತವು ಬಂದಿತು. ಇದನ್ನು ಕೇಳಿದೊಡನೆಯೇ ದಾಸ್ಯನಿರೋಧಕರ ಹೊಟ್ಟೆಯಲ್ಲಿ ಮೆಣಸಿನಕಾಯಿ ಹಿಸುಕಿದಂತಾಯಿತು. ತಮ್ಮ ಕೈಯಿಂದಾಗುತ್ತಿದ್ದರೆ ಆಗಲೇ ತಮ್ಮ ಕೋಪವನ್ನು ದಾಸ್ಯಪರರಮೇಲೆ ತೀರಿಸಿಕೊಳ್ಳುತ್ತಿದ್ದರು. ಆದರೆ ದಾಕ್ಷಿಣಾತ್ಯರೂ ಬಲವಾಗಿಯೇ ಇದ್ದರು. ಬಾಸ್ಟನ್ನಿನಲ್ಲಿ ನಡೆದ ವಿಷಯವನ್ನು ಜನರೆಲ್ಲರೂ ವಿಚಾರಮಾಡಲಾರಂಭಿಸಿದರು. ಅಷ್ಟರಲ್ಲಿ ಬಾಸ್ಟನ್ ಪಟ್ಟಣವೂ ದಾಸ್ಯವೇ ಒಳ್ಳೆಯದೆಂದು ಮನಸ್ಸು ಬದಲಾಯಿಸಿ, ಸಂಸರ್ಗಕ್ಕೆ ಸೇರಿತು. ಇದಕ್ಕಿಂತಲೂ ಪ್ರಬಲವಾದ ಮತ್ತೊಂದು

ಸಂಗತಿಯು ದಾಸ್ಯನಿರೋಧಕರ ದೃಷ್ಟಿಗೆ ಬಿದ್ದಿತು. ಸರಕಾರದವರು ಸ್ಪೇನ್ ದೇಶಕ್ಕೆ ಸೇರಿದ್ದ ಕ್ಯೂಬ (Cuba) ದ್ವೀಪವನ್ನು ಕೊಂಡುಕೊಳ್ಳುವರೆಂಬ ಸುದ್ದಿಯು ಹರಡಿ ದಾಕ್ಷಿಣಾತ್ಯರು ಹಿಗ್ಗಿಹೋದರು. ಆ ದ್ವೀಪವು ಗುಲಾಮರ ವ್ಯಾಪಾರಕ್ಕೆ ಅನುಕೂಲವಾಗಿದ್ದುದರಿಂದ, ಔತ್ತರೇಯರಿಗೆ ಈ ವ್ಯಾಪಾರವು ಸರಿತೋರಲಿಲ್ಲ. ದಾಕ್ಷಿಣಾತ್ಯರಿಗೆ ಸಹಾಯಮಾಡುವುದಕ್ಕಾಗಿಯೇ ಆ ಪ್ರದೇಶವನ್ನು ಕೊಳ್ಳುವರೆಂದು ತಾವು ದಾಸ್ಯನಿರೋಧಕರಾಗಿದ್ದರೂ ತಾವು ಕೊಟ್ಟ ತೆರಿಗೆಯಲ್ಲಾ ದಾಸ್ಯವನ್ನು ಹೆಚ್ಚಿಸಲು ಉಪಯೋಗವಾಗುವುದೆಂದೂ, ಆದುದರಿಂದ ಆ ದ್ವೀಪವನ್ನು ಕೊಳ್ಳದಂತೆ ಮಾಡಬೇಕೆಂದೂ ನಿಶ್ಚಯಿಸಿದರು

೨. ಆಗ ದೇಶದಲ್ಲಿ ಮೂರು ಪಂಗಡಗಳಿದ್ದುವೆಂದು ಹಿಂದೆಯೇ ತಿಳಿಸಿರುತ್ತೇವೆ. ಇವುಗಳಲ್ಲಿ ಮೂರನೆಯದಾದ ರಿಪಬ್ಲಿಕ್ (Republic) ಪಂಗಡವು ಬಹು ಚಿಕ್ಕದಾಗಿದ್ದಿತು ಈ ಪಂಗಡವೂ ಗುಲಾಮರಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ವಾದಿಸುತ್ತಿದ್ದರೂ, ಧರ್ಮಮಾರ್ಗವನ್ನು ಅತಿಕ್ರಮಿಸಿ ಹೋಗಲು ಇಷ್ಟಪಡುತ್ತಿರಲಿಲ್ಲ. ಈ ಪಂಗಡದವರು ತಮ್ಮ ಅಭಿಪ್ರಾಯಗಳನ್ನು ಬಹಿರಂಗಪಡಿಸದೆ ಗುಟ್ಟಿನಲ್ಲಿಯೇ ಕೆಲಸಕಾರ್ಯಗಳನ್ನು ಮಾಡುತ್ತಿದ್ದರು. ಎಷ್ಟು ಕಷ್ಟಬಂದರೂ ಸಂಸರ್ಗವನ್ನು ಉಳಿಸಿಕೊಳ್ಳಬೇಕೆಂಬುದೇ ಅವರ ಮುಖ್ಯಾಭಿಪ್ರಾಯವಾಗಿದ್ದಿತು. ಏಬ್ರಹಾಮ್ ಲಿಂಕನ್ನನು ಇದೇಪಂಗಡಕ್ಕೆ ಸೇರಿದವನು. ಈ ಪಂಗಡದಲ್ಲಿ ಒಬ್ಬೊಬ್ಬರು ಒಂದೊಂದುಕಡೆ ಉಪನ್ಯಾಸಮಾಡುತ್ತಿದ್ದರು. ಇಲಿನಾಯ್ ಪ್ರದೇಶವು ಲಿಂಕನ್ನನಿಗೆ ಸೇರಿದ್ದಿತು ಆ ಪ್ರದೇಶದ ಊರುಗಳಲ್ಲೆಲ್ಲಾ ಉಪನ್ಯಾಸಮಾಡಿ ತಮ್ಮ ಪಂಗಡವನ್ನು ಬಲಪಡಿಸಬೇಕಾಗಿದ್ದಿತ . ಸ್ವಲ್ಪಕಾಲದಲ್ಲಿಯೇ ಲಿಂಕನ್ನಿನ ಸಾಮರ್ಥ್ಯದಿಂದ ಇಲಿನಾಯ್ ಪ್ರದೇಶದಲ್ಲಿ, ರಿಪಬ್ಲಿಕನರ ಸಂಘವೊಂದು ನಿರ್ಮಾಣವಾಯಿತು. ಲಿಂಕನ್ನಿನ ಉಪನ್ಯಾಸಗಳ ಸ್ವಾರಸ್ಯವನ್ನು ಕ್ರಮವಾಗಿ ತಿಳಿದುಕೊಂಡು, ಜನರು ನಾನು ತಾನೆಂದು ಮುಂದೆ ಬಂದು ಆ ಸಂಘಕ್ಕೆಸೇರಿ, ಸೀಮೆಯ ಆಡಳಿತವನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಖಂಡಿಸುತ್ತಾ ಬಂದರು.

೩. ಲಿಂಕನ್ನನು ಬ್ಲೂಮಿಂಗ್‌ಟನ್ (Bloomington) ಮುಂತಾದ

ಪ್ರದೇಶಗಳಲ್ಲಿ ಮಾಡಿದ ಉಪನ್ಯಾಸಗಳ ಸಾರಾಂಶವು ಬಹುನೀತಿಗರ್ಭಿತವೂ ಕೇಳುವುದಕ್ಕೆ ಇಂಪಾದುದೂ ಆಗಿದೆ. ಈ ಉಪನ್ಯಾಸದ ಕೆಲವು ಭಾಗಗಳನ್ನು ತಿಳಿದುಕೊಳ್ಳುವುದು ಉತ್ತಮ. ಏಕೆಂದರೆ ಮೊದಲಿಂದಲೂ ಲಿಂಕನ್ನನು ತನ್ನ ಮಾತಿನ ಚಮತ್ಕಾರದಿಂದಲೇ ಎಂತಹ ಬುದ್ಧಿವಂತರನ್ನೂ ತನ್ನ ಕಡೆಗೆ ಎಳೆದುಕೊಳ್ಳಲು ಶಕ್ತನಾಗಿದ್ದನೆಂಬುದು ವ್ಯಕ್ತವಾಗುವುದು. ಉಪನ್ಯಾಸದ ಪ್ರಾರಂಭದಲ್ಲಿ, ತನ್ನ ಪಂಗಡದ ಮುಖ್ಯೋದ್ದೇಶಗಳನ್ನೂ ಅದು ಮಾಡಬೇಕೆಂದಿದ್ದ ಕಾರ್ಯಗಳನ್ನೂ ವಿವರಿಸಿ ಜನರ ದೃಷ್ಟಿಯೆಲ್ಲವನ್ನೂ ತನ್ನ ಉಪನ್ಯಾಸದ ಕಡೆಗೆ ಎಳೆದುಕೊಂಡು ಬಳಿಕ ಕೆಲವು ದಿನಗಳಿಗೆ ಹಿಂದೆ ಸೆನೆಟ್ ಸಭೆಯಲ್ಲಿ ಸರ್ಕಾರದವರು ನೆಬ್ರಾಸಕ್ಕೆ ಮಾಡಿದ ಅನ್ಯಾಯದ ವಿಚಾರವಾಗಿ ಸದಸ್ಯನಾದ ಚಾರಲ್ಸ್ ಸಮ್ನರ್ (Charles Sumner) ಎಂಬಾತನು ಮಾತನಾಡಿದ್ದಾಗ ಅವನ ವಿರೋಧಿಯೊಬ್ಬನು ಅವನನ್ನು ಹೊಡೆದುಮಲಗಿಸಿದನೆಂದು ಹೇಳಿದನು. ಕೂಡಲೇ ಆ ಸದಸ್ಯರೆಲ್ಲರಿಗೂ ರೋಷಾವೇಶವುಂಟಾಗಿ ಹಗೆಗಳಮೇಲೆ ತಮ್ಮ ಸೇಡುತೀರಿಸಿಕೊಳ್ಳಲೇಬೇಕೆಂದು ಗರ್ಜಿಸಿದರು. ಆಗ ಲಿಂಕನ್ನನು "ಸದಸ್ಯರೇ! ಆ ಬಡ ಸಮ್ನರನು ಈಗ ಏಟು ತಿಂದು ಸಾಯುತ್ತಾ ಬಿದ್ದಿರುವನು. ಅವನಿಗೂ ಅವನ ವಿರೋಧಿಗೂ ಕೈಕೈ ಕಲೆತು ವ್ಯಾಜ್ಯವಾಗುತ್ತಿರಲು, ಸೆನೆಟ್ಟಿನ ಉಳಿದ ಸದಸ್ಯರುಗಳು ಅವರಲ್ಲಿ ಯಾರು ಸಾಹಸಿಗಳೋ ನೋಡಬೇಕೆಂದು ಸುಮ್ಮನೆ ನೋಡುತ್ತ ನಿಂತಿದ್ದರೇ ಹೊರತು, ಆ ವ್ಯಾಜ್ಯವನ್ನು ತಪ್ಪಿಸುವುದಕ್ಕಾಗಲಿ ಏಟು ತಿಂದ ಸಮ್ನರನಿಗೆ ಸಹಾಯಮಾಡುವುದಕ್ಕಾಗಲಿ ಯತ್ನಿಸಲಿಲ್ಲವಂತೆ! ಇದೇ ಅಲ್ಲವೆ ಕ್ರೈಸ್ತಧರ್ಮವು? ಇವರೇ ಅಲ್ಲವೇ ನಿಜವಾಗಿಯೂ ಯೋಗ್ಯರಾದ ದೊಡ್ಡಮನುಷ್ಯರು! ಇಂತಹವರಿಂದಲೇ ನಮ್ಮ ದೇಶೋದ್ಧಾರವಾಗಬೇಕು! ದೊಡ್ಡಮನುಷ್ಯರೂ ಕುಲೀನರೂ ಸೇರುವ ಸೆನೆಟ್ ಮಂದಿರದಲ್ಲಿಯೇ ಈ ಬಗೆಯ ಹೇಯವ್ಯಾಪಾರಗಳಾರಂಭವಾಗಿದೆಯೆಂದರೆ, ಇನ್ನು ರಾಜ್ಯಭಾರಸ್ಥಿತಿಯು ಎಷ್ಟು ಕೆಟ್ಟಿರುವುದೋ ನೀವೇ ಯೋಚಿಸಿ" ಎಂದು ಹೇಳಿದುದಲ್ಲದೆ ಆಗ ದೇಶಕ್ಕುಂಟಾಗಿದ್ದ ಇತರತೊಂದರೆಗಳನ್ನೂ ಅವನ್ನು ಮೊದಲಲ್ಲಿಯೇ ಪರಿಹರಿಸಿಕೊಳ್ಳದಿದ್ದರೆ ಮುಂದಕ್ಕೆ ಉಂಟಾಗಬಹುದಾದ ಅನಾಹುತಗಳನ್ನೂ ಬಂದಾದಮೇಲೊಂದಾಗಿ ವಿವರಿಸುತ್ತಾ ಹೋದನು. ಜನರೆಲ್ಲಾ ನಟ್ಟದೃಷ್ಟಿ ಬಿಟ್ಟ

ಬಾಯಿಗಳಿಂದ ಅವನನ್ನೇ ನೋಡುತ್ತಾ ಕುಳಿತಿದ್ದರು. ಆ ಸಭೆಯಲ್ಲಿ ಲಿಂಕನ್ನಿನ ಮಾತುವಿನಾ ಮತ್ತಾವ ಶಬ್ದವೂ ಕೇಳುತ್ತಿರಲಿಲ್ಲ. ಹೀಗೆ ಒಂದು ಗಂಟೆಯಾಯಿತು. ಎರಡು ಗಂಟೆಯೂ ಆಗುತ್ತಾ ಬಂದಿತು. ಲಿಂಕನ್ನನು ಕೊಂಚವೂ ನಿಲ್ಲಿಸದೆ ಉಪನ್ಯಾಸವನ್ನು ಮಾಡುತ್ತಿದ್ದನು. ಆಗ ಜನರ ಮನಸ್ಸು ಹೇಗಿದ್ದಿತೆಂಬುದನ್ನು ಅರಿತು ಸಮಯಸಿಕ್ಕಿದಾಗಲೇ ಜನರನ್ನು ತನ್ನ ಕಡೆಗೆಳೆದುಕೊಳ್ಳಬೇಕೆಂದು ಉಪನ್ಯಾಸಮಾಡುತ್ತಾ ಬಂದು ಉಪನ್ಯಾಸಾಂತದಲ್ಲಿ ಎಲ್ಲರಿಗೂ ತಿಳಿಯುವಂತೆ ಗಟ್ಟಿಯಾಗಿ "ನಾನು ಕೊನೆಯಲ್ಲಿ ಹೇಳಬೇಕಾಗಿರುವದೊಂದು ಮಾತನ್ನು ಕೇಳಿ. ನಾವೆಲ್ಲಾ ಪ್ರಯತ್ನಪಟ್ಟು ಮಿಸೌರಿ ಒಪ್ಪಂದವನ್ನು ನಿಲ್ಲಿಸಬೇಕು. ಕಾನ್ಸಾಸ್ ದೇಶವು ಸ್ವಾತಂತ್ರ್ಯವಾದಿಯಾದ ಸೀಮೆಯಾಗಬೇಕು. ಮೊದಲು ನಮ್ಮ ಸ್ವಾತಂತ್ರ್ಯವನ್ನು ಭದ್ರಪಡಿಸಿಕೊಂಡು, ಆಮೇಲೆ ಕೈಯಿಂದಾದರೆ ದಾಸ್ಯವೃತ್ತಿಯನ್ನು ತಪ್ಪಿಸಲು ಯತ್ನಿಸೋಣ. ಅಲ್ಲಿಯೂ ಧರ್ಮಮಾರ್ಗವನ್ನು ಅತಿಕ್ರಮಿಸಿ ನಡೆಯಬಾರದು. ನಾವು ಗುಲಾಮರಿಗೆ ಸ್ವಾತಂತ್ರ್ಯನನ್ನುಂಟುಮಾಡುವುದು ಮಾತ್ರವಲ್ಲದೆ, ಅವರಿಗೆ ಜೀವನೋಪಾಯಮಾರ್ಗವನ್ನೂ ತೋರಿಸಿಕೊಡಬೇಕು. ಆದರೆ ಬಹುಕಾಲದಿಂದ ನಡೆದುಬಂದಿರುವ ನಮ್ಮ ಸಂಸರ್ಗ (Union) ವನ್ನು ಕಾಪಾಡುವುದು ನಮ್ಮ ಪ್ರಥಮಕರ್ತವ್ಯವಾಗಿರಬೇಕು. ಎಂದುಹೇಳಿ ಮುಗಿಸಿದನು. ಇದನ್ನು ಕೇಳಿದ ದಾಸ್ಯನಿರೋಧಕರಲ್ಲಿ ಕೆಲವರಿಗೆ ಅಸಮಾಧಾನವಾಯಿತು. ದಾಸ್ಯವನ್ನು ತಪ್ಪಿಸುವುದಕ್ಕಿಂತಲೂ, ಸಂಸರ್ಗವನ್ನು ರಕ್ಷಿಸಬೇಕಾದುದೇ ಪ್ರಥಮ ಕರ್ತವ್ಯವೆಂದು ಲಿಂಕನ್ನನು ಹೇಳಿದಮಾತು ಅವರಿಗೆ ಒಪ್ಪಲಿಲ್ಲ. ಈ ಜನರೆಲ್ಲರೂ ಹ್ವಿಗ್ (Whig) ಪಂಗಡಕ್ಕೆ ಸೇರಿದವರು ಈ ಮಧ್ಯೆ ದೇಶಾಧ್ಯಕ್ಷರ ಚುನಾವಣೆಯು ನಡೆದು ಈಸಾರಿಯೂ ಡೆಮೋಕ್ರ್ಯಾಟ್ ಪಂಗಡದವನೇ ಅಧ್ಯಕ್ಷನಾದನು. ಈ ಸಲ ರಿಪಬ್ಲಿಕ್ ಪಂಗಡದವರು ತಮ್ಮ ಕಡೆಯವನನ್ನೇ ಆ ಪದವಿಗೆ ತರಬೇಕೆಂದು ಎಷ್ಟುಪ್ರಯತ್ನಪಟ್ಟರೂ, ಆಗಲಿಲ್ಲ. ಅವರ ಸಂಖ್ಯೆಯು ಇನ್ನೂ ಕಡಿಮೆಯಾಗಿಯೇ ಇದ್ದಿತು.

೪. ಜನರೆಲ್ಲರೂ ಪ್ರಜಾಸತ್ತಾತ್ಮಕ (Popula Sovereignty) ರಾಜ್ಯಭಾರಕ್ಕೆ ಒಪ್ಪಿಕೊಂಡಿದ್ದರು. ಆದುದರಿಂದ ಇನ್ನುಮುಂದೆ ಆಯಾ

ದೇಶದ ನಿವಾಸಿಗಳೇ ತಮ್ಮ ದೇಶವು ಸ್ವಾತಂತ್ರ್ಯವಾದಿಸಂಸ್ಥಾನ (Free State)ವಾಗಿರಬೇಕೋ, ದಾಸ್ಯವಾದಿಸಂಸ್ಥಾನ (Slave State)ವಾಗಿರಬೇಕೋ ಎಂಬುದನ್ನು ನಿರ್ಧರಿಸಬೇಕಾಗಿದ್ದಿತು. ಸರಕಾರದವರು ಪ್ರಜೆಗಳ ಅಭಿಮತ(Vote)ಗಳನ್ನು ಸಂಗ್ರಹಿಸಿ ಈ ವಿಚಾರವನ್ನು ಸರಿಪಡಿಸುತ್ತಿದ್ದರು. ಕಾನ್ಸಾಸ್ ಪ್ರದೇಶಕ್ಕೆ ಸುತ್ತಮುತ್ತಲ ಪ್ರದೇಶಗಳಿಂದ ದಾಸ್ಯವಾದಿಗಳೂ, ಸ್ವಾತಂತ್ರ್ಯವಾದಿಗಳೂ ಗುಂಪುಗುಂಪಾಗಿ ಬಂದು ನೆಲೆಸಲಾರಂಭಿಸಿದ್ದರು. ಇದರಿಂದ ಆಸಂಸ್ಥಾನದಲ್ಲಿ ಜನಸಂಖ್ಯೆಯು ಹೆಚ್ಚಿ ತೊಂದರೆಯುಂಟಾದುದಲ್ಲದೆ ಒಂದು ಪಂಗಡಕ್ಕೂ ಇನ್ನೊಂದು ಪಂಗಡಕ್ಕೂ ಜಗಳಕ್ಕೆ ಆರಂಭವಾಗಿ ಹೊಡೆದಾಟಗಳಿಗೆ ಮಿತಿಯಿಲ್ಲವಾಯಿತು. ಹಗಲುಹೊತ್ತು ರಾಜಬೀದಿಗಳಲ್ಲಿಯೇ ಒಬ್ಬರಿಗೊಬ್ಬರು ಗುದ್ದಾಡುತ್ತಿದ್ದರು. ಯಾವನಾದರೂ ದಾಸ್ಯನಿರೋಧಕದನು ತನ್ನದಾರಿಯಲ್ಲಿ ಯಾರನ್ನಾದರೂ ಕಂಡರೆ, ಅವನು ಯಾವ ಪಂಗಡದವನೆಂದು ಕೇಳುತ್ತ, ಅವನು ತನ್ನಕಡೆಯವನಾದರೆ ಪರಸ್ಪರವಂದನಾದಿಪುರಸ್ಕಾರಗಳನ್ನು ಬಾಯಿಮಾತಿನಿಂದಲೇ ಮುಗಿಸುತ್ತಲೂ ಇದಿರುಪಂಗಡದವನಾದರೆ ಕೈಕೈ ಕಲೆತು ಮಲ್ಲವಿದ್ಯೆಯಲ್ಲಿ ತನಗಿದ್ದ ನೈಪುಣ್ಯವನ್ನು ಕಾರ್ಯತಃ ತೋರುತ್ತಲೂ ಇದ್ದನು. ಸರಕಾರದವರು ಎಷ್ಟೇ ಪ್ರಯತ್ನಪಟ್ಟರೂ ಸಾಮೋಪಾಯದಿಂದ ಈ ಗಲಭೆಯು ನಿಲ್ಲುವಂತೆ ತೋರಲಿಲ್ಲ. ಕಾರಾಗೃಹಗಳೆಲ್ಲವೂ ಅಪರಾಧಿಗಳಿಂದ ನಿಬಿಡವಾಗಿದ್ದುವು. ನ್ಯಾಯಾಧಿಕಾರಿಗಳಿಗಂತೂ, ಈ ವ್ಯಾಜ್ಯಗಳನ್ನು ಕೇಳಿ ತೀರ್ಪು ಹೇಳಿ ಹೇಳಿ ಬೇಸರವಾಗುತ್ತಿದ್ದಿತು. ಒಬ್ಬಿಬ್ಬರು ಅಪರಾಧಿಗಳನ್ನು ಗಲ್ಲಿಗೇರಿಸಿದರೆ, ಈಗಲಭೆಯು ಕೊಂಚವಾದರೂ ಕಡಿಮೆಯಾಗಬಹುದೆಂದು ಯೋಚಿಸಿ, ಆ ದಂಡನೆಯನ್ನೂ ವಿಧಿಸಿದುದಾಯಿತು. ಅದರಿಂದಲೂ ಏನೂ ಪ್ರಯೋಜನವಾಗಲಿಲ್ಲ, ಇಷ್ಟು ಗಲಭೆಯು ತುಂಬಿದ್ದರೂ, ಹೊರಗಿನಿಂದ ದೇಶದೊಳಕ್ಕೆ ಜನರು ತಡೆಬಿಡುವಿಲ್ಲದೆ ಬರುತ್ತಿದ್ದರು. ಹೊರಗಿನವರು ಈ ದೇಶಕ್ಕೆ ಬರುವುದನ್ನು ಮೊದಲು ತಡೆಯಬೇಕೆಂದು ಅನೇಕ ಕಠಿನನಿರ್ಬಂಧಗಳನ್ನು ಮಾಡಿದರು. ದೇಶದ ಎಲ್ಲೆಲ್ಲಿ ಬಲವಾದ ಸೈನ್ಯವೊಂದನ್ನು ಇಟ್ಟು ಹೊರಗಿನವರನ್ನು ತಡೆದುದೂ ಅಲ್ಲದೆ ದೇಶದೊಳಗೂ ಒಂದು ಸೈನ್ಯವನ್ನಿಟ್ಟು ಪ್ರಜೆಗಳಲ್ಲಿ ಯಾರೇ ಆಗಲಿ ಹೊಡೆದಾಡುವ ಸೂಚನೆಯು

ತೋರಿಬಂದೊಡನೆಯೇ ಅವರನ್ನು ಕೊಲ್ಲಬೇಕೆಂದು ಕಟ್ಟಪ್ಪಣೆಯಾಗಿದ್ದಿತು. ಮೊದಮೊದಲು ಅನೇಕರು ಸೈನಿಕರ ಗುಂಡುಗಳಿಗೆ ತುತ್ತಾದರು. ದಂಗೆಯನ್ನು ಅಡಗಿಸಲು ಮತ್ತಾವ ಉಪಾಯವೂ ಇರಲಿಲ್ಲವಾದುದರಿಂದ, ಈ ದಂಡೋಪಾಯವನ್ನು ಸರ್ವರೂ ಅನುಮೋದಿಸಬಹುದಾಗಿದೆ. ಸ್ವಲ್ಪಕಾಲದಲ್ಲಿಯೇ ಸಂಸ್ಥಾನದಲ್ಲಿ ಶಾಂತಿಯುಂಟಾಯಿತು. ಒಡನೆಯೇ ಸರಕಾರದವರು ಅಲ್ಲಿಯ ನಿವಾಸಿಗಳಿಂದ ಪ್ರಜಾಸಮ್ಮತಿಗಳನ್ನು ತೆಗೆದುಕೊಂಡರು. ಅಲ್ಲಿ ದಾಸ್ಯವಾದಿಗಳೇ ಹೆಚ್ಚಾಗಿದ್ದುದರಿಂದ ಕಾನ್ಸಾಸ್ ದೇಶವೂ ದಾಸ್ಯವಾದಿಸಂಸ್ಥಾನವಾಗಿಯೇ ಸಂಸರ್ಗಕ್ಕೆ ಸೇರಿತು. ಹೀಗೆ ಸ್ವಾತಂತ್ರ್ಯವಾದಿಗಳಿಗೆ ಬಂದಾದಮೇಲೊಂದು ಏಟು ಬೀಳುತ್ತಿದ್ದಿತು.

೩೪. ಇಷ್ಟರಲ್ಲಿ ಡ್ರೆಡ್ ಸ್ಕಾಟ್ (Dred Scott) ಎಂಬೊಬ್ಬ ಗುಲಾಮನು, ತನ್ನ ಯಜಮಾನನಮೇಲೆ ನ್ಯಾಯಸ್ಥಾನಕ್ಕೆ ಒಂದು ವ್ಯಾಜ್ಯವನ್ನು ತಂದನು. ಈ ಸಮಾಚಾರವನ್ನು ಕೇಳುತ್ತಲೇ ಎಲ್ಲರಿಗೂ ಭಯಾಶ್ಚರ್ಯಗಳು ಒಮ್ಮೆಯೇ ತಲೆದೋರಿದುವು. ಇದುವರೆಗೂ ಗುಲಾಮರು ಮನುಷ್ಯರೆಂದು ದಾಸ್ಯವಾದಿಗಳು ತಿಳಿದೇ ಇರಲಿಲ್ಲ ; ಈಗ ಈ ವ್ಯಾಜ್ಯವನ್ನು ಗುಲಾಮನು ಪ್ರಾರಂಭಿಸಿದುದರಿಂದ, ಇನ್ನುಮುಂದೆ ಏನುಬೇಕಾದರೂ ದಾಸರು ಮಾಡಬಹುದೆಂದು ಹೆದರಿ, ಕ್ಷಿಪ್ರದಲ್ಲಿಯೇ ಅವರಿಗೆ ತಕ್ಕಬುದ್ಧಿಯನ್ನು ಕಲಿಸಬೇಕೆಂದು ಹವಣಿಸಿಕೊಳ್ಳುತ್ತಿದ್ದರು ಈ ಸಮಾಚಾರವು ಸ್ವಾತಂತ್ರ್ಯವಾದಿಗಳಿಗೂ ಮೊದಲು ಆಶ್ಚರ್ಯವನ್ನುಂಟುಮಾಡುತ್ತಿದ್ದರೂ ಸಂತೋಷಜನಕವಾಗಿದ್ದಿತು. ಗುಲಾಮರ ಯಜಮಾನರಾದರೋ ಈ ಸುದ್ದಿಯಿಂದ ಕ್ರೋಧಾಂಧರಾಗಿ ತಮ್ಮ ಗುಲಾಮರಮೇಲೆ ಮತ್ತಷ್ಟು ಕ್ರೌರ್ಯವನ್ನು ತೋರಿಸಲಾರಂಭಿಸಿದರು

೬. ಡ್ರೆಡ್‌ಸ್ಕಾಟನು (Dred Scott) ಸೆಂಟ್‌ಲೂಯಿ (St Louis) ಯಲ್ಲಿ ವಾಸವಾಗಿದ್ದ ಒಬ್ಬವೈದ್ಯನ ಹತ್ತಿರ ಗುಲಾಮನಾಗಿದ್ದನು. ಆ ವೈದ್ಯನು ಕೆಲವು ಕಾಲದಮೇಲೆ ತನ್ನ ಪೂರ್ವಸ್ಥಾನವನ್ನು ಬಿಟ್ಟು ಸ್ವಾತಂತ್ರ್ಯವಾದಿಸಂಸ್ಥಾನವಾಗಿದ್ದ ಇಲ್ಲಿನಾಯ್ (Illinois) ದೇಶಕ್ಕೆ ಹೋಗಬೇಕೆಂದು ಹೊರಟು ತನ್ನ ಗುಲಾಮನನ್ನು ತನ್ನಸಂಗಡಲೇ ಕರೆದುಕೊಂಡು ಹೋದನು. ಆ ಗುಲಾಮನಾದರೋ ತಾನು ಸ್ವಾತಂತ್ರ್ಯವಾದಿರಾಜ್ಯದಲ್ಲಿ

ಕಾಲಿಟ್ಟೊಡನೆಯೇ ತನಗೆ ಸ್ವಾತಂತ್ರ್ಯವು ಸಿಕ್ಕಿತೆಂದು ಭಾವಿಸಿದನು. ಕೆಲವುದಿನಗಳು ಕಳೆದುವು. ವೈದ್ಯನು ಮತ್ತೆ ತನ್ನ ಪೂರ್ವನಿವಾಸಸ್ಥಾನಕ್ಕೆ ಹೋಗಬೇಕೆಂದು ಪ್ರಯತ್ನಿಸಲು ಆ ಗುಲಾಮನು ಅವನೊಡನೆ ಹೋಗಲೊಪ್ಪದೆ ಮುಷ್ಕರಮಾಡಿದನು. ಈ ಮಧ್ಯೆ ಸ್ಕಾಟನು ಅಲ್ಲಿಯೇ ಒಬ್ಬಳನ್ನು ಮದುವೆಯಾಗಿದ್ದನು. ಆ ದಂಪತಿಗಳಿಗೆ ಒಂದು ಮಗುವು ಆಗಿದ್ದಿತು. ಆ ಮಗುವು ಸ್ವಾತಂತ್ರ್ಯವಾದಿಸಂಸ್ಥಾನದಲ್ಲಿ ಹುಟ್ಟಿದ್ದುದರಿಂದ, ಅದರ ಮೇಲೆ ತನ್ನ ಯಜಮಾನನಿಗೆ ಯಾವಬಾಧ್ಯತೆಯೂ ಇಲ್ಲವೆಂದು ಸ್ಕಾಟನು ವಾದಿಸಿದನು. ಹೀಗೆ ಯಜಮಾನಸೇವಕರಿಗೆ ಪ್ರಬಲವಾದ ಕಲಹಕ್ಕೆ ಆರಂಭವಾಗಿ ಕಡೆಗೆ ತನಗೆ ಸಹಾಯಮಾಡಿ ಸ್ವಾತಂತ್ರ್ಯವನ್ನು ಕೊಡಿಸಬೇಕೆಂದು ಸ್ಕಾಟನು ನ್ಯಾಯಸ್ಥಾನದಲ್ಲಿ ಮೊರೆಯಿಟ್ಟನು. ನ್ಯಾಯಾಧಿಕಾರಿಗಳಿಗೂ ಈವ್ಯಾಜ್ಯವು ಅತಿವಿಚಿತ್ರವೆಂದು ತೋರಿತು. ಇದುವರೆಗೂ ಯಾವ ಗುಲಾಮನೂ ತನ್ನ ಯಜಮಾನನ ಮೇಲೆ ವ್ಯಾಜ್ಯವನ್ನು ತಂದಿರಲಿಲ್ಲ. ಈ ವ್ಯಾಜ್ಯದಲ್ಲಿ ಹೇಗೆ ತೀರ್ಪುಕೊಡಬೇಕೋ ತಿಳಿಯದಿದ್ದುದರಿಂದ ಆ ನ್ಯಾಯಾಧಿಪತಿಗಳು, ವ್ಯಾಜ್ಯವನ್ನು ಮುಖ್ಯನ್ಯಾಯಸ್ಥಾನಕ್ಕೆ (Supreme-Court) ಕಳುಹಿಸಿಬಿಟ್ಟರು.

೭ ಈ ವ್ಯಾಜ್ಯವು ಆ ನ್ಯಾಯಸ್ಥಾನದಲ್ಲಿ ಕ್ರಮವಾಗಿ ವಿಚಾರಣೆಯಾಗಿ, ಸ್ಕಾಟನಿಗೆ ವಿರೋಧವಾಗಿಯೇ ತೀರ್ಪಾಯಿತು. ತನ್ನ ಯಜಮಾನನನ್ನು ಅನ್ಯಾಯವಾಗಿ ನ್ಯಾಯಸ್ಥಾನಕ್ಕೆ ಎಳೆದುದರಿಂದ ಅವನಿಗೆ ಶಿಕ್ಷೆಯಾದುದಲ್ಲದೆ ತನ್ನ ಯಜಮಾನನೊಂದಿಗೆ ಹೊರಟುಹೋಗಿ ಜೀವಾವಧಿ ಅವನ ಸೇವೆಯನ್ನು ಮಾಡಬೇಕೆಂದು ತೀರ್ಮಾನವಾಯಿತು. ಈ ವಿಚಿತ್ರವಾದ ತೀರ್ಪನ್ನು ಕೇಳಿದೊಡನೆಯೇ ಔತ್ತರೇಯರಿಗೆ ಬಲು ಕ್ರೋಧವಾಯಿತು. ನಿಷ್ಪಕ್ಷಪಾತವಾಗಿರಬೇಕಾದ ನ್ಯಾಯಸ್ಥಾನಗಳಲ್ಲಿಯೇ ಈ ಬಗೆಯಲ್ಲಿ ಅನ್ಯಾಯಗಳು ನಡೆಯುತ್ತಿರುವಾಗ, ತಮ್ಮ ದೇಶಗಳು ಸ್ವಾತಂತ್ರ್ಯವಾದಿಸಂಸ್ಥಾನಗಳು ಹೇಗೆ ಆದಾವೆಂದು ಕೂಗಾಡಲಾರಂಭಿಸಿದರು.

೮. ಈ ಮಧ್ಯೆ ಕಾನ್ಸಾಸಿನಲ್ಲಿ ದೊಡ್ಡ ಗೊಂದಲವೊಂದಾಯಿತು. ಜಾನ್ ಬ್ರೌನ್ (John Brown) ಎಂಬೊಬ್ಬ ದಾಸ್ಯವಿರೋಧಿಯು ಅಲ್ಲಿ ಬಂದು ವಾಸಿಸುತ್ತ ಹೇಗಾದರೂಮಾಡಿ ದಾಸ್ಯವನ್ನು ತಪ್ಪಿಸಬೇಕೆಂದು

ಅನೇಕ ಒಳಸಂಚುಗಳನ್ನು ನಡೆಯಿಸುತ್ತಿದ್ದನು. ಎಲ್ಲಾ ಸಿದ್ಧವಾಗಲು ಅವನು ಇಪ್ಪತ್ತು ಇಪ್ಪತ್ತೈದು ಜನರೊಡನೆ ಹೊರಟು, ಹತ್ತಿರಿದ್ದ ಆಯುಧಾಗಾರವನ್ನು ಸ್ವಾಧೀನಪಡಿಸಿಕೊಂಡನು. ಇಷ್ಟರಲ್ಲಿ ಈ ಸಮಾಚಾರವು ಸರಕಾರಕ್ಕೆ ತಿಳಿದು ಇದನ್ನು ತಡೆಯುವ ಪ್ರಯತ್ನಮಾಡಿದರು. ಇದನ್ನು ಕಂಡು ಬ್ರೌನಿನ ಕಡೆಯ ಕೆಲವು ಅಂಜುಪುರುಷರು ಹೆದರಿ ತಮ್ಮ ತಮ್ಮ ಊರುಗಳಿಗೆ ಓಡಿಹೋದರು. ಬ್ರೌನನು ಮಾತ್ರ ಕೊಂಚಹೊತ್ತು ಧೈರ್ಯದಿಂದ ಹೋರಾಡಿ ಕೊನೆಗೆ ಸೋತುಹೋಗಿ ಕೈಸೆರೆ ಸಿಕ್ಕಿದನು. ಸರಕಾರದವರು ಅವನನ್ನು ಗಲ್ಲಿಗೆ ಹಾಕಿಬಿಟ್ಟರು. ಅವನ ಜೊತೆಯಲ್ಲಿಯೇ ಸೆರೆ ಸಿಕ್ಕಿದ ಇನ್ನೂ ಕೆಲವರಿಗೂ ಅದೇ ಶಿಕ್ಷೆಯಾಯಿತು.

## ಹನ್ನೆರಡನೆಯ ಪ್ರಕರಣ.

### ಲಿಂಕನ್ನನು ದೇಶಾಧ್ಯಕ್ಷನಾದುದು.

ಚಂ|| ದೊರೆತನಮೆಯ್ತರಲ್ ಬಯಕೆ ಹಿಂಗಿದುದೆಂಬುದೊಂದೆ ಸಂತಸಂ |
ದೊರೆದುರುರಾಜ್ಯಮಂ ಸಲಹಿಕೊಳ್ವುದು ಕಷ್ಟಮನುಂಟುಮಾಳ್ಪುದೀ ||
ಪರಿಯೊಳತಿಶ್ರಮಾಪಹರಮುಂ ಶ್ರಮಕಾರಿಯುಮಿಲ್ಲದಿರ್ದ ಕ ||
ಟ್ಟರಸುತನಂ ಸ್ವಹಸ್ತಧೃತದಂಡಮಹಾತಪವಾರಣೋಪಮಂ ||

(ಶಾಕುಂತಲ)

೧. ದೇಶದಲ್ಲೆಲ್ಲಾ ಈ ಬಗೆಯ ಕ್ಷೋಭೆಯುಂಟಾಗಿದ್ದಾಗ ಹಿಂದಿನ ದೇಶಾಧ್ಯಕ್ಷನ ಅಧಿಕಾರದ ಅವಧಿಯು ಮುಗಿದು ಮತ್ತೊಬ್ಬ ಅಧ್ಯಕ್ಷನ ಚುನಾವಣೆಯ ಸಂರಂಭಕ್ಕೆ ಆರಂಭವಾಯಿತು. ತಮ್ಮ ಪಂಗಡದವನೊಬ್ಬನನ್ನು ಆರಿಸಬೇಕೆಂದು ದೇಶದಲ್ಲಿದ್ದ ಮೂರು ಪಂಗಡದವರೂ ತಮ್ಮ ಕೈಯಿಂದಾದ ಸಾಹಸವನ್ನೆಲ್ಲಾ ಮಾಡುತ್ತಿದ್ದರು. ಕಳೆದ ನಾಲ್ಕು ವರ್ಷಗಳ ಕಾಲದಲ್ಲಿ ರಿಪಬ್ಲಿಕನರು ಪ್ರಬಲಿಸಿ, ಆ ಸಲವಾದರೂ ತಮ್ಮ ಪಂಗಡದವರೇ ಗೆಲ್ಲಬೇಕೆಂದು ಬಲು ಚಟುವಟಿಕೆಯಿಂದ ಕೆಲಸಕಾರ್ಯಗಳನ್ನು ಮಾಡುತ್ತ ತಮ್ಮ ಪ್ರಮುಖರಿಂದಲೂ ಚತುರರಾದ ವಾಗ್ಮಿಗಳಿಂದಲೂ ಉಪನ್ಯಾಸಗಳನ್ನು

ನ್ಯೂಯಾರ್ಕ್ ಪಟ್ಟಣದಲ್ಲಿ ಕೊಡಿಸುತ್ತಿದ್ದರು. ಈ ಉಪನ್ಯಾಸಕರಲ್ಲಿ ಲಿಂಕನ್ನನೂ ಒಬ್ಬನು. ಇತರ ಪಟ್ಟಣಗಳಿಗಿಂತಲೂ ನ್ಯೂಯಾರ್ಕ್ (New York) ಬಹು ಅಭಿವೃದ್ಧಿಯಾಗಿ ಅನೇಕ ವಿದ್ವಾಂಸರಿಗೆ ನಿವಾಸಸ್ಥಾನವಾಗಿದ್ದಿತು. ಅಲ್ಲಿದ್ದಷ್ಟು ಜನರು ಮತ್ತೆ ಯಾವ ನಗರದಲ್ಲಿಯೂ ಇರಲಿಲ್ಲ. ಆ ಕಾಲದ ಅಮೇರಿಕದ ಪಟ್ಟಣಗಳಲೆಲ್ಲಾ ಬಹು ಸುಂದರವಾದುದೂ ಐಶ್ವರ್ಯಯುಕ್ತವಾದುದೂ ನಾಗರಿಕತೆಗೆ ಕೇಂದ್ರಸ್ಥಾನವಾದುದೂ ಎನಿಸಿಕೊಂಡಿದ್ದ ಆ ಪಟ್ಟಣದಲ್ಲಿ ತನ್ನ ಸಾಮರ್ಥ್ಯವನ್ನು ತೋರ್ಪಡಿಸುವುದಕ್ಕೆ ಅವಕಾಶವು ದೊರೆಕುದರಿಂದ ಲಿಂಕನ್ನಿಗೆ ಅತ್ಯಂತ ಸಂತೋಷವಾಯಿತು. ತನ್ನ ಕಡೆಯವರೆಲ್ಲರೂ ಒಬ್ಬೊಬ್ಬರಾಗಿ ಉಪನ್ಯಾಸಮಾಡಿದ ಬಳಿಕ ಲಿಂಕನ್ನನು ಕೊನೆಯಲ್ಲಿ ಉಪನ್ಯಾಸಮಾಡಬೇಕೆಂದು ಗೊತ್ತಾಗಿದ್ದಿತು.

೧. ೧೮೬೦ನೆಯ ಇಸವಿಯ ಫೆಬ್ರವರಿ ೨೭ನೆಯ ತಾರೀಖಿನ ದಿನ ಲಿಂಕನ್ನಿನ ಉಪನ್ಯಾಸವು ಪ್ರಾರಂಭವಾಯಿತು. ಅವನು ಉಪನ್ಯಾಸಮಾಡಲಿಕ್ಕೆ ಜನರಮುಂದೆ ಬಂದು ನಿಂತೊಡನೆಯೇ ಅವರು ಅವನ ಬಟ್ಟೆಬರೆಗೂ ಆಕೃತಿಗೂ ಅಪಹ್ಯಾಸಪಟ್ಟುಕೊಂಡು ಗೇಲಿಮಾಡಿ ನಗಲಾರಂಭಿಸಿದರು. ಚಪ್ಪಾಳೆಗಳ ಶಬ್ದವು ನಿಲ್ಲುವುದಕ್ಕೇ ಬಹಳ ಹೊತ್ತಾಯಿತು. ಉಪನ್ಯಾಸಕ್ಕೆ ಪೂರ್ವದಲ್ಲಿಯೇ ಈ ಬಗೆಯ ಕುಚೋದ್ಯಗಳಿಗೆ ಆರಂಭವಾದುದರಿಂದ, ಲಿಂಕನ್ನನು ತನ್ನ ಉಪನ್ಯಾಸವನ್ನು ಮುಂದುವರಿಸುವುದಿಲ್ಲವೆಂದು ಅವನ ಸಂಗಡದವರು ಯೋಚಿಸುತ್ತಿದ್ದರು. ಹಿಂದಿನವರು ಉಪನ್ಯಾಸಮಾಡಿ ಜನರ ಮನಸ್ಸನ್ನು ತಮ್ಮಕಡೆಗೆ ಬಲಿಸಿಕೊಂಡಿದ್ದುದನ್ನು ಲಿಂಕನ್ನನು ಹಾಳುಮಾಡುವನೆಂದು ಕೆಲವರು ಭಯಪಟ್ಟರು; ವಾಸ್ತವವಾಗಿ ಅಂತಹ ಭಯಕ್ಕೆ ಪ್ರಬಲವಾದ ಕಾರಣವಿರಲಿಲ್ಲ. ಸದಸ್ಯರು ಗೇಲಿಮಾಡುತಿದ್ದರೂ, ಲಿಂಕನ್ನ ನುಮಾತ್ರ ಎಂದಿನಂತೆಯೇ ಶಾಂತಚಿತ್ತನಾಗಿದ್ದನು. ಸಂಪತ್ತಿನಲ್ಲಿಯೂ ವಿಪತ್ತಿನಲ್ಲಿಯೂ ಏಕರೂಪವಾಗಿರುವುದೇ ಮಹಾತ್ಮರ ಸ್ವಭಾವವಷ್ಟೆ? ಇದೂ ಅಲ್ಲದೆ ಲಿಂಕನ್ನನು ಅನೇಕವೇಳೆ ಜನರ ಅಪಹಾಸ್ಯಗಳಿಗೂ ಕುಚೋದ್ಯಗಳಿಗೂ ಗುರಿಯಾಗಿದ್ದರೂ, ಕೊನೆಕೊನೆಗೆ ಅವರ ಮನಸ್ಸನ್ನು ತನ್ನಕಡೆಗೆ ಬಲಿಸಿಕೊಂಡಿದ್ದುದರಿಂದ ಇಲ್ಲಿಯೂ ಹಾಗೇ ಆಗಬಹುದೆಂದು ಅವನು ಧೈರ್ಯದಿಂದಿದ್ದನು. ಅಷ್ಟುಗದ್ದಲವಾಗಿದ್ದರೂ ಲಿಂಕನ್ನನು ಸ್ವಲ್ಪವೂ

ತಡೆಬಿಡುವಿಲ್ಲದೆ ತನ್ನ ಉಪನ್ಯಾಸವನ್ನು ಮಾಡುತ್ತಲೇ ಇದ್ದನು. ಜನರೆಲ್ಲಾ ಕುಚೇಷ್ಟೆಯಲ್ಲಿ ನಿರತರಾಗಿದ್ದುದರಿಂದ, ಅವನು ಉಪನ್ಯಾಸವನ್ನು ಹೇಗೆ ಮೊದಲುಮಾಡಿದ್ದನೋ ಅದು ಯಾರಿಗೂ ತಿಳಿಯಲೇ ಇಲ್ಲ. ಸ್ವಲ್ಪಹೊತ್ತಾದ ಬಳಿಕ ಗದ್ದಲವು ಕ್ರಮಕ್ರಮವಾಗಿ ಕಡಿಮೆಯಾಗುತ್ತಾ ಬಂದಿತು.

೩. ಆ ಸಂದರ್ಭದಲ್ಲಿ, ಲಿಂಕನ್ನನು ರಾಜ್ಯಭಾರದ ವಿಷಯವನ್ನು ಕುರಿತು ಉಪನ್ಯಾಸಮಾಡುತ್ತಿದ್ದನು. ಆ ವಿಷಯವು ಎಷ್ಟೇಮುಖ್ಯವಾದು ದಾದರೂ, ಸಾಮಾನ್ಯಜನರಿಗೆ ಸುಲಭವಾಗಿ ತಿಳಿಯುವುದಿಲ್ಲವಾದುದರಿಂದ ಅದು ನೀರಸವಾದುದೆಂದೇ ಭಾವಿಸಿ, ಇಂತಹ ಕಡೆಗಳಲ್ಲಿ ಆ ವಿಷಯವನ್ನು ಕುರಿತು ಉಪನ್ಯಾಸಮಾಡಲು ಅನೇಕ ಪ್ರೌಢೋಪನ್ಯಾಸಕರೇ ಹೆದರು ವರು. ಆದರೆ ಲಿಂಕನ್ನನು ಬೇಕೆಂದೇ ಆ ವಿಷಯವನ್ನಾರಿಸಿಕೊಂಡು ಅದು ಎಲ್ಲರಿಗೂ ಸುಲಭವಾಗಿ ತಿಳಿಯುವಂತೆಯೂ, ಸರ್ವರಿಗೂ ಸಂತೋಷವಾಗು ವಂತೆಯೂ ಮಾತನಾಡಲು ಸಿದ್ಧಮಾಡಿಕೊಂಡಿದ್ದನು. ಗದ್ದಲವು ಸ್ವಲ್ಪ ಶಾಂತವಾದೊಡನೆಯೇ ಅನೇಕರು ಉಪನ್ಯಾಸವನ್ನು ಶ್ರದ್ಧೆಯಿಂದ ಕೇಳಲಾ ರಂಭಿಸಿದರು. ಮತ್ತೆ ಕೆಲವರು ಯಾವುದಾದರೊಂದು ಹಾಸ್ಯಕರವಾದ ಮಾತನ್ನು ಉಪನ್ಯಾಸಕನು ಹೇಳಿದಾಗ ಅದು ತಮಗೆ ಸಂಪೂರ್ಣವಾಗಿ ತಿಳಿ ಯದಿದ್ದರೂ ಇತರರಂತೆಯೇ ಚಪ್ಪಾಳೆಹೊಡೆದು ಕೇಕೆಹಾಕಿ ನಗುತ್ತಿದ್ದರು. ತಾನು ಹೇಳುವ ಮಾತುಗಳು ಸ್ವಲ್ಪವಾದರೂ ಜನರಿಗೆ ತಿಳಿದು ಅವರಿಗೆ ಸಂತೋಷವನ್ನುಂಟುಮಾಡುವುದಕ್ಕಾಗಿ ಅವನು ನಡುನಡುವೆ ಅಂದವಾದ ಸಣ್ಣ ಸಣ್ಣ ಉಪಕಥೆಗಳನ್ನುಹೇಳುತ್ತಾ ಉಪನ್ಯಾಸವನ್ನು ಮಾಡುತ್ತಿದ್ದನು. ಉಪನ್ಯಾಸವು ಕೊನೆಯನ್ನು ಸಮೀಪಿಸಿದಂತೆಲ್ಲಾ ಜನರ ಮನಸ್ಸು ಲಿಂಕ ನ್ನಿನ ಕಡೆಗೆ ನಟ್ಟುಹೋಗುತ್ತಾ ಬಂದಿತು. ಅದನ್ನು ತಿಳಿದುಕೊಂಡು ಲಿಂಕ ನ್ನನು ತನ್ನ ವಾಕ್ಪಟುತೆಯ ಮಾಹಾತ್ಮ್ಯೆಯಿಂದ ತನ್ನ ಪ್ರತಿಯೊಂದುಮಾತೂ ಆ ಜನರ ಹೃದಯದಲ್ಲಿ ನಾಟುವಂತೆ ಒತ್ತಿಹೇಳುತ್ತಿದ್ದನು ಕಡೆಗೆ ಉಪ ನ್ಯಾಸವು ಮುಗಿದಾಗ ಸದಸ್ಯರೆಲ್ಲರೂ ಬೆರಗಾಗಿಹೋಗಿದ್ದರು. ಆದುದ ರಿಂದ ಅವರಿಗೆ ಲಿಂಕನ್ನಿನ ವಿಷಯದಲ್ಲಿ ಪೂಜ್ಯಬುದ್ಧಿ ಉತ್ಪನ್ನವಾಗಲು, ಅವರು ತಮ್ಮ ಮೊದಲಿನ ನಡತೆಗೆ ನಾಚಿಕೆಪಟ್ಟುಕೊಂಡು ಲಿಂಕನ್ನಿನ ಕ್ಷಮಾಪಣೆಯನ್ನು ಬೇಡಿದರು. ಹೀಗೆ ಉಪನ್ಯಾಸವು ಪೂರೈಸುತ್ತಲೇ

ಜನರು ಸಂತೋಷದಿಂದ ಜಯಘೋಷವನ್ನು ಮಾಡಿದುದನ್ನು ನೋಡಿ ತನಗೆ ಆದ ಜಯಕ್ಕಾಗಿ ಲಿಂಕನ್ನಿಗೂ ಅವನ ಕಡೆಯುವರಿಗೂ ಬಹು ಸಂತೋಷ ವಾಯಿತು.

೪. ಹೀಗೆ ಉಪನ್ಯಾಸಗಳೆಲ್ಲವೂ ಮುಗಿದ ಮೇಲೆ ತಮ್ಮ ಪಂಗಡದ ಪರವಾಗಿ ಯಾರನ್ನು ಚುನಾವಣೆಗೆ ಕಳುಹಿಸಬೇಕೆಂದು ರಿಪಬ್ಲಿಕನರು ಆಲೋಚನೆಮಾಡಲಾರಂಭಿಸಿದರು. ಇಲಿನಾಯ್ (Illinois) ಪ್ರದೇಶದವ ರೆಲ್ಲಾ ಒಕ್ಕಟ್ಟಾಗಿ ಲಿಂಕನ್ನನೇ ಚುನಾವಣೆಗೆ ನಿಲ್ಲಬೇಕೆಂದರು. ಮ ತ್ತೊಂದುಪ್ರದೇಶದವರು, ವಿಲಿಯಮ್ ಸೀವರ್ಡ್ (William H. Seward) ನ್ನು ಕಳುಹಬೇಕೆಂದರು. ಸೀವರ್ಡನು ಎಷ್ಟೋ ಬಾರಿ ಸೆನೆಟ್ ಸಭೆಯ ಸದಸ್ಯನಾಗಿದ್ದನು. ಅಂತು ಈ ಸಲ ರಿಪಬ್ಲಿಕನರಲ್ಲಿ ಸ್ವಲ್ಪ ಅಂತಃಕಲಹ ವುಂಟಾಗಿ ನಾಲ್ವರು ಚುನಾವಣೆಗೆ ನಿಂತರು. ಇವರಲ್ಲಿ ಯಾರೂ ವಾದ ದಲ್ಲಿ ಸೋಲುವವರಾಗಿರಲಿಲ್ಲ. ಈ ಪಂಗಡದಲ್ಲಿಯೇ ನಾಲ್ಕುಶಾಖೆಗಳಾಗಿ ಒಂದೊಂದು ಶಾಖೆಯವರೂ ಒಬ್ಬೊಬ್ಬನ ಪಕ್ಷವನ್ನು ಹಿಡಿದು ವಾದಿಸಲಾ ರಂಭಿಸಿದ್ದರು. ಕೊನೆಗೆ ರಿಪಬ್ಲಿಕನರೂ ಒಂದು ಸಭೆಯನ್ನು ಕೂಡಿಸಿ ಆ ಉಮೇದುವಾರರಲ್ಲಿ ಹೆಚ್ಚಾಗಿ ಅಭಿಮತ (Vote) ದೊರೆತವರನ್ನು ಆರಿಸಿ ಕೊಳ್ಳಬೇಕೆಂದು ಸೂಚಿಸಿದರು. ಈ ಸೂಚನೆಗೆ ಎಲ್ಲರೂ ಒಪ್ಪಿ ಅತ್ಯು ತ್ಸಾಹದಿಂದ ತಮ್ಮತಮ್ಮ ಕಡೆಗೆ ಹೆಚ್ಚು ಅಭಿಮತಗಳು ದೊರೆಯುವಂತೆ ಬಹಳ ಏರ್ಪಾಡನ್ನು ಮಾಡಿಕೊಂಡರು. ಅಭಿಮತಗಳನ್ನು ತೆಗೆದುಕೊಂಡು ಪರೀಕ್ಷಿಸಿದಾಗ ಏಬ್ರಹಾಮ್ ಲಿಂಕನ್ನಿಗೇ ವಿಜಯವುಂಟಾಗಿದ್ದಿತು. ಆದು ದರಿಂದ ಅವನೇ ರಿಪಬ್ಲಿಕನ್ ಪಂಗಡದವರ ಪರವಾಗಿ ದೇಶಾಧ್ಯಕ್ಷನ ಚುನಾ ವಣೆಗೆ ನಿಲ್ಲಬೇಕೆಂದು ನಿಷ್ಕರ್ಷೆಯಾಯಿತು.

೫. ಲಿಂಕನ್ನಿಗೆ ಆದ ಜಯದಿಂದ ಸೀವರ್ಡನಿಗೆ ಬಹು ಅವಮಾನವೂ ಆಶಾ ಭಂಗವೂ ಆದುವು. ದೇಶಾಧ್ಯಕ್ಷನಾಗಿ ಶ್ವೇತಗೃಹದಲ್ಲಿ (White House)* ಅತಿ ವೈಭವದಿಂದಿರುತ್ತ ರಾಜ್ಯವಾಳದಂತೆ ತಾನೆಷ್ಟೋಬಾರಿ ಕನಸುಕಂಡಿ

* ಅಮೇರಿಕದ ಸಂಯುಕ್ತಸಂಸ್ಥಾನಗಳ ದೇಶಾಧ್ಯಕ್ಷನು ವಾಸಿಸುವ ಸರಕಾರಿಕಟ್ಟಡಕೆ ಹ್ವೈಟ್‌ಹೌಸ್ ಎಂದರೆ ಶ್ವೇತಗೃಹವೆಂದು ಹೆಸರಿರುವುದು.

ದ್ದವನಿಗೆ, ಆಗಿದ್ದ ಆ ಸೋಲು ನಿಶ್ಚಯವೆಂಬುದೇ ತಿಳಿಯದೆಹೋಯಿತು. ಅವನ ಪರಿತಾಪಕ್ಕಿಂತಲೂ ಅವನ ಕಡೆಯವರ ಹಾರಾಟವೇ ಹೆಚ್ಚಿತ್ತು. ಅವರು ಲಿಂಕನ್ನಿನಮೇಲೆ ಇಲ್ಲದ ದೋಷಾರೋಪಣೆಗಳನ್ನು ಮಾಡಿ ಜನರ ಮನಸ್ಸನ್ನು ಕೆಡಿಸಿ ಮುಂದಿನ ಚುನಾವಣೆಯಲ್ಲಾದರೂ ಲಿಂಕನ್ನಿಗೆ ಅಪಜಯವಾಗುವಂತೆ ಮಾಡಬೇಕೆಂದು ಇನ್ನಿಲ್ಲದಷ್ಟು ಪ್ರಯತ್ನಮಾಡುತ್ತಿದ್ದರು. ಲಿಂಕನ್ನನು ಇದೊಂದನ್ನೂ ಮನಸ್ಸಿಗೆ ಹಚ್ಚಿಕೊಳ್ಳದಿದ್ದನು. ಇನ್ನೂ ಅವನು ದೇಶಾಧ್ಯಕ್ಷನಾಗಿರಲಿಲ್ಲ. ಆ ಪದವಿಯನ್ನು ಹೊಂದುವುದಕ್ಕೆ ಮೊದಲು ಇನ್ನೂ ಒಂದು ಕಷ್ಟತರವಾದ ಚುನಾವಣೆಯಲ್ಲಿ ತೇರ್ಗಡೆಯಾಗಬೇಕಾಗಿದ್ದಿತು. ತಾನು ದೇಶಾಧ್ಯಕ್ಷನಾಗಲಿ, ಆಗದಿರಲಿ, ರಿಪಬ್ಲಿಕನರ ಕಡೆಯವನಾಗಿ ಚುನಾವಣೆಗೆ ನಿಂತಿರುವೆನಲ್ಲಾ ಎಂಬ ಗೌರವವೊಂದೇ ಅವನಿಗೆ ಸಾಕಾಗಿದ್ದಿತು.

೬. ದೇಶಾಧ್ಯಕ್ಷನ ಚುನಾವಣೆಗಾಗಿ ಸಭೆಯು ಆ ವರುಷ ಚಿಕಾಗೋ (Chicago) ಪಟ್ಟಣದಲ್ಲಿ ಸೇರಿ ಪ್ರತಿಯೊಂದು ಸಂಗಡದವರೂ ತಂತಮ್ಮ ಪ್ರತಿನಿಧಿಗಳನ್ನು ಕಳುಹಿಸಿದ್ದರು. ಡೆಮೊಕ್ರ್ಯಾಟ್ (Democrat) ಸಂಗಡದವನಾಗಿ ಲಿಂಕನ್ನಿನ ಪೂರ್ವಸ್ನೇಹಿತನಾದ ಡಗ್ಲಸ (Stephen A. Douglas) ನೇ ಚುನಾವಣೆಗೆ ನಿಂತಿದ್ದನು. ಆ ಪಟ್ಟಣವು ಅತಿಮನೋಹರವಾಗುವಂತೆ ಅಲಂಕೃತವಾಗಿದ್ದಿತು. ದೇಶಾಧ್ಯಕ್ಷನ ಚುನಾವಣೆಗೋಸ್ಕರ ಎಲ್ಲೆಲ್ಲಿಂದಲೂ ಜನರು ಬಂದು ಆ ಪಟ್ಟಣದಲ್ಲಿ ಕಿಕ್ಕಿರಿಯುವಂತೆ ತುಂಬಿಹೋಗಿದ್ದರು. ಕೆಲವರು ತಮಗಲ್ಲಿ ಯಾವಕೆಲಸವೂ ಇಲ್ಲದಿದ್ದರೂ ಆ ನೋಟವನ್ನು ನೋಡಲು ಬಹುದೂರದಿಂದ ಬಂದಿದ್ದರು. ಈ ಸಭೆಯು ಮೇ ತಿಂಗಳಲ್ಲಿ ಪ್ರಾರಂಭವಾದರೂ ಚುನಾವಣೆಯು ಮಾತ್ರ ನವೆಂಬರು ತಿಂಗಳಲ್ಲಿ ನಡೆಯುವುದಾಗಿದ್ದಿತು. ಈ ಮಧ್ಯೆ ಆಯಾ ಸಂಗಡದವರು ಅಲ್ಲಿ ಸೇರಿದ್ದ ಜನರಿಗೆ ಉಪನ್ಯಾಸಗಳನ್ನು ಮಾಡುತ್ತ ಜನರೆಲ್ಲರೂ ತಮ್ಮತಮ್ಮ ಕಡೆಗೆ ಅಭಿಮತವನ್ನು ಕೊಡಬೇಕೆಂದು ಬಲಾತ್ಕರಿಸುತ್ತಿದ್ದರಲ್ಲದೆ ಸುತ್ತುಮುತ್ತಲ ಹಳ್ಳಿಗಳಿಂದಲೂ ತಮ್ಮ ಕಡೆಯ ಜನರನ್ನು ಕರೆತಂದು ಆ ಪಟ್ಟಣದಲ್ಲಿ ತುಂಬುತ್ತಿದ್ದರು.

೭. ಚಿಕಾಗೋ ಪಟ್ಟಣದಲ್ಲಿ ತಮ್ಮ ಕೆಲಸಕಾರ್ಯಗಳು ಮುಗಿದೊಡನೆಯೇ ಉಮೇದುವಾರರೆಲ್ಲರೂ ತಂತಮ್ಮ ಊರುಗಳಿಗೆ ಬಂದುಬಿಟ್ಟು

ಕೆಲವರು ತಾವು ಆಗಲೇ ದೇಶಾಧ್ಯಕ್ಷರೂ ಆದಹಾಗೂ, ತಮ್ಮ ರಾಜ್ಯಭಾರದಲ್ಲಿ ಅತ್ಯುತ್ತಮವಾದ ಅನೇಕ ಬದಲಾವಣೆಗಳನ್ನು ಏರ್ಪಡಿಸಿ ದೇಶದಲ್ಲೆಲ್ಲಾ ಸ್ವರ್ಗೀಯಸೌಖ್ಯವನ್ನು ಸ್ಥಾಪಿಸಿಬಿಟ್ಟದ್ದಂತೆಯೂ ಕನಸುಕಾಣುತ್ತಿದ್ದರು. ಇನ್ನು ಕೆಲವರು ತಮ್ಮ ಮುಂದಿನ ಉನ್ನತಪದವಿಗೆ ಬೇಕಾದ ಶ್ರೀಮದ್ಗಾಂಭೀರ್ಯವನ್ನೂ ಅಸಾಧಾರಣವಾದ ನಡತೆಯನ್ನೂ ಅಭ್ಯಾಸಮಾಡಿಕೊಳ್ಳುತ್ತಲೂ ಇದ್ದರು. ಇವರಲ್ಲಿ ಅತ್ಯಲ್ಪಕಾಲದಲ್ಲಿಯೇ ಅನೇಕಬದಲಾವಣೆಗಳುಂಟಾದುವು. ಸಹಜವಾಗಿಯೂ ಉದಾತ್ತಪುರುಷನಾಗಿದ್ದ ಲಿಂಕನ್ನಿನಲ್ಲಿ ಈ ಬಗೆಯ ಬದಲಾವಣೆಗಳಾವುವೂ ಆಗಲಿಲ್ಲ. ಚಿಕಾಗೋಪಟ್ಟಣದಲ್ಲಿ ತನ್ನ ಕೆಲಸವು ಪೂರೈಸಿದೊಡನೆಯೇ ಅವನು ಸ್ಪ್ರಿಂಗ್ ಫೀಲ್ಡಿಗೆ ಹಿಂದಿರುಗಿ ಬಂದುಬಿಟ್ಟನು. ಅವನನ್ನು ನೋಡುವುದಕ್ಕಾಗಿ ಅನೇಕಜನ ಸ್ನೇಹಿತರು ಪ್ರತಿದಿನವೂ ಬರುತ್ತಿದ್ದರು. ಅವನಲ್ಲಿಗೆ ಬರುವುದಕ್ಕೆ ಮೊದಲು ಲಿಂಕನ್ನಿಗೆ ಬಲು ಗರ್ವ ಉಂಟಾಗಿರಬಹುದೆಂದೂ ತಮ್ಮನ್ನು ಕಣ್ಣೆತ್ತಿಯೂ ನೋಡನೆಂದೂ ಅವರೆಲ್ಲರೂ ಯೋಚಿಸುತ್ತಿದ್ದರು. ತಮಗೆ ಅವಮಾನವಾಗುವುದೋ ಏನೋ ಎಂಬ ಭಯವು ಅವರನ್ನು ಬಹುವಾಗಿ ಬಾಧಿಸುತ್ತಿದ್ದಿತು. ಆದರೆ ಅವರ ಭಯಕ್ಕೆ ತಕ್ಕ ಕಾರಣವಿರಲಿಲ್ಲ. ಲಿಂಕನ್ನನು ಅವರೊಡನೆ ಮೊದಲಿಗಿಂತಲೂ ಹೆಚ್ಚು ಸಲಿಗೆಯಿಂದ ಮಾತನಾಡುತ್ತ ಅವರನ್ನು ಬಹುಪ್ರೀತಿಯಿಂದ ಕಾಣುತ್ತಿದ್ದನು. ಇದನ್ನು ಕಂಡು ಅವರಿಗೆ ಅತ್ಯಾಶ್ಚರ್ಯವಾದುದಲ್ಲದೆ ಅವನಲ್ಲಿ ಅವರಿಗೆ ಪೂಜ್ಯಬುದ್ಧಿಯುಂಟಾಯಿತು. ಆದರೆ ಈಗ ಲಿಂಕನ್ನನು ಹಿಂದಿನಷ್ಟು ಹೆಚ್ಚಾಗಿ ಜನರಲ್ಲಿ ಬೆರೆಯುತ್ತಿರಲಿಲ್ಲ. ಇದು ಒಂದು ದೊಡ್ಡ ದೋಷವೆಂದು ನಾವು ಭಾವಿಸಲಾಗದು. ಅದೃಷ್ಟವಶದಿಂದ ತಾನೇ ಆ ಪದವಿಗೆ ಬಂದರೆ ಮುಂದೆ ತನ್ನ ಕರ್ತವ್ಯವೇನೆಂದು ಲಿಂಕನ್ನನು ನಿರಂತರವೂ ಯೋಚಿಸುತ್ತಿದ್ದನು. ಆಗ ದೇಶದಲ್ಲಿ ಉಂಟಾಗುತ್ತಿದ್ದ ಕ್ಷೋಭೆಯನ್ನು ನಿವಾರಿಸಲು ತಕ್ಕ ಉಪಾಯವಾವುದೆಂದು ಸರ್ವದಾ ವಿಚಾರಮಾಡುತ್ತಿದ್ದನು. ಆ ಪದವಿಯಲ್ಲಿ ತಾನು ಮಾಡಬೇಕಾದ ಕಾರ್ಯಗಳನ್ನೆಲ್ಲಾ ನಿರ್ವಹಿಸಲು ತಕ್ಕ ಶಕ್ತಿಯು ತನ್ನಲ್ಲಿರುವುದೋ ಇಲ್ಲವೋ ಎಂಬ ಭಯವು ಅವನನ್ನು ಅನವರತವೂ ಬಾಧಿಸುತ್ತಿದ್ದಿತು. ತಾನು ದೇಶಾಧ್ಯಕ್ಷನಾದರೆ ಗುಲಾಮರಿಗೆ ಸ್ವಾತಂತ್ರ್ಯವನ್ನುಂಟುಮಾಡಬೇಕೆಂದು ಅವನು ಇದಕ್ಕೆ

ಪೂರ್ವದಲ್ಲಿಯೇ ನಿಶ್ಚಯಿಸಿಕೊಂಡಿದ್ದನು. ಎಂದಿನಂತೆಯೇ ಜನರ ಮೇಲ್ಮೆ ಗೋಸುಗ ಆ ಪದವಿಯನ್ನು ಲಿಂಕನ್ನನು ಅಪೇಕ್ಷಿಸುತ್ತಿದ್ದನಲ್ಲದೆ ತನ್ನ ಆತ್ಮಸಂತೃಪ್ತಿಗಲ್ಲ ; ತನ್ನ ನಂಟರಿಷ್ಟರನ್ನು ಉನ್ನತಪದವಿಗೆ ತರುವು ದಕ್ಕೂ ಅಲ್ಲ.

೮. ೧೮೬೦ನೆಯ ಇಸವಿಯ ನವೆಂಬರು ತಿಂಗಳಲ್ಲಿ ಚುನಾವಣೆಗೆ ಆರಂಭವಾಗಿ ಅಭಿಮತಗಳನ್ನು ತೆಗೆದುಕೊಂಡರು. ಏಬ್ರಹಾಮ್ ಲಿಂಕ ನ್ನಿಗೇ ಹೆಚ್ಚು ಸಮ್ಮತಿಗಳು ಬಂದಿದ್ದುದರಿಂದ ಅವನೇ ದೇಶಾಧ್ಯಕ್ಷನಾದನು.

## ಹದಿಮೂರನೆಯ ಪ್ರಕರಣ.

### ಯುದ್ಧದ ಸೂಚನೆಗಳು.

೧. ಏಬ್ರಹಾಮ್ ಲಿಂಕನ್ನನು ಅಧ್ಯಕ್ಷನಾದ ಕೂಡಲೇ ವಾಷಿಂಗ್ ಟನ್ (Washington) ಪಟ್ಟಣಕ್ಕೆ ಹೋಗಿ ರಾಜ್ಯಭಾರಕಾರ್ಯವನ್ನು ವಹಿಸಿಕೊಳ್ಳಲು ಆಗಲಿಲ್ಲ. ಕೆಲಸಗಳು ಹೆಚ್ಚಾಗಿರುವಾಗ ಹಿಂದಿನ ಅಧ್ಯ ಕ್ಷನನ್ನೇ ಇನ್ನು ನಾಲ್ಕು ತಿಂಗಳ ವರೆಗೂ ನಿಲ್ಲಿಸುವ ಪದ್ಧತಿ ಇದ್ದಿತು. ಇದ ರಿಂದ ಅನೇಕ ತೊಂದರೆಗಳಾಗುತ್ತಿದ್ದುವು. ಮುಖ್ಯವಾಗಿ ಹೊಸಬನಿಗೂ ಹಳಬನಿಗೂ ಕೆಲಸದಲ್ಲಿ ಅನಾದರಣೆಯುಂಟಾಗುವ ಸಂಭವವಿದ್ದಿತು. ಇಂತಹ ಸಂದರ್ಭವು ಈಗ ಒದಗಿ ಕಾರಣಾಂತರದಿಂದ ಹಿಂದಿದ್ದ ಡೆಮೊ ಕ್ರ್ಯಾಟ್ ಪಂಗಡದ ದೇಶಾಧ್ಯಕ್ಷನೇ ಇನ್ನೂ ನಾಲ್ಕು ತಿಂಗಳು ಆ ಕೆಲಸ ದಲ್ಲಿಯೇ ಇರಬೇಕಾಯಿತು. ಆಗ ಅವನು ತಾನಾವಕಾರ್ಯದಲ್ಲಿಯೂ ಕೈಹಾಕುವುದಿಲ್ಲವೆಂದು ಹೇಳಿದನು. ಲಿಂಕನ್ನಾದರೋ ತಾನು ಆ ಪದವಿ ಗೆ ಬಂದಹೊರತು ರಾಜ್ಯಕಾರ್ಯಕ್ಕೂ ತನಗೂ ಏನೂ ಸಂಬಂಧವಿಲ್ಲ ವೆಂದನು. "ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು" ಎಂಬ ಗಾದೆಗೆ ಸರಿಯಾಗಿ ಈ ಇಬ್ಬರು ಅಧ್ಯಕ್ಷರುಗಳ ಅನಾದರಣೆಯಿಂದ ದೇಶ ಸ್ಥಿತಿಯು ಕೆಡುತ್ತಿದ್ದಿತು. ರಾಜ್ಯಕಾರ್ಯದ ಬಿಗಿಯು ಸಡಿಲಿತು. ಎಲ್ಲೆಲ್ಲಿಯೂ ಸಣ್ಣಪುಟ್ಟ ದಂಗೆಗಳಾಗುವ ಸೂಚನೆಯು ತೋರಬಂದಿತು. ಮೇಲಿನ ಅಧಿಕಾರಿಗಳು ಹೀಗೆ ಅಲಕ್ಷ್ಯದಿಂದಿದ್ದಾಗ ಸಣ್ಣಪುಟ್ಟ ಅಧಿಕಾರಿಗ

ಹೋರಾಟಕ್ಕೆ ಕೊನೆಮೊದಲುಂಟೆ? ಬಹರ್ರೈತರಿಗೆ ಸಣ್ಣ ಅಧಿಕಾರಿಗಳ ಹಿಂಸೆಯು ಬಲವಾಯಿತು. ಇಷ್ಟಾದರೂ ಹಳೆಯ ಅಧ್ಯಕ್ಷನು ಇವುಗಳನ್ನೆಲ್ಲಾ ನಿಲ್ಲಿಸಲು ಯತ್ನಿಸದಿದ್ದನು. ತಾನೆಷ್ಟು ದಿವಸ ಕೆಲಸದಲ್ಲಿರುವನೋ ಅಷ್ಟು ದಿವಸವಾದರೂ, ನಿರ್ವಂಚನೆಯಿಂದ ಕೆಲಸಮಾಡಬೇಕೆಂಬ ಭಾವನೆಯು ಅವನಲ್ಲಿರಲಿಲ್ಲ. ಲಿಂಕನ್ನನು ಇದನ್ನೆಲ್ಲಾ ಕಂಡರೂ ಕಾಣದಂತಿದ್ದನು. ರಾಜ್ಯಭಾರವನ್ನು ಕ್ರಮವಾಗಿ ವಹಿಸಿಕೊಳ್ಳುವುದಕ್ಕೆ ಮುಂಚೆಯೇ ರಾಜ್ಯಕಾರ್ಯಗಳಲ್ಲಿ ಕೈಹಾಕುವುದು ಅನುಚಿತವೆಂದೂ, ಹಾಗೆ ಬಂದುವೇಳೆ ಕೈಹಾಕಿದರೆ ತನಗೆ ಅವಮಾನವಾಗಬಹುದೆಂದೂ ಸುಮ್ಮನಿದ್ದನು.

೨. ಏಬ್ರಹಾಮನು ಅಧ್ಯಕ್ಷನಾದುದು ದಾಸ್ಯಪರರಾದ ದಾಕ್ಷಿಣಾತ್ಯರಿಗೂ, ಡೆಮೋಕ್ರ್ಯಾಟ್ ಪಂಗಡದವರಿಗೂ ಸಮ್ಮತವಾಗಿರಲಿಲ್ಲ. ಅವನು ದಾಸ್ಯನಿರೋಧಕನಾದುದರಿಂದ ದಾಸ್ಯವನ್ನು ನಿರ್ಮೂಲಿಸಲು ಸರ್ವಪ್ರಯತ್ನಗಳನ್ನೂ ಮಾಡುವನೆಂದೂ ಅದರಿಂದ ತಮ್ಮೆಲ್ಲರಿಗೂ ಅಪಾರವಾದ ಕಷ್ಟನಷ್ಟಗಳುಂಟಾಗುವುವೆಂದೂ ಅವರು ತಿಳಿದಿದ್ದರು. ಲಿಂಕನ್ನಿನ ಧರ್ಮಬುದ್ಧಿಯು ಅವರಿಗೆ ತಿಳಿದಿರಲಿಲ್ಲ. ಇದಿರುಪಂಗಡಕ್ಕೆ ಸೇರಿದವನೆಂದರೆ ಅವನು ಎಷ್ಟೇ ಒಳ್ಳೆಯವನಾಗಿದ್ದರೂ ಅವನನ್ನು ದ್ವೇಷಿಸುತ್ತಿದ್ದುದೇ ಪದ್ಧತಿಯಾಗಿದ್ದಿತು. ಅವನ ಕೆಲಸಕಾರ್ಯಗಳನ್ನು ಪರೀಕ್ಷಿಸುವಷ್ಟು ಸಹನೆಯು ಅವರಿಗಿರುತ್ತಿರಲಿಲ್ಲ. ಮುಂದಕ್ಕೆ ತಮ್ಮ ವಿರೋಧಿಗಳಾದ ರಿಪಬ್ಲಿಕನರು ಪ್ರಬಲಿಸಿ ತಮಗೆ ಇನ್ನಿಲ್ಲದಷ್ಟು ತೊಂದರೆಕೊಡುವರೆಂದು ಅವರು ನಿಶ್ಚಯಿಸಿದರು. ಒಬ್ಬನನ್ನು ಅಧ್ಯಕ್ಷನನ್ನಾಗಿ ಆರಿಸಿಕೊಂಡ ಮೇಲೆ ಅವನ ಅವಧಿ ಮುಗಿಯುವ ವರೆಗೆ ಅವನನ್ನು ಬದಲಾಯಿಸಲು ಪ್ರಜೆಗಳಿಗಾಗಲೀ ರಾಷ್ಟ್ರಸಭೆ (Congress) ಗಾಗಲೀ ಶಕ್ತಿಯಿಲ್ಲ. ರಾಷ್ಟ್ರಸಭೆಯಲ್ಲಾದರೂ ತಮ್ಮ ಕಡೆಯ ಜನರನ್ನು ಹೆಚ್ಚಿಸಿ ಲಿಂಕನ್ನನು ಮಾಡಬೇಕೆಂದಿದ್ದ ಬದಲಾವಣೆಗೆಲ್ಲಾ ಕಲ್ಲುಹಾಕಬೇಕೆಂದು ಅವರು ನಿಶ್ಚಯಿಸಿಕೊಂಡರು. ಇದಕ್ಕೆ ಮೊದಲೇ ಔತ್ತರೇಯರಿಗೂ, ದಾಕ್ಷಿಣಾತ್ಯರಿಗೂ ಅನೇಕ ವಿಷಯಗಳಲ್ಲಿ ಮನಸ್ತಾಪವುಂಟಾಗಿ ಯಾವನಾದರೊಬ್ಬನ ಬುದ್ಧಿಸಾಮರ್ಥ್ಯದಿಂದ ಗದ್ದಲವು ಅಲ್ಲಲ್ಲಿಯೇ ಅಡಗಿದಂತಿದ್ದರೂ, ಅದು

ಸಂಪೂರ್ಣವಾಗಿ ನಾಶವಾಗದೆ ಅವರ ಹೃದಯದಲ್ಲಿ ಚಿರಸ್ಥಾಯಿಯಾಗಿದ್ದಿತು. ದೂರದರ್ಶಿಗಳಾದ ಲಿಂಕನ್ ಮುಂತಾದವರಿಗೆ ಇದು ತಿಳಿದಿದ್ದಿತು. ಆದುದರಿಂದ ಅಂತಹ ಕೆಲವರು, ಎಲ್ಲರ ಮುಖದಲ್ಲಿಯೂ ತೃಪ್ತಿಯೂ ಸಂತೋಷವೂ ಉಕ್ಕಿ ಹರಿಯುವಂತೆ ಮೇಲೆಮೇಲೆ ತೋರುತ್ತಿದ್ದರೂ ಅದನ್ನು ನಿಜವೆಂದು ನಂಬಿರಲಿಲ್ಲ. ಈ ಸಮಯದಲ್ಲಿ ಇತರ ಗಲಬೆಗಳ ಜೊತೆಗೆ ಈ ಮನಸ್ತಾಪವು ಹೊಗೆಯಾಡಲಾರಂಭವಾಯಿತು. ಸ್ವಾತಂತ್ರ್ಯವಾದಿ ರಾಜ್ಯಗಳೆಲ್ಲವೂ ತಂತಮ್ಮಲ್ಲಿದ್ದ ಅಂತಃಕಲಹಗಳನ್ನೆಲ್ಲಾ ಒತ್ತಟ್ಟಿಗಿಟ್ಟು ಎಷ್ಟು ಕಷ್ಟಬಂದರೂ ತಮ್ಮ ಸಂಸರ್ಗವನ್ನು (Union) ರಕ್ಷಿಸಬೇಕೆಂದಿದ್ದರು. ದೇಶದ ಕ್ಷೇಮವೇ ತಮ್ಮೆಲ್ಲರ ಕ್ಷೇಮವೆಂದು ಅವರು ತಿಳಿದಿದ್ದರು. ದಕ್ಷಿಣದಲ್ಲಿದ್ದ ದಾಸ್ಯವಾದಿಸೀಮೆಗಳಿಗೆ ಮಾತ್ರ ಈ ಅಭಿಪ್ರಾಯವು ಯುಕ್ತವಾಗಿ ತೋರಲಿಲ್ಲ. ಅಭಿಪ್ರಾಯವು ಒಳ್ಳೆಯದಾಗಲೀ, ಕೆಟ್ಟದಾಗಲೀ ಔತ್ತರೇಯರೊಪ್ಪಿದುದನ್ನು ತಾವು ಒಪ್ಪಕೂಡದೆಂಬುದೇ ಅವರ ಹಠ. ಆದುದರಿಂದ ತಮ್ಮತಮ್ಮ ಯೋಗಕ್ಷೇಮವನ್ನು ಮುಂಚೆ ನೋಡಿಕೊಂಡು, ಆಮೇಲೆ, ಸಾಧ್ಯವಾದರೆ, ಸಂಸರ್ಗವನ್ನು ಕಾಪಾಡಲು ಯತ್ನಿಸಬೇಕೆಂದು ಅವರು ವಾದಿಸುತ್ತಬಂದರು. ಇದರಿಂದ ಯಾವುದಾದರೂ ಸಂಸ್ಥಾನಕ್ಕೆ ಸಂಸರ್ಗದ ರಾಜ್ಯಭಾರಕ್ರಮಗಳು ಸರಿದೋರದಿದ್ದರೆ ಅದು ಆ ಸಂಸರ್ಗದಿಂದ ಬೇರೆಯಾಗಿ ತನ್ನ ರಾಜ್ಯಕಾರ್ಯವನ್ನು ಪ್ರತ್ಯೇಕವಾಗಿಯೇ ಏರ್ಪಡಿಸಿಕೊಳ್ಳಬಹುದೆಂದು ಹೇಳಿದಂತಾಯಿತು. ಈ ಸಮಾಚಾರವು ಔತ್ತರೇಯರಿಗೆ ತಿಳಿದರೂ ಅದೆಲ್ಲಾ ಸುಳ್ಳೆಂದು ಯೋಚಿಸಿ, ಸುಮ್ಮನಿದ್ದರು. ಲಿಂಕನ್ನನು ಮಾತ್ರ ಇದನ್ನು ಮೊದಲೇ ತಿಳಿದು, ಸಂಸರ್ಗಕ್ಕೆ ಒದಗಬಹುದಾದ ತೊಂದರೆಗಳನ್ನು ನಿವಾರಿಸಲು ತಕ್ಕ ಉಪಾಯವನ್ನು ಯೋಚಿಸುತ್ತಿದ್ದನು.

೩. ಹೀಗೆ ಲಿಂಕನ್ನನು ಯೋಚಿಸುತ್ತಿರುವಲ್ಲಿ ದಾಕ್ಷಿಣಾತ್ಯರು ಇನ್ನೊಂದು ಹಜ್ಜೆ ಮುಂದಿಟ್ಟರು. ಲಿಂಕನ್ನನು ಅಧ್ಯಕ್ಷನಾದನೆಂಬ ಸಮಾಚಾರವು ತಿಳಿಯುತ್ತಲೇ ಅವರು ಬಹುಕೋಪಗೊಂಡು "ಏನು! ರಿಪಬ್ಲಿಕನ್ ಪಂಗಡದವನು ನಮ್ಮನ್ನಾಳುವುದೆ! ಅದೆಂದಿಗೂ ಆಗಲಾರದು. ಅವನು ಅಧ್ಯಕ್ಷನಾದರೆ ಅವನ ಆಳಿಕೆಯನ್ನು ನಾವು ಒಪ್ಪಲಾರೆವು"

ಎಂದರು. ಇಷ್ಟಕ್ಕೇ ಸುಮ್ಮನಿರದೆ ದಂಗೆಯೇಳುವ ಪ್ರಯತ್ನವನ್ನೂ ಮಾಡಲುದ್ಯುಕ್ತರಾದರು. ಇಷ್ಟುಹೊತ್ತಿಗೆ ಅಧ್ಯಕ್ಷನ ಚುನಾವಣೆ ನಡೆದು ಆರುವಾರಗಳು ಕಳೆದುಹೋದುವು. ಸರ್ಕಾರದ ಕೆಲಸಗಳು ದಿನದಿನಕ್ಕೂ ಕೆಡುತ್ತಿದ್ದುವು. ಹಳೆಯ ಅಧ್ಯಕ್ಷನಾದರೋ, ಹುಡುಗರಾಡುತ್ತಿರುವುದನ್ನು ಮುದುಕರು ಸುಮ್ಮನೆ ಕುಳಿತು ನೋಡುತ್ತಿರುವಂತೆ ಯಾವ ಕೆಲಸಕ್ಕೂ ಕೈಹಾಕದೆ ಕುಳಿತಿದ್ದನು. ಈ ಮಧ್ಯೆ ದಾಸ್ಯಪರರಾದ ದಾಕ್ಷಿಣಾತ್ಯರ ಸಭೆಯೊಂದು ದಕ್ಷಿಣಕ್ಯಾರೋಲೀನ(South Carolina)ದ ಮುಖ್ಯ ಪಟ್ಟಣವಾದ ಚಾರಲ್ಸ್ ಟೌನ್ (Charles Town)ಎಂಬಲ್ಲಿ ನಡೆಯುವುದಾಗಿದ್ದಿತು. ಸಾವಿರಾರು ಮಂದಿ ದಾಕ್ಷಿಣಾತ್ಯರು ತಮ್ಮ ಅಭಿಪ್ರಾಯಗಳನ್ನು ಎಲ್ಲರಿಗೂ ತಿಳಿಸಲು ಅಲ್ಲಿ ಸೇರಿದ್ದರು. ಅಲ್ಲಿ ರಾಜಕೀಯ ವಿಷಯಗಳು ಚರ್ಚೆಯಾಗಿ ಇನ್ನುಮೇಲೆ ಸಂಸರ್ಗದ ಸಂಬಂಧವು ತಮಗೆ ಬೇಡವೆಂದೂ ತಮ್ಮದೇ ಒಂದು ಸರ್ಕಾರವನ್ನೇರ್ಪಡಿಸಿಕೊಳ್ಳುವುದು ಉತ್ತಮವೆಂದೂ ನಿಷ್ಕರ್ಷೆಯಾಯಿತು. ದಾಸ್ಯಪರರಾಜ್ಯಗಳೆಲ್ಲವೂ ಒಂದಾದಮೇಲೊಂದು ಸಂಸರ್ಗದಿಂದ ಬೇರೆಯಾಗಲಾರಂಭಿಸಿದುವು ಈ ಸಭೆಯು ನಡೆದ ಕೆಲವುದಿನಗಳಮೇಲೆ ದಕ್ಷಿಣಕ್ಯಾರೋಲೀನವು, ಇನ್ನುಮೇಲೆ ತಾನು ಸಂಸರ್ಗದಲ್ಲಿರುವುದಿಲ್ಲವೆಂದೂ, ತನ್ನ ರಾಜ್ಯಭಾರ ಕ್ರಮವನ್ನು ತಾನೇ ನಡೆಸಿಕೊಳ್ಳಬಲ್ಲೆನೆಂದೂ, ಹೇಳಿದುದಲ್ಲದೆ ಅಂದಿನಿಂದಲೇ ಸಂಸರ್ಗಪರರಾದ ಸರ್ಕಾರಿಯ ಉದ್ಯೋಗಸ್ಥರನ್ನೆಲ್ಲಾ ಅಲ್ಲಿಂದಟ್ಟಿ ಅವರ ಸ್ಥಳದಲ್ಲಿ ತನ್ನ ಕಡೆಯವರನ್ನೇ ನೇಮಿಸಿಕೊಳ್ಳಲು ಪ್ರಾರಂಭಿಸಿತು. ಈ ಸಮಾಚಾರವು ಅಧ್ಯಕ್ಷನಿಗೆ ತಿಳಿದರೂ ಅವನು ಎಂದಿನಂತೆಯೇ ಸುಮ್ಮನಿದ್ದನು.

೪. ಕ್ಯಾರೋಲೀನದ ಸಮಾಚಾರವು ಔತ್ತರೇಯರಿಗೆ ತಿಳಿದೊಡನೆಯೇ ಎಲ್ಲರಿಗೂ ಭಯಾಶ್ಚರ್ಯಗಳು ತಲೆದೋರಿದುವು. ಬಹುಕಾಲದಿಂದ ನಡೆದುಬಂದಿದ್ದ ಪವಿತ್ರವಾದ ಸಂಸರ್ಗವನ್ನು ಈ ರೀತಿಯಾಗಿ ಹಾಳುಮಾಡಲು ಉದ್ಯುಕ್ತರಾಗಿದ್ದ ದಾಕ್ಷಿಣಾತ್ಯರಮೇಲೆ ಅವರಿಗೆ ಬಹುಕೋಪವು ಬಂದಿತು. ಒಮ್ಮಿಂದೊಮ್ಮೆ ದಕ್ಷಿಣಕ್ಯಾರೋಲೀನವು ಈರೀತಿ ಪ್ರವರ್ತಿಸಿದುದು ಶುದ್ಧ ತಪ್ಪೆಂದೂ ಕೂಡಲೆ ಅಧ್ಯಕ್ಷನು ಸೈನ್ಯವನ್ನು ಕಳುಹಿಸಿ ದಂಗೆಯನ್ನು ಅಣಗಿಸಿ ಆ ಸಂಸ್ಥಾನಕ್ಕೆ ಬುದ್ಧಿಗಲಿಸುವನೆಂದೂ ದಾಸ್ಯ

ವಿರೋಧಿಗಳು ಆಲೋಚಿಸಿದರು. ಎಷ್ಟು ದಿವಸ ನಿರೀಕ್ಷಿಸಿದರೂ ದಾಕ್ಷಿಣಾತ್ಯರ ಪುಂಡನ್ನಡಗಿಸಲು ಪ್ರಯತ್ನವಾವುದೂ ನಡೆಯುವಂತೆ ತೋರಲಿಲ್ಲ. ದಂಗೆಯಾದರೋ ಕಾಡುಗಿಚ್ಚಿನಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಡುತ್ತಿದ್ದಿತು. ಆದುದರಿಂದ ಜನರಿಗೆ ಅಧ್ಯಕ್ಷನ ನಾಲ್ಕು ತಿಂಗಳ ರಾಜ್ಯಭಾರವು ದುಸ್ಸಹವಾಯಿತು. ಕೊನೆಗೆ ಅವನು ಜನರ ಗಲಭೆಯನ್ನೂ ನಿಂದನೆಯನ್ನೂ ತಾಳಲಾರದೆ ಆ ಕೆಲಸದಲ್ಲಿ ತಾನು ಕೈ ಹಾಕುವುದಿಲ್ಲವೆಂದು ಹೇಳಿಬಿಟ್ಟನು. ಇದರಿಂದ ಔತ್ತರೇಯರಿಗೆ ದೊಡ್ಡ ಆಶಾಭಂಗವಾದಂತಾಯಿತು. ಸಣ್ಣ ದಂಗೆಯೊಂದನ್ನು ದೇಶಾಧ್ಯಕ್ಷನ ಕೈಯಿಂದ ನಿಲ್ಲಿಸಲಾಗದಿದ್ದರೆ ಅಂತಹವನೇತಕ್ಕೆ ಕೆಲಸದಲ್ಲಿರಬೇಕೆಂದರು. ಯಾರು ಎಷ್ಟು ದೂಷಣೆಮಾಡಿದರೂ ಅವನು ಆವುದೊಂದನ್ನೂ ಮನಸ್ಸಿಗೆ ಹಚ್ಚಿಕೊಳ್ಳದಿದ್ದನು. ಆ ಅಧ್ಯಕ್ಷನ ಆಲಸ್ಯವನ್ನು ನೋಡಿದರೆ ತನ್ನ ಮುಂದಿನ ಅಧಿಕಾರಿಗೆ ಬೇಕಾದಷ್ಟು ತೊಂದರೆಗಳನ್ನು ಸಂಗ್ರಹಿಸಿಟ್ಟಿರಬೇಕೆಂಬುದೇ ಅವನ ಉದ್ದೇಶವಾಗಿದ್ದಂತೆ ತೋರುತ್ತಿದ್ದಿತು. ದಾಕ್ಷಿಣಾತ್ಯರು ದಿನದಿನಕ್ಕೂ ಮಿತಿಯಿಲ್ಲದ ಸಂತೋಷದಿಂದಿರುತ್ತಿದ್ದರು; ಔತ್ತರೇಯರು ಫಲವಿಲ್ಲದ ಕೋಪದಿಂದ ಕುದಿಯುತ್ತಿದ್ದರು.

೫. ಅಧ್ಯಕ್ಷನು ಜನರಿಗೆ ಕೊಟ್ಟ ಉತ್ತರದಲ್ಲಿ ಲಿಂಕನ್ನಿಗೆ ತಪ್ಪೇನೂ ಕಂಡುಬಾರಲಿಲ್ಲ. ಬದಲಿಯು ಕೆಲಸಮಾಡುತ್ತಿರುವವನಿಗೆ ತನ್ನ ಕೆಲಸದಲ್ಲಿ ಅಷ್ಟು ಶ್ರದ್ಧೆ ಇಲ್ಲದುದು ಸಹಜವೆಂದೂ ಒಂದುವೇಳೆ ಅದೇ ಸ್ಥಿತಿಯಲ್ಲಿ ತಾನಿದ್ದರೂ ಬೇರೆ ಯಾವ ಉತ್ತರವನ್ನೂ ಕೊಡುವಂತಿರಲಿಲ್ಲವೆಂದೂ ಭಾವಿಸಿಕೊಂಡನು. ಆದುದರಿಂದ ತನ್ನ ಹಿಂದಿದ್ದ ಅಧ್ಯಕ್ಷನನ್ನು ದೂಷಿಸದೆ ತಾನು ಕೆಲಸಕ್ಕೆ ಹೋದೊಡನೆಯೇ ಸಂಸರ್ಗಕ್ಕೆ ಬಂದಿದ್ದ ಅಪಾಯವನ್ನು ಸಾಧ್ಯವಾದಷ್ಟು ತ್ವರೆಯಿಂದ ನಿವಾರಿಸಬೇಕೆಂದುಕೊಂಡನು. ಸೈನ್ಯಾಧಿಪತಿಯಾದ ವಿನ್‌ಫೀಲ್ಡ್ ಸ್ಕಾಟ್ (Winfield Scott) ಎಂಬಾತನಿಗೂ ಇದೇ ಅಭಿಪ್ರಾಯವಿದ್ದಿತು. ಲಿಂಕನ್ನನು ತನ್ನ ಕೆಲಸಕ್ಕೆ ಬಂದಮೇಲೆ ಆ ದಂಗೆಯನ್ನು ಕೂಡಲೆ ಅಡಗಿಸಬಲ್ಲನೆಂದು ಅವನು ತಿಳಿದಿದ್ದನು. ತರುಣದಲ್ಲಿಯೇ ದಂಗೆಯನ್ನು ಅಡಗಿಸದಿದ್ದರೆ ಮುಂದೆ ಘೋರವಾದ ಸ್ವರಾಷ್ಟ್ರ ಕಲಹ(Civil War)ವಾಗುವುದೆಂಬ ಸೂಚನೆ

ಯು ಚೆನ್ನಾಗಿ ತೋರುತ್ತಿದ್ದಿತು. ಆದರೆ ಆಡಳಿತವು ಲಿಂಕನ್ನನ ಆಧೀನಕ್ಕೆ ಬರುವವರೆಗೂ ಯಾವ ಕೆಲಸವೂ ನಡೆಯುವಂತಿರಲಿಲ್ಲ. ಇಷ್ಟರಲ್ಲಿಯೇ ಫ್ಲೊರಿಡ(Florida), ಅಲಬಾಮ(Alabama), ಜಾರ್ಜಿಯ (Georgia), ಲೂಸಿಯಾನ (Lusiana), ಟೆಕ್ಸಾಸ್(Texas) ಈ ಸಂಸ್ಥಾನಗಳೆಲ್ಲವೂ ದಕ್ಷಿಣ ಕ್ಯಾರೊಲೀನದ ಉದಾಹರಣೆಯನ್ನೇ ಅನುಸರಿಸಿ ಸಂಸರ್ಗದಿಂದ ಬೇರೆಯಾಗಿ ತಮ್ಮ ತಮ್ಮ ಪ್ರತ್ಯೇಕ ಸರ್ಕಾರಗಳನ್ನು ಏರ್ಪಡಿಸಿಕೊಂಡುದಲ್ಲದೆ ಆ ಏಳು ರಾಜ್ಯಗಳೂ ಒಟ್ಟುಗೂಡಿ ಸಂಸರ್ಗದ ಸರ್ಕಾರಕ್ಕೆ ವಿರೋಧವಾಗಿ ತಮ್ಮದೊಂದು ಬೇರೆ ಸಂಯುಕ್ತಸರ್ಕಾರವನ್ನೇರ್ಪಡಿಸಿಕೊಂಡು ಇದಕ್ಕೆ ಜಫರ್‌ಸನ್ (Jefferson) ಎಂಬೊಬ್ಬ ದಾಸ್ಯಪರನನ್ನು ಅಧ್ಯಕ್ಷನನ್ನಾಗಿಮಾಡಿಕೊಂಡರು. ಲಿಂಕನ್ನನು ಈ ಅವ್ಯವಸ್ಥೆಯನ್ನು ಕಂಡು ಸಹಿಸಲಾರದೆ, ತಾನು ಇದ್ದ ಸ್ಥಳದಿಂದಲೇ—"ಸಂಸ್ಥಾನಗಳಿಗೆ ಸಂಸರ್ಗವನ್ನು ಬಿಟ್ಟುಹೋಗಲು ಯಾವ ಅಧಿಕಾರವೂ ಇಲ್ಲ. ಅವುಗಳ ಅವಿಧೇಯತೆಯನ್ನು ಶಿಕ್ಷಿಸಲು ತಕ್ಕ ಪ್ರಯತ್ನವನ್ನು ಮಾಡಲೇ ಬೇಕು" ಎಂದು ಗರ್ಜಿಸಿದನು. ಆದರೂ, ಜಗಳಗಂಟಿಗರಾದ ದಾಕ್ಷಿಣಾತ್ಯರು ತಾವಾಗಿ ಸಂಸರ್ಗದಿಂದ ಹೊರಟು ಹೋದರೆ ಎಷ್ಟೋ ಒಳ್ಳೆಯದೆಂದು ಅನೇಕರು ತಿಳಿದಿದ್ದರಾದುದರಿಂದ ಈ ಗರ್ಜನೆಯು ಫಲಕಾರಿಯಾಗಲಿಲ್ಲ. ಸಂಸರ್ಗದಲ್ಲಿ ಎಷ್ಟು ಗೊಂದಲವು ಕಡಿಮೆಯಾದರೆ ಅಷ್ಟು ಒಳ್ಳೆಯದೆಂಬುದೇ ಅಂತಹವರ ನಂಬಿಕೆ. ಅಂತಹವರಿಗೆ ಯುದ್ಧವೆಂದರೆ ಬಹು ಭಯ. ದಾಕ್ಷಿಣಾತ್ಯರ ಸಹವಾಸವನ್ನು ಕೋರಿದರೆ ಬೀದಿಯಲ್ಲಿ ಹೋಗುತ್ತಿದ್ದ ಮಾರಿಯನ್ನು ಮನೆಗೆಬಾರೆಂದು ಬಲಾತ್ಕರಿಸಿದಂತಾಗುವುದೆಂದು ಅವರು ತಿಳಿದಿದ್ದರು. ದಾಕ್ಷಿಣಾತ್ಯರು ಯುದ್ಧಕ್ಕೆ ಸಿದ್ಧರಾಗುತ್ತಿದ್ದ ವಿಷಯವನ್ನು ಕೇಳಿ ಅಂತಹ ಭಿನ್ನಾಭಿಪ್ರಾಯದವರಿಗಿದ್ದ ಸ್ವಲ್ಪ ಬಲವೂ ಕರಗಿ ಹೋಯಿತು. ಆದುದರಿಂದ ದಾಕ್ಷಿಣಾತ್ಯರು ಹೋದದಾರಿಗೇ ಅವರನ್ನು ಬಿಟ್ಟುಬಿಡುವುದು ಉತ್ತಮವೆಂದೂ ನಿಷ್ಕಾರಣವಾಗಿ ಯುದ್ಧದಲ್ಲಿ ಪ್ರವೇಶಿಸುವುದರಿಂದ ಬಹು ಅನರ್ಥಗಳುಂಟಾಗುವುವೆಂದೂ ಅವರು ವಾದಿಸಿದರು.

೬. ಹೀಗೆ ಔತ್ತರೇಯರು ಅಲಸರಾಗಿರಲು ದಾಕ್ಷಿಣಾತ್ಯರಾದರೋ ಬಗೆಬಗೆಯ ಅಸ್ತ್ರ, ಶಸ್ತ್ರಗಳನ್ನು ಸಿದ್ಧಪಡಿಸಿಕೊಂಡು ಆಯುಧಾ

ಗಾರಗಳಲ್ಲಿ ತುಂಬುತ್ತಿದ್ದರು. ಔತ್ತರೇಯರು ಸುಮ್ಮನಿರುವುದನ್ನು ನೋಡಿ ಸಂಸರ್ಗದ ಧ್ವಜಪಟಗಳನ್ನೆಲ್ಲಾ ಕಿತ್ತುಹಾಕಿ ಅವುಗಳ ಸ್ಥಾನದಲ್ಲಿ ತಮ್ಮ ಹೊಸ ಧ್ವಜಗಳನ್ನು ನಡುತ್ತ ಬಂದರು. ಆದರೂ ದೇಶಾಧ್ಯಕ್ಷನು ಎಂದಿನಂತೆಯೇ ಸುಮ್ಮನಿದ್ದನು. ಕೋಶಾಧಿಕಾರಿಗೆ ಮಾತ್ರ ಈ ಅತ್ಯಾಚಾರಗಳನ್ನು ಸಹಿಸಲಾಗಲಿಲ್ಲ. ಆದುದರಿಂದ ಅವನು ಕೂಡಲೆ ದೇಶದ ಧ್ವಜಗಳನ್ನು ಕಾದುಕೊಳ್ಳುವುದಕ್ಕಾಗಿ ಕೆಲವು ಸಿಪಾಯಿಗಳನ್ನು ನಿಯಮಿಸಿ, ಯಾರಾದರೂ ಸಂಸರ್ಗದ ಧ್ವಜದ ಗೋಜಿಗೆ ಬಂದರೆ, ಕೊಂಚವೂ ಹಿಂದೆಗೆಯದೆ ಅಂತಹವರನ್ನು ಕೊಲ್ಲಬೇಕೆಂದು ಅಪ್ಪಣೆಮಾಡಿದನು.

೭. ೧೮೬೧ ನೆಯ ಫೆಬ್ರುವರಿ ೧೧ ನೆಯ ತಾರೀಖಿನ ದಿನ ಲಿಂಕನ್ನನು ಸ್ಪ್ರಿಂಗ್‌ಫೀಲ್ಡ್ನಿಂದ ವಾಷಿಂಗ್ಟನ್ ಪಟ್ಟಣಕ್ಕೆ ಹೊರಟನು. ಲಿಂಕನ್ನನು ಪ್ರಯಾಣಕ್ಕೆ ಮೊದಲು ತನ್ನ ತಾಯಿಯ ಬಳಿಗೆ ಹೋಗಿ ನಮಸ್ಕರಿಸಿ, ಆಕೆಯ ಆಶೀರ್ವಾದವನ್ನು ಕೇಳಲು, ಆಕೆಯು ಆನಂದಾಶ್ರುವನ್ನು ಅವಿರಳವಾಗಿ ಸುರಿಸುತ್ತಾ ಗದ್ಗದಧ್ವನಿಯಿಂದ—"ಅಪ್ಪಾ, ಲಿಂಕನ್! ಚಿರಂಜೀವಿಯಾಗಿರು. ನಿನಗೆ ದೊಡ್ಡ ಉದ್ಯೋಗವಾಗಿರುವುದರಿಂದ ನನಗೆ ಬಹು ಸಂತೋಷವಾಗಿರುವುದಾದರೂ ನಿನ್ನ ಪ್ರಾಣಕ್ಕೆಲ್ಲಿ ಅಪಾಯವು ಸಂಭವಿಸುವುದೋ ಎಂಬ ಭಯವೂ ಉಂಟಾಗಿರುವುದು. ಏಕೆಂದರೆ ಅಂತಹ ದೊಡ್ಡ ಪದವಿಗಳು ಅಪಾಯಮಯವಾಗಿರುವುವು. ನೀನು ಮಾತ್ರ ಬಹು ಎಚ್ಚರಿಕೆಯಾಗಿರಬೇಕು. ಮುದುಕಿಯಾದ ನನ್ನ ಮಾತನ್ನು ಮನ್ನಿಸು. ಸುಖವಾಗಿ ಹೋಗಿಬಾರಪ್ಪಾ!" ಎಂದು ಕಳುಹಿಸಿಕೊಟ್ಟಳು. ಲಿಂಕನ್ನಿಗಾದರೋ ತಾಯಿಗೆ ನಮಸ್ಕರಿಸುತ್ತಲೇ ಬಹಳ ದುಃಖವು ಉಕ್ಕಿಬಂದಿತು. ಅವನು ಅದನ್ನು ಪ್ರಯಾಸದಿಂದ ತಡೆದುಕೊಂಡು ಪಯಣಬೆಳೆಸಿದನು. ಲಿಂಕನ್ನನು ದಾರಿಯಲ್ಲಿ ಕೊಲಂಬಸ್ (Columbus) ಮುಂತಾದ ಕೆಲವು ಪ್ರದೇಶಗಳನ್ನೆಲ್ಲಾ ನೋಡಿಕೊಂಡು ಅಲ್ಲಿಯ ಪ್ರಮುಖರ ಪರಿಚಯವನ್ನು ಮೊದಲೇ ಮಾಡಿಕೊಂಡಿದ್ದರೆ ಮುಂದೆ ತನ್ನ ಕೆಲಸವು ಹಗುರವಾದೀತೆಂದು ಯೋಚಿಸಿದನು. ಅವನು ರೈಲ್ವೆ ಸ್ಟೇಷನ್ನಿಗೆ ಹೋಗುವ ದಾರಿಯುದ್ದಕ್ಕೂ ಅವನನ್ನು ನೋಡಲು ಜನರು ಬಹುಕುತೂಹಲದಿಂದ ಬಂದು ಕಾದಿದ್ದು ನೋಡಿ ಸಂತೋಷಿಸಿದರು. ಅಲ್ಲ

ಲ್ಲಿ ಕೆಲವರು ಪ್ರಮುಖರು ಲಿಂಕನ್ನಿನ ಗಾಡಿಯನ್ನು ನಿಲ್ಲಿಸುವಂತೆ ಹೇಳಿ ಅವನಿಗೆ ಫಲಪುಷ್ಪಗಳನ್ನೊಪ್ಪಿಸಿ ಜಯಸೂಚಕಧ್ವನಿಯನ್ನು ಮಾಡಿ ಮುಂದಕ್ಕೆ ಕಳುಹಿಸಿಕೊಟ್ಟರು. ಲಿಂಕನ್ನನು ಅವರ ಸತ್ಕಾರಗಳನ್ನು ಆದರಪೂರ್ವಕವಾಗಿ ಸ್ವೀಕರಿಸಿ ಎಂದಿನಂತೆಯೇ ಎಲ್ಲರನ್ನೂ ಪ್ರೀತಿಯಿಂದ ಮಾತನಾಡಿಸಿ ಮುಂದೆ ಹೊರಟನು.

೮. ದಾರಿಯಲ್ಲಿ ಪ್ರತಿಯೊಂದು ರೈಲ್ವೆ ಸ್ಟೇಷನ್ನಿನಲ್ಲಿಯೂ ಜನರು ಕಿಕ್ಕಿರಿಯುವಂತೆ ತುಂಬಿದ್ದರು. ಅವುಗಳಲ್ಲಿ ನಜರು ಮುಜರೆಗಳು ನಡೆದುವು. ಹೀಗೆ ಫಿಲಡೆಲ್ಫಿಯಾ(Philadelphia)ದವರೆಗೂ ಪ್ರಯಾಣವು ಸುಸೂತ್ರವಾಗಿ ಸಾಗಿತು. ಅಲ್ಲಿಗೆ ಸೇರುವಹೊತ್ತಿಗೆ ಮುಂದೆ ಬಾಲ್ಟಿಮೋರಿನಲ್ಲಿ (Baltimore)ಅವನನ್ನು ಕೊಲೆಮಾಡಲು ಪ್ರಯತ್ನಗಳು ನಡೆಯುತ್ತಿದ್ದುವೆಂಬ ಸಮಾಚಾರವು ತಿಳಿಯಿತು. ಆಗ ತನ್ನ ತಾಯಿಯ ಭಯಕ್ಕೆ ಆಧಾರವಿದ್ದಿತೆಂದು ಅವನಿಗೆ ವ್ಯಕ್ತವಾಯಿತು. ಆದುದರಿಂದ ತಾನು ಮೊದಲು ಹೋಗಬೇಕೆಂದಿದ್ದ ದಾರಿಯನ್ನು ಬಿಟ್ಟು ಬೇರೆದಾರಿಯಿಂದ ವಾಷಿಂಗ್ಟನ್ ಪಟ್ಟಣವನ್ನು ಸೇರಿ ತನ್ನ ವಾಸಸ್ಥಾನವಾದ ಶ್ವೇತಗೃಹವನ್ನು ಪ್ರವೇಶಿಸಿದನು. ಆ ಮನೆಯ ಸೌಂದರ್ಯವನ್ನು ನೋಡಿ ಬೆರಗಾಗಿ ತನ್ನ ಟೋಪಿಯನ್ನು ತಗುಲಹಾಕಲು ಗೂಟಕ್ಕಾಗಿ ಅತ್ತಿತ್ತನೋಡಿ ಕಾಣದೆ ಸುಮ್ಮನೆ ನಿಂತಿರಲು ಅಲ್ಲಿದ್ದ ಜನರಗುಂಪಿನಿಂದ ಡಗ್ಲಸನು ಮುಂದೆ ಬಂದು "ನಾನು ದೇಶಾಧ್ಯಕ್ಷನಾಗದೆ ಹೋದರೂ, ದೇಶಾಧ್ಯಕ್ಷನಿಗೆ ಅಪ್ಪ ಸೇವೆಯನ್ನು ಮಾಡಬಲ್ಲೆನು" ಎಂದು ಹೇಳಿ ಲಿಂಕನ್ನಿನ ಟೋಪಿಯನ್ನು ತೆಗೆದುಕೊಂಡನು. ದೃಢಮೈತ್ರಿಗೆ ಇದಕ್ಕಿಂತಲೂ ನಿದರ್ಶನವಿರುವುದೆ?

೯. ಲಿಂಕನ್ನನು ಅಧ್ಯಕ್ಷನಾದ ಒಡನೆಯೇ ತನ್ನ ಪ್ರಥಮೋಪನ್ಯಾಸವನ್ನು ಮಾಡಿ ಆಗ ಒದಗಿದ್ದ ಅವ್ಯವಸ್ಥೆಗಳನ್ನು ನಿವಾರಣೆಮಾಡಿ ಬಹುಕಾಲದಿಂದ ಕಾಪಾಡಿಕೊಂಡು ಬಂದಿದ್ದ ಸಂಸರ್ಗವನ್ನು ಅಚ್ಛಿನ್ನವಾಗಿ ಉಳಿಯುವಂತೆ ನಿಲ್ಲಿಸುವುದಾಗಿಯೂ ದಾಕ್ಷಿಣಾತ್ಯರು ಯಾವುದೋ ಒಂದು ಉದ್ದೇಶದಿಂದ ಬೇರ್ಪಡಲು ಯತ್ನಿಸುತ್ತಿದ್ದರೂ ಅವರೆಂದಿಗೂ ತಮ್ಮ ಶತ್ರುಗಳಲ್ಲವೆಂದೂ ತಿಳಿಸಿದನು. ಇದರಿಂದ ಅನೇಕರಿಗೆ ಸಂತೋಷವಾಯಿತಾದರೂ ಕೆಲವರಿಗೆ ಮಾತ್ರ ಬಹು ಅಸಮಾಧಾನವಾಯಿತು.

# ಹದಿನಾಲ್ಕನೆಯ ಪ್ರಕರಣ.

## ಕಷ್ಟಕಾಲ.

೧. ಏಬ್ರಹಾಮ್ ಲಿಂಕನ್ನನು ದೇಶಾಧ್ಯಕ್ಷನಾಗಿದ್ದುದರಿಂದ ಸಾಧಾರಣವಾಗಿ ಉತ್ತರೇಯರಿಗೆಲ್ಲರಿಗೂ ಸಮಾಧಾನವಾಗಿದ್ದಿತು. ಆದರೂ ಆ ವಾಷಿಂಗ್ಟನ್ ಪಟ್ಟಣದಲ್ಲಿಯೇ ಅವನಿಗೆ ಅನೇಕ ಶತ್ರುಗಳಿದ್ದರು. ಅವರು ಗೋಮುಖವ್ಯಾಘ್ರಗಳಂತೆ ಲಿಂಕನ್ನಿಗೆ ಪರಮಸ್ನೇಹಿತರೆಂದು ತೋರ್ಪಡಿಸಿಕೊಳ್ಳುತ್ತಿದ್ದರೂ ಗುಪ್ತವಾದ ಸಂಚುಗಳನ್ನು ನಡೆಯಿಸುತ್ತ ಸಾಧ್ಯವಾದಾಗ ಲಿಂಕನ್ನನ್ನು ತೀರಿಸಿಬಿಡಬೇಕೆಂದು ಯತ್ನಿಸುತ್ತಿದ್ದರು. ನಿಷ್ಕಪಟಿಯಾದ ಏಬ್ರಹಾಮನಾದರೋ ಇವರೆಲ್ಲಾ ತನ್ನ ಆಪ್ತಸ್ನೇಹಿತರೆಂದೇ ನಂಬಿದ್ದನು. ಆದರೂ ಅವನು ಯಾರಿಗೂ ಹೆಚ್ಚು ಸಲಿಗೆಯನ್ನು ಕೊಟ್ಟಿರಲಿಲ್ಲ. ಅವನ ನಿಜವಾದ ಸ್ನೇಹಿತರಲ್ಲಿ ಕೆಲವರು ಮಾತ್ರ ಅವನ ಬಳಿಯಲ್ಲಿಯೇ ಇದ್ದುಕೊಂಡು ಅವನಿಗುಂಟಾಗಬಹುದಾದ ಅಪಾಯವನ್ನು ತಿಳಿಯಹೇಳಿದಾಗ, ಏಬ್ರಹಾಮನು ಅವುಗಳಲ್ಲೊಂದನ್ನೂ ನಂಬದೆ ಅವರನ್ನು ಹಾಸ್ಯಮಾಡಿ ಕಳುಹಿಸುತ್ತಿದ್ದನು. ಅವನ ಹಿತಚಿಂತಕರಲ್ಲಿ ಕೆಲವರು ಅವನ ಮೈಗಾವಲಿಗೆ ಕೆಲವು ಯೋಧರನ್ನು ನಿಯಮಿಸಬೇಕೆಂದು ಯತ್ನಿಸುತ್ತಿರುವಲ್ಲಿ ಲಿಂಕನ್ನನಿಗೆ ಆ ಸಮಾಚಾರವು ತಿಳಿದು ಅವನು ಅವರನ್ನು ಕರೆಸಿಕೊಂಡು ಅವರ ಭಯಕ್ಕೇನೂ ಕಾರಣವಿಲ್ಲವೆಂದು ಸಮಾಧಾನಮಾಡಿ ಕಳುಹಿಸಿದನು. ಆದರೂ ಅವರು ಪಕ್ಕ ಬಿಡದೆ ಅವನಿಗೆ ಅಪಾಯವು ತಟ್ಟದಂತೆ ನೋಡಿಕೊಳ್ಳುತ್ತಲೇ ಇದ್ದರು.

೨. ದೇಶಾಧ್ಯಕ್ಷನ ಪದವಿಯನ್ನು ಸ್ವೀಕರಿಸಿದೊಡನೆಯೇ ಲಿಂಕನ್ನಿಗೆ ಕಷ್ಟಗಳು ಪರಂಪರೆಯಾಗಿ ಬರಲಾರಂಭಿಸಿದುವು. ದಾಕ್ಷಿಣಾತ್ಯರ ಹಾವಳಿಯು ಒಂದೂರಿನಿಂದ ಇನ್ನೊಂದು ಊರಿಗೆ ಹರಡುತ್ತಿದ್ದಿತು. ಲಿಂಕನ್ನನು ವಿದ್ಯಾವಿಹೀನನೆಂದೂ ಮಾನಮರ್ಯಾದೆಯನ್ನರಿಯದವನೆಂದೂ, ಹೇಡಿಯೆಂದೂ ನಾನಾ ಬಗೆಯಾಗಿ ತಿರಸ್ಕರಿಸುತ್ತ ಲಿಂಕನ್ನಿನಂತಹ ಹಳ್ಳಿಗಾಡಿನವನು ಸಂಸರ್ಗದ ಅಧ್ಯಕ್ಷನಾಗಲು ತಾವು ಕಾದುವುದಕ್ಕೆ ಏನೂ ಹಿಂದೆಗೆಯಬೇಕಾದುದಿಲ್ಲವೆಂದೂ, ಸುಲಭವಾಗಿ ಉತ್ತರದಲ್ಲಿದ್ದ ಸ್ವಾತಂತ್ರ್ಯವಾದಿ

ರಾಜ್ಯಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಅಲ್ಲಿಯೂ ದಾಸ್ಯವನ್ನು ಹೆಚ್ಚಿಸಬಹುದೆಂದೂ ಅವರು ತಿಳಿದಿದ್ದರು. ನೋಡುವುದಕ್ಕೆ ಲಿಂಕನ್ನನು ಒರಟನಾಗಿದ್ದರೂ ಅವನ ಬುದ್ಧಿಯೂ ಹಾಗೆಯೇ ಇರಬಹುದೆಂದು ಅವರು ಗ್ರಹಿಸಿದ್ದರು. ಆಕಳು ಕಪ್ಪಾದರೆ ಹಾಲು ಕಪ್ಪೆ ? ಅಷ್ಟಕ್ಕೆ ಸುಮ್ಮನಿರದೆ ತಾವು ಔತ್ತರೇಯರಮೇಲೆ ದಂಡೆತ್ತಿಬಂದು ಅವರುಗಳನ್ನೆಲ್ಲಾ ಸುಟ್ಟು ಕೈಗೆ ಸಿಕ್ಕಿದವರನ್ನೆಲ್ಲಾ ಕೊಂದು ಕಳೆದುಳಿದವರನ್ನು ಗುಲಾಮರನ್ನಾಗಿ ಮಾಡುತ್ತೇವೆಂದು ದಾಕ್ಷಿಣಾತ್ಯರು ಹೆದರಿಸಲಾರಂಭಿಸಿದರು. ಇದೆಲ್ಲವೂ ಬರಿಯಬಾಯಬೆದರಿಕೆಯಾಗಿದ್ದಿತೇ ಹೊರತು ವಾಸ್ತವವಾಗಿ ದಂಡೆತ್ತಿಬರಲು ಅವರಿಗೆ ಇಷ್ಟವಿರಲಿಲ್ಲ. ಹೀಗೆ ಹೆದರಿಸಿದರೆ ಔತ್ತರೇಯರು ಭಯಪಡುವರೆಂದು ಅವರು ತಿಳಿದಿದ್ದರು. ಅದರಂತೆಯೇ ಅನೇಕ ಔತ್ತರೇಯರು ಅದೆಲ್ಲವೂ ನಿಜವಿರಬಹುದೆಂದು ನಂಬಿ ನಡುಗುತ್ತಿದ್ದರು. ಆದರೆ ಇನ್ನು ಕೆಲವರು ಗೊಡ್ಡುಬೆದರಿಕೆಗೆ ಅಂಜದೆ ಅವರ ಶತ್ರುಗಳ ಸನ್ನಾಹವನ್ನು ನೋಡುತ್ತಿದ್ದರು. ಇಷ್ಟಾದರೂ ಔತ್ತರೇಯರು ಬಂದು ಸೈನ್ಯವನ್ನು ಕೂಡಿಸಲು ಯತ್ನಿಸಲಿಲ್ಲವಾದುದರಿಂದ ಅವರ ನಡತೆಯನ್ನು ನೋಡಿ ದಾಕ್ಷಿಣಾತ್ಯರಿಗೆ ಮತ್ತೂ ಧೈರ್ಯವಾಗಿ ಅವರು ಮಕ್ಕಳನ್ನು ಹೆದರಿಸುವಂತೆ ಮತ್ತೆಮತ್ತೆ ಹೆದರಿಸಲು ಯತ್ನಿಸುತ್ತಿದ್ದರು.

೩. ಲಿಂಕನ್ನನು ದಾಕ್ಷಿಣಾತ್ಯರ ಸ್ಥಿತಿಗತಿಗಳನ್ನು ಎಚ್ಚರದಿಂದ ಪರೀಕ್ಷಿಸುತ್ತ ಕೆಲವುದಿನಗಳು ಸುಮ್ಮನಿದ್ದುದರಿಂದ ತನ್ನ ಹಿಂದಿನವನಂತೆಯೇ ಅವನೂ ಕಾಲವನ್ನು ಕಳೆಯುತ್ತಿದ್ದನೆಂದು ಕೆಲವರು ಊಹಿಸಿದರು. ಆದರೆ ಇಂತಹ ನಿರಾಧಾರವಾದ ಊಹೆಗಳನ್ನು ಲಿಂಕನ್ನಿನಂತಹ ಕೆಚ್ಚೆದೆಗಾರನು ಲಕ್ಷ್ಯಮಾಡುವನೆ? ಆಗ ಸಂಸರ್ಗಕ್ಕೆ ಒದಗಿದ್ದ ದುಸ್ಸ್ಥಿತಿಯನ್ನೆಲ್ಲಾ ಚೆನ್ನಾಗಿ ಪರಿಶೋಧಿಸಿ ದಾಕ್ಷಿಣಾತ್ಯರ ಹಾವಳಿಯನ್ನು ನಿರ್ಮೂಲಿಸಬೇಕೆಂದು ಅವನು ಬಹಳವಾಗಿ ಯೋಚಿಸುತ್ತಿದ್ದನು. ದಂಡೋಪಾಯಕ್ಕಿಂತಲೂ ಸಾಮೋಪಾಯವೇ ಲೇಸೆಂದು ತಿಳಿದಿದ್ದ ಎರಡು ಪಂಗಡಗಳಿಗೂ ನಷ್ಟಕರವಾದ ಯುದ್ಧವನ್ನು ಪ್ರಾರಂಭಿಸಲು ಲಿಂಕನ್ನಿಗೆ ಇಷ್ಟವಿರಲಿಲ್ಲ.

ಬಾಲಕನಾಗಿರುವಾಗ ಒಂದು ಪಕ್ಷಿಗೆ ನೋವನ್ನುಂಟುಮಾಡಲು ಹಿಂದೆಗೆದು, ಆಹಾರವಿಲ್ಲದಿರಲು ತಾನುಉಪವಾಸಮಾಡುವವನಾಗಿದ್ದ ಲಿಂಕನ್ನನು

ಸಾವಿರಾರು ಜನರು ಮಡಿಯುವ ಈ ಯುದ್ಧಕ್ಕೆ ಒಮ್ಮಿಂದೊಮ್ಮೆ ಹೇಗೆ ಸಮ್ಮತಿಸುವನು? ಆದುದರಿಂದ ಎರಡು ಪಂಗಡಗಳಿಗೂ ಸಂಧಿಮಾಡಬಹುದಾದ ಮಾರ್ಗವಾವುದಾದರೂ ಇರುವುದೋ ಎಂದು ಅವನು ಯೋಚಿಸುತ್ತಿದ್ದನು.

೪. ದಾಕ್ಷಿಣಾತ್ಯರಾದರೋ, ಏನೋ ಒಂದು ಆವೇಶಬಂದವರಂತೆ ಯುದ್ಧಕ್ಕೆ ಕಾಲುಕೆರೆದುಕೊಂಡು ನಿಂತಿದ್ದರು. ಇದನ್ನು ನೋಡಿ ಲಿಂಕನ್ನನು ಅವರ ಮೌಢ್ಯಕ್ಕೆ ಕನಿಕರಪಟ್ಟುಕೊಂಡು ಅವರಿಗೆ ಯುದ್ಧದ ಅನಾಹುತಗಳು ತಿಳಿಯುವೆಂದೂ ತಿಳಿದೊಡನೆಯೇ ಅವರು ಸುಮ್ಮನಾಗುವರೆಂದೂ ತಿಳಿದಿದ್ದನು. ದಾಕ್ಷಿಣಾತ್ಯರಾದರೋ ಯುದ್ಧದಮಾತನ್ನು ಬಿಟ್ಟು ಬೇರೆ ಪ್ರಸಂಗವನ್ನು ಎತ್ತರು. ಇನ್ನೂ ಔತ್ತರೇಯರು ಯುದ್ಧಕ್ಕಾಗಿ ಯಾವ ಏರ್ಪಾಡನ್ನೂ ಮಾಡಿರಲಿಲ್ಲ. ಯುದ್ಧಸಿದ್ಧತೆಗೆ ಪ್ರಾರಂಭಿಸಿದರೆ ಅದನ್ನು ನೋಡಿಯಾದರೂ ದಾಕ್ಷಿಣಾತ್ಯರು ದಾರಿಗೆ ಬರುವರೆಂದು ತಿಳಿದು ಲಿಂಕನ್ನನು ಯುದ್ಧಸಾಮಗ್ರಿಗಳನ್ನು ಸಂಗ್ರಹಿಸಲು ಆರಂಭಮಾಡಿದನು. ಆದರೂ ಔತ್ತರೇಯರೇ ಮೊದಲು ಯುದ್ಧವನ್ನು ಪ್ರಾರಂಭಿಸಬಾರದೆಂದೂ, ದಾಕ್ಷಿಣಾತ್ಯರು ತಮ್ಮಮೇಲೆ ಬಿದ್ದಾಗ ಮಾತ್ರ ಆತ್ಮಸಂರಕ್ಷಣೆಗೋಸುಗ ಕಾದಾಡಬಹುದೆಂದೂ ಲಿಂಕನ್ನನು ತನ್ನ ಕಡೆಯವರಿಗೆ ತಿಳಿಸಿದ್ದನು.

೫. ಲಿಂಕನ್ನನು ದೇಶಾಧ್ಯಕ್ಷನಾಗಿ ಶ್ವೇತಗೃಹ (White House) ವನ್ನಲಂಕರಿಸಿದಕೂಡಲೆ ದಾಕ್ಷಿಣಾತ್ಯರು ತಮ್ಮ ಸರಕಾರದ ಪರವಾಗಿ ರಾಜಕಾರ್ಯವನ್ನು ಮಾತನಾಡಿಕೊಂಡು ಬರಲು ಇಬ್ಬರು ರಾಯಭಾರಿಗಳನ್ನು ಕಳುಹಿಸಿದರು. ತಾನವರನ್ನುಕಂಡು ಮಾತನಾಡಿದರೆ ಅವರ ಸರಕಾರವನ್ನು ತಾನೊಪ್ಪಿಕೊಂಡಂತಾಗುತ್ತದೆಂದರಿತು ಆ ಇಬ್ಬರನ್ನೂ ನೋಡದೆಯೇ ಕಳುಹಿಸಿಬಿಟ್ಟನು. ಅವರು ಹೋಗುವಾಗ ಇತರರ ಮೂಲಕವಾಗಿ "ಇನ್ನುಮೇಲೆ ಲಿಂಕನ್ನಿನಲ್ಲಿ ನಿಮ್ಮ ಆಟಗಳಾವುವೂ ನಡೆಯುವುದಿಲ್ಲ. ಯುದ್ಧವಾರಂಭವಾಗುವುದಕ್ಕೆ ಮುಂಚೆ ನೀವು ನಿಮ್ಮ ತಪ್ಪನ್ನೊಪ್ಪಿಕೊಂಡು ಕ್ಷಮೆಯನ್ನು ಬೇಡಿಕೊಂಡರೆ ಸರಿ; ಇಲ್ಲದಿದ್ದರೆ ಆಮೇಲೆ ನಿಮ್ಮ ಮೂರ್ಖತೆಗೆ ತಕ್ಕ ಫಲವನ್ನು ಅನುಭವಿಸಬೇಕಾದೀತು" ಎಂದು ಹೇಳಿ ಕಳುಹಿಸಿದನು. ಶತ್ರುಗಳ ಮಧ್ಯದಲ್ಲಿದ್ದುದರಿಂದ ಆ ರಾಯಭಾರಿಗಳಿಗೆ ಪ್ರಾಣಭಯವು ಹೆಚ್ಚಾಗಿದ್ದಿತು. ಔತ್ತರೇಯರಲ್ಲಿ ಕೆಲವರು ಅವರನ್ನು

ಹಿಂದಕ್ಕೆ ಕಳುಹಬಾರದೆಂಬ ಅಭಿಪ್ರಾಯವುಳ್ಳವರಾಗಿದ್ದರು. ಲಿಂಕನ್ನ ನಾದರೋ ಆ ರಾಯಭಾರಿಗಳಿಗೆ ಆವ ತೊಂದರೆಯೂ ಉಂಟಾಗದಂತೆ ನೋಡಿ ಕೊಳ್ಳಬೇಕೆಂದು ತನ್ನ ಜನಗಳಿಗೆ ತಿಳಿಸಿದ್ದನು.

೬. ದಾಕ್ಷಿಣಾತ್ಯರಿಗೆ ಲಿಂಕನ್ನಿನ ಉತ್ತರವು ತಿಳಿಯುತ್ತಲೇ ಅವರ ಕೋಪವಿಸ್ಮಯಗಳಿಗೆ ಮಿತಿಯಿಲ್ಲದೆಹೋಯಿತು. ಸಾಮಾನ್ಯನಾದ ಹಳ್ಳಿ ಗಾಡಿನವನಿಗೇ ಅಷ್ಟು ಧೈರ್ಯವಿರುವಾಗ ತಾವಿನ್ನು ಸುಮ್ಮನಿರಬಾರದೆಂದು ರೇಗಿ ಅವರು ಯುದ್ಧವನ್ನಾರಂಭಿಸಿದರು. ದಾಕ್ಷಿಣಾತ್ಯರು ಹತ್ತಿರಿದ್ದ ದುರ್ಗ ಗಳನ್ನೆಲ್ಲಾ ಮೊದಲು ಸ್ವಾಧೀನಪಡಿಸಿಕೊಳ್ಳಬೇಕೆಂದು ಯೋಚಿಸಿ ಮೊ ದಲು ಸಂಟರ್ (Sumter) ಕೋಟೆಯಮೇಲೆ ಬಿದ್ದರು. ಆ ಕೋಟೆಯು ಬಹು ಬಲವಾಗಿದ್ದುದರಿಂದ ಅದನ್ನು ಸ್ವೈವಶಮಾಡಿಕೊಳ್ಳುವುದು ಸುಲಭವಾ ಗಿರಲಿಲ್ಲ. ಶತ್ರುಗಳು ಕೋಟೆಯ ಬಳಿಗೆ ನಿಂತು ಇದಿರಿಸುತ್ತಿದ್ದರೇ ಹೊ ರತು ಹೊರಕ್ಕೆ ಬರುತ್ತಿರಲಿಲ್ಲ. ಆದುದರಿಂದ ನಾಲ್ಕು ಕಡೆಯಲ್ಲಿಯೂ ಮುತ್ತಿಕೊಂಡು ಒಳಗಿನವರಿಗೆ ಹೊರಗಿನ ಸಮಾಚಾರಗಳಾಗಲೀ ಆಹಾರ ಸಾಮಗ್ರಿಗಳಾಗಲೀ ಮತ್ತೆ ಬೇರೆ ಯಾವ ವಿಧವಾದ ಸಹಾಯವಾಗಲೀ ಬಾರ ದಂತೆ ತಡೆಯುವುದೇ ಉತ್ತಮೋಪಾಯವೆಂದು ತಿಳಿದು, ಕೋಟೆಯಸುತ್ತಲೂ ಕಂದಕಗಳನ್ನು ತೋಡಿಕೊಂಡು ಕಾವಲಿದ್ದರು.

೭. ಸಂಸರ್ಗದ ಕಡೆಯವನಾದ ಸೇನಾಧಿಪತಿ ಆಂಡರ್ಸನ್ (Anderson) ಎಂಬವನು ಕೋಟೆಯೊಳಗಡೆ ಇದ್ದನು ಅವನ ಕೈಕೆಳಗೆ ಸ್ವಲ್ಪಮಂದಿ ಮಾತ್ರ ಸೈನಿಕರಿದ್ದರು. ಇದಲ್ಲದೆ ದುರ್ಗದಲ್ಲಿ ಆಹಾರ ಸಾಮಗ್ರಿಗಳೂ ಮುಗಿದುಹೋಗುತ್ತಿದ್ದುವು. ಆದುದರಿಂದ ಅವನು ಕಡೆಯಪಕ್ಷ ೨೦೦೦೦ ಸೈನಿಕರನ್ನೂ ಒಂದು ದೊಡ್ಡ ನೌಕಾಸೈನ್ಯವನ್ನೂ ಒದ ಗಿಸದಿದ್ದರೆ ಆ ಕೋಟೆಯನ್ನು ರಕ್ಷಿಸುವುದಕ್ಕಾಗುವುದಿಲ್ಲವೆಂದು ಲಿಂಕನ್ನಿಗೆ ಕಾಗದಬರೆದನು. ಲಿಂಕನ್ನನು ಅಧಿಕಾರಕ್ಕೆ ಬಂದು ಇನ್ನೂ ಒಂದು ತಿಂಗ ಳುಕೂಡಾ ಆಗಿರಲಿಲ್ಲ. ಅವನಿಗಿನ್ನೂ ಅನೇಕರ ಪರಿಚಯವೇ ಇರಲಿಲ್ಲ. ಆದುದರಿಂದ ಲಿಂಕನ್ನನು ವಯೋವೃದ್ಧನೂ ಲೋಕಾನುಭವವುಳ್ಳವನೂ ಆದ ಸೇನಾಧಿಪತಿಯಾದ ಸ್ಕಾಟನ ಬುದ್ಧಿವಾದವನ್ನು ಕೇಳಿದನು. ಆ ವೃದ್ಧಸೇ ನಾಪತಿಯು "ಅಧ್ಯಕ್ಷರೆ! ಈ ಸಮಯದಲ್ಲಿ ಅಷ್ಟೊಂದು ಸೈನ್ಯವನ್ನು ಕೂ

ಡಿಸುವುದು ಸಾಧ್ಯವಲ್ಲ. ಆಹಾರಸಾಮಗ್ರಿಗಳನ್ನು ಒದಗಿಸುವುದಕ್ಕೂ ನಾನಾತೊಂದರೆಗಳವೆ. ಆದುದರಿಂದ ತತ್ಕಾಲಕ್ಕೆ, ಕೋಟೆಯನ್ನು ರಕ್ಷಿಸದೆ ಅದನ್ನು ಬಿಟ್ಟು ಹೊರಟುಬರುವಂತೆ ಆಂಡರ್‌ಸನ್ನಿಗೆ ತಿಳಿಸುವುದು ಉತ್ತಮವೆಂದು ತೋರುತ್ತದೆ" ಎಂದನು. ಲಿಂಕನ್ನಿಗೂ ಅವನ ಮಂತ್ರಿಗಳಿಗೂ ಈ ಮಾತು ಯುಕ್ತವಾಗಿ ತೋರಲಿಲ್ಲ. ಮತ್ತೇನು ಮಾಡಬೇಕೆಂದಾಲೋಚಿಸುತ್ತಿರುವಲ್ಲಿ, ಆಂಡರ್‌ಸನ್ನನು ಸಹಾಯವನ್ನು ಬೇಡಿ ಎರಡನೆಯಸಾರಿ ಕಾಗದವನ್ನು ಬರೆದನು. ಆ ಕಾಗದದ ಒಕ್ಕಣೆಯಿಂದಲೇ ಆ ಸೇನಾಧಿಕಾರಿಯ ಶೋಚನೀಯಾವಸ್ಥೆಯನ್ನು ತಿಳಿಯಬಹುದಾಗಿದ್ದಿತು. ಲಿಂಕನ್ನನು ಕೂಡಲೆ ಸಹಾಯವನ್ನೂ ಆಹಾರಸಾಮಗ್ರಿಗಳನ್ನೂ ಕಳುಹಿಸುವುದಾಗಿ ಕಾಗದಬರೆದು ಎಲ್ಲವನ್ನೂ ಸಿದ್ಧಪಡಿಸಲು ಪ್ರಯತ್ನಮಾಡಿ ಮೊದಲು ಆಹಾರಸಾಮಗ್ರಿಗಳನ್ನುಮಾತ್ರ ಕಳುಹಿಸಿದನು. ಸೈನಿಕರನ್ನು ಕಳುಹಲಾಗಲಿಲ್ಲ. ಕಳುಹಿಸಿದ್ದ ಆಹಾರಬರುವುದೂ ಸಾವಕಾಶವಾಯಿತು. ಅಷ್ಟು ಹೊತ್ತಿಗೆ ಕೋಟೆಯಲ್ಲಿದ್ದವರಿಗೆಲ್ಲಾ ಒಂದೆರಡು ಉಪವಾಸಗಳೂ ಆಗಿದ್ದುವು. ಸೇನಾಧಿಪತಿಯು ಸಹಾಯವೇನಾದರೂ ಬರುವುದೋ ಏನೋ ಎಂದು ಪ್ರತಿಕ್ಷಣವೂ ನಿರೀಕ್ಷಿಸಿ ಕೊನೆಗೆ ಬೇಸರವಾಗಿ ಸಹಾಯವು ಬರುವುದಕ್ಕೊಂದು ದಿನ ಮುಂಚೆ ಕೋಟೆಯನ್ನು ಶತ್ರುಗಳಿಗೊಪ್ಪಿಸಿಬಿಟ್ಟನು. ಕೋಟೆಯಲ್ಲಿದ್ದವರೆಲ್ಲಾ ದಾಕ್ಷಿಣಾತ್ಯರ ಬಂದಿಗಳಾದರು

೮. ಇದರಿಂದ ದಾಕ್ಷಿಣಾತ್ಯರ ಸಂತೋಷಕ್ಕಂತೂ ಪರಿಮಿತಿಯೇ ಇರಲಿಲ್ಲ. ಕಾರ್ಯಾರಂಭದಲ್ಲಿಯೇ ಇಂತಹ ಜಯವಾಗಲು ಯಾರಿಗೆತಾನೇ ಗರ್ವೋತ್ಸಾಹವುಂಟಾಗದು? ತಮಗಿಂತಲೂ ಅಧಿಕರಾದವರಿಗೆ ಸೇರಿದ್ದ ಕೋಟೆಯು ತಮ್ಮ ಕೈವಶವಾಗುತ್ತಲೇ, ದಂಗೆಕೋರರು ಅಲ್ಲಿ ಹಾರುತ್ತಿದ್ದ ಸಂಸರ್ಗದ ಧ್ವಜವನ್ನು ಕಿತ್ತು ನೆಲದಮೇಲೆ ಬಿಸುಟು ತುಳಿದು ಅವಮಾನಪಡಿಸಿ ತಮ್ಮ ಧ್ವಜವನ್ನು ಸ್ಥಾಪಿಸಿದರು.

೯. ಈ ಸಮಾಚಾರವು ಔತ್ತರೇಯರಿಗೆ ತಿಳಿದೊಡನೆಯೇ ಎಲ್ಲೆಲ್ಲಿಯೂ ಹಾಹಾಕಾರವುಂಟಾಯಿತು. ಔತ್ತರೇಯರಲ್ಲಿ ಕೆಲವರು ಯುದ್ಧಾರಂಭದಲ್ಲಿ ತಮಗಾದ ಅಪಜಯವು ಅಶುಭಸೂಚಕನೆಯೆಂದರು. ಏಬ್ರಹಾಮನಾದರೋ ಅವುಗಳೊಂದನ್ನೂ ನಂಬದೆಯೂ ಎದೆಗುಂದದೆಯೂ ಬಲವಾದ ಪ್ರಯತ್ನಗಳನ್ನು ಮಾಡುತ್ತಲೇ ಇದ್ದನು

# ಹದಿನೈದನೆಯ ಪ್ರಕರಣ.

## ಯುದ್ಧವು.

೧ ಮಾತೃಭೂಮಿಯ ಹಿತಾರ್ಥವಾಗಿ ತಮ್ಮ ಪ್ರಾಣವನ್ನು ಒಪ್ಪಿಸಲೂ ಹಿಂದೆಗೆಯದಿದ್ದ ಹಲವರು ತರುಣವೀರರೂ, ಮುದುಕರಾದ ಕೆಲವು ಯೋಧರೂ ನಾನುತಾನೆಂದು ಮುಂದೆ ನುಗ್ಗಿ ಸೈನ್ಯಕ್ಕೆ ಸೇರಿದರು. ಹೊಸತಾಗಿ ಸೇರಿದ ಯೋಧರಿಗಾಗಿ ವಸ್ತ್ರಾದಿಗಳನ್ನೂ ಆಯುಧಗಳನ್ನೂ ಸಿದ್ಧಪಡಿಸುವ ಕಾರ್ಯಗಳು ಬಹಳ ರಭಸದಿಂದ ಎಲ್ಲೆಲ್ಲಿಯೂ ನಡೆಯಲಾರಂಭವಾದುವು.

೨. ಸೈನಿಕರೆಲ್ಲರೂ ತಮ್ಮ ಶತ್ರುಗಳ ಬಲಾಬಲಗಳನ್ನರಿಯದೆ ಅವರ ದಂಗೆಯು ಮಕ್ಕಳಾಟಕ್ಕೆ ಸಮವಾದ ದಂಗೆಯೆಂದೂ ಒಂದೆರಡು ದಿವಸಗಳಲ್ಲಿ ಅದನ್ನೆಲ್ಲಾ ನಿಲ್ಲಿಸಬಹುದೆಂದೂ ತಿಳಿದಿದ್ದರು. ಆದರೆ ಲಿಂಕನ್ನನು ಇವರಂತೆಯೇ ಮೋಸಹೋಗದೆ ಗೂಢಚಾರರನ್ನಿಟ್ಟುಕೊಂಡು ಆಗಾಗಿನ ಸಮಾಚಾರಗಳನ್ನು ಆಗಲೇ ತರಿಸಿಕೊಳ್ಳುತ್ತಿದ್ದನು. ದಾಕ್ಷಿಣಾತ್ಯರ ಸನ್ನಾಹವನ್ನು ನೋಡಿ ಒಂದು ದೊಡ್ಡ ಯುದ್ಧವಿಲ್ಲದೆ ಅವರು ಮೆತ್ತಗಾಗುವವರಲ್ಲವೆಂದು ಅವನು ತಿಳಿದಿದ್ದನು. ಆದರೂ ಲಿಂಕನ್ನನು ತನ್ನ ಭಾವವನ್ನು ಅವರಿಗೆ ತೋರ್ಪಡಿಸಿ ಅವರನ್ನು ಉತ್ಸಾಹಹೀನರನ್ನಾಗಿ ಮಾಡಲಿಷ್ಟಪಡಲಿಲ್ಲ. ಜನರು ಏನುಬೇಕಾದರೂ ಆಡಿಕೊಳ್ಳಲೆಂದು ಸುಮ್ಮನಿದ್ದನು. ದಾಕ್ಷಿಣಾತ್ಯರನ್ನೊಂದೆರಡು ಯುದ್ಧದಲ್ಲಿ ಇದಿರಿಸಿದೊಡನೆಯೇ ಅವರ ಬಲವೆಲ್ಲಾ ವ್ಯಕ್ತವಾಗಿ ವಿರೋಧಿಗಳು ಪ್ರಬಲರೆಂದೂ ಅವರನ್ನು ಜಯಿಸಲು ಬಲವತ್ತರವಾದ ಪ್ರಯತ್ನಗಳನ್ನು ಮಾಡಬೇಕೆಂದೂ ಔತ್ತರೇಯರೆಲ್ಲರೂ ತಿಳಿದರು.

೩. ಕೆಲವು ದಿನಗಳಲ್ಲೇ ಅಪಾರವಾದ ಸೈನ್ಯವೇನೋ ಸಿದ್ಧವಾಯಿತು. ಬೇಕಾದಷ್ಟು ಯುದ್ಧಸಾಮಗ್ರಿಯೂ ಅಣಿಯಾಯಿತು. ಆದರೆ ತಕ್ಕ ಸೇನಾಪತಿಯೊಬ್ಬನು ದೊರೆಯದಿದ್ದನು. ಸಮರ್ಥನಾದ ಸೇನಾಧಿಪತಿಯನ್ನು ಗೊತ್ತುಮಾಡದಿದ್ದರೆ ಸೈನ್ಯದಲ್ಲಿ ಅಂತಃಕಲಹಗಳಿಗೆ ಪ್ರಾರಂಭವಾಗಿ ಅದುವರೆಗೂ ಪಟ್ಟಿದ್ದ ಶ್ರಮವೆಲ್ಲಾ ವ್ಯರ್ಥವಾಗುವುದೆಂದು ಲಿಂಕನ್ನನು

ತಿಳಿದೇ ಇದ್ದನು. ವಿನ್‌ಫೀಲ್ಡ್ ಸ್ಕಾಟನು ಬಹು ಸಮರ್ಥನಾದ ಸೇನಾಧಿಪತಿಯಾಗಿದ್ದರೂ ಬಹಳ ಮುದುಕನಾಗಿದ್ದುದರಿಂದ, ಅಷ್ಟೊಂದು ಸೈನ್ಯಕ್ಕೂ ಅವನನ್ನು ಮುಖ್ಯಸೈನ್ಯಾಧಿಪತಿಯನ್ನಾಗಿ ಮಾಡುವುದು ಅನುಚಿತವೆಂದು ತೋರಿತು. ಆ ಏರ್ಪಾಡಿಗೆ ಸ್ಕಾಟನೂ ಒಪ್ಪಲಿಲ್ಲ. "ಮೊದಲಿನಂತೆಯೇ ಚಟುವಟಿಕೆಯಿಂದ ಕೆಲಸಮಾಡಲು ನನಗೆ ಈಗ ಶಕ್ತಿಯಿಲ್ಲ" ವೆಂದು ಅವನು ಮುಚ್ಚುಮರೆಯಿಲ್ಲದೆ ಹೇಳಿಬಿಟ್ಟನು. ಆದುದರಿಂದ ಲಿಂಕನ್ನನು ಅವನನ್ನು ಒಂದು ಸಣ್ಣ ದಳಕ್ಕೆ ಅಧಿಪತಿಯಾಗಿ ಮಾಡಿ ತನ್ನ ಹತ್ತಿರದಲ್ಲಿಯೇ ಇಟ್ಟುಕೊಂಡನು.

೪. ಈ ನಡುವೆ ವರ್ಜಿನಿಯಾ (Virginia) ದೇಶದ ರಾಬರ್ಟ್ ಲೀ (Robert Lee) ಎಂಬಸೈನಿಕನೊಬ್ಬನು ಹೆಸರುವಾಸಿಗೆ ಬರುತ್ತಿದ್ದನು. ಇವನು ಮೊದಲು ಸೈನ್ಯದಲ್ಲೊಬ್ಬ ಸಾಮಾನ್ಯಸೈನಿಕನಾಗಿದ್ದು ಅತಿ ಸ್ವಲ್ಪ ಕಾಲದಲ್ಲಿಯೇ ಸೇನಾಧಿಕಾರಿಯಾದನು. ಅವನಿಗೆ ವಯಸ್ಸು ಸ್ವಲ್ಪ; ಅವನ ಚಟುವಟಿಕೆಯು ಯಾರಿಗೇ ಆದರೂ ಆಶ್ಚರ್ಯವನ್ನುಂಟುಮಾಡುತ್ತಿದ್ದಿತು. ಗುಣಗ್ರಾಹಿಯಾಗಿದ್ದ ಲಿಂಕನ್ನಿನ ದೃಷ್ಟಿಯು ಅವನಮೇಲೆ ಬಿದ್ದ ಕೂಡಲೆ ಅವನನ್ನು ಬರಮಾಡಿಕೊಂಡು ಸಂಸರ್ಗದ ಸೈನ್ಯಕ್ಕೆ ಮುಖ್ಯ ಸೇನಾಧಿಪತಿಯನ್ನಾಗಿ ಮಾಡಿದನು. ಆದರೆ ಕೆಲವುದಿನಗಳಲ್ಲಿಯೇ ವರ್ಜಿನಿಯಾದೇಶವೂ ಸಂಸರ್ಗವನ್ನು ಬಿಟ್ಟು ದಂಗೆ ಎದ್ದಿದ್ದ ಇತರ ರಾಜ್ಯಗಳೊಡನೆ ಸೇರಿಕೊಂಡುದರಿಂದ, ಲೀಯು ಔತ್ತರೇಯರ ಸೈನ್ಯಕ್ಕೆ ಮುಖ್ಯಾಧಿಕಾರಿಯಾದನು. ಇದರಿಂದ ಲಿಂಕನ್ನಿಗೆ ಆಶಾಭಂಗವಾಯಿತಾದರೂ, ಅದನ್ನು ತೋರ್ಪಡಿಸದೆ, ಅವನು ಸಮರ್ಥನಾದ ಬೇರೊಬ್ಬ ಸರದಾರನನ್ನು ಹುಡುಕುತ್ತಿದ್ದನು.

೫. ಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚೆ ಔತ್ತರೇಯರೇ ಜಯಶಾಲಿಗಳಾಗುವ ಸೂಚನೆಗಳು ತೋರುತ್ತಿದ್ದುವು. ದಾಕ್ಷಿಣಾತ್ಯರ ಸೈನ್ಯವೇ ಹೆಚ್ಚಾಗಿದ್ದುದರಿಂದ ಅವರೇ ಗೆಲ್ಲುವರೆಂದು ಜನರು ಹೇಳಿಕೊಳ್ಳುತ್ತಿದ್ದರು. ಆದರೆ, ಸೈನ್ಯದ ಸಂಖ್ಯೆಯೊಂದರಿಂದಲೇ ಜಯವುಂಟಾಗಲಾರದೆಂದೂ, ಸೈನಿಕರ ದೃಢಮನವೇ ವಿಜಯಕ್ಕೆ ಸಹಕಾರಿಯೆಂದೂ ಸಾಮಾನ್ಯ ಜನರಿಗೆ ತಿಳಿಯುವುದು ಹೇಗೆ? ಪ್ರಭುವಿನ ನಿರ್ಬಂಧಕ್ಕೆ ಒಳಗಾಗಿ ಅರೆವು

ನಸ್ಸಿನಿಂದ ಕಾದಾಡುತ್ತಿದ್ದ ದಾಸರು, ಬ್ರಾತ್ತರೇಯರ ಸೈನ್ಯದಲ್ಲಿ ಅಪೂರ್ವ. ಮಾತೃಭೂಮಿಯ ಗೌರವವನ್ನೂ, ಪುರಾತನವಾದ ಸಂಸರ್ಗದ ಬಿಗಿಯನ್ನೂ ಕಾಪಾಡಬೇಕೆಂದು ಯಾರ ಬಲಾತ್ಕಾರವೂ ಇಲ್ಲದೆ ತಾವಾಗಿಯೇ ಬಂದು ನೆರೆದಿದ್ದ ತರುಣವೀರರೇ ಆ ಸೈನ್ಯದಲ್ಲಿ ಹೆಚ್ಚಾಗಿದ್ದರು. ಆದುದರಿಂದ ಅಂತ್ಯದಲ್ಲಿ ಔತ್ತರೇಯರಿಗೇ ಜಯವಾಗುವಂತಿದ್ದರೂ, ಸುಶಿಕ್ಷಿತರೂ, ಸುಸಜ್ಜಿತರೂ ಆದ ದಾಕ್ಷಿಣಾತ್ಯಸೇನಾಧಿಪರೊಡನೆ ಹೋರಾಡಿ ಕ್ಷಿಪ್ರದಲ್ಲಿಯೇ ಜಯಶಾಲಿಗಳಾಗುವ ಸಂಭವವಿರಲಿಲ್ಲ. ಇತ್ತ ದಾಸ್ಯವಾದಿಸೀಮೆಗಳಲ್ಲಿದ್ದ ಗುಲಾಮರೆಲ್ಲ ಮೇಲೆಮೇಲೆ ದಾಕ್ಷಿಣಾತ್ಯರ ಪರವಾಗಿ ಮಾತನಾಡುತ್ತಿದ್ದರೂ ತಮ್ಮ ಮನಸ್ಸಿನಲ್ಲಿ ಔತ್ತರೇಯರಿಗೇ ಜಯವಾಗಬೇಕೆಂದೂ, ಅದರಿಂದ ತಮಗೆ ಬಂದುವೇಳೆ ಮೇಲಾಗಬಹುದೆಂದೂ ತಿಳಿದು ಹಾರೈಸುತ್ತಿದ್ದರು. ದಾಕ್ಷಿಣಾತ್ಯರು ಈ ಒಳಗುಟ್ಟನ್ನರಿಯದೆ ತಮ್ಮ ಸೈನ್ಯವನ್ನು ನೋಡಿ ತಾವೇ ಹಿಗ್ಗುತ್ತಿರುವಲ್ಲಿ, ಬ್ರಾತ್ತರೇಯರು ಇನ್ನೂ ಯುದ್ಧಕ್ಕೆ ಅಣಿಮಾಡಿಕೊಳ್ಳುತ್ತಿದ್ದರು. ಆದುದರಿಂದ ಬ್ರಾತ್ತರೇಯರ ಸೈನ್ಯವು ಸುಸಜ್ಜಿತವಾಗಬೇಕಾದರೆ ಇನ್ನೂ ಸ್ವಲ್ಪಕಾಲ ಬೇಕಾಗಿದ್ದಿತು.

೬. ಅಮೇರಿಕದ ಸಂಯುಕ್ತಸಂಸ್ಥಾನಗಳ ಒಳಸಂಗತಿಗಳು ಹೀಗಿರುವಲ್ಲಿ, ಇಗ್ಲೆಂಡುದೇಶವಾದರೋ ದಾಕ್ಷಿಣಾತ್ಯರ ಪಕ್ಷವನ್ನೇ ವಹಿಸುವಂತಿದ್ದಿತು. ಅಮೇರಿಕದವರೆಲ್ಲ ಒಕ್ಕಟ್ಟಾಗಿ ಹೋರಾಡಿ ತಮ್ಮನ್ನು ಸೋಲಿಸಿ, ಸ್ವಾತಂತ್ರ್ಯವನ್ನು ಹೊಂದಿದಂದಿನಿಂದಲೂ, ಆಂಗ್ಲೇಯರಿಗೆ ಕೋಪವಿದ್ದೇ ಇದ್ದುದರಿಂದ ಸ್ವಲ್ಪ ಆಸ್ಪದದೊರೆತೊಡನೆಯೇ ಇದು ಪುನಃ ಹೆಚ್ಚುವ ಸಂಭವವಿದ್ದಿತು. ಅಂತಹ ಸಮಯವು ಈಗ ದೊರೆಯಿತು. ಇದುವರೆಗೂ ಅಮೇರಿಕದವರು ಒಕ್ಕಟ್ಟಾಗಿದ್ದುದರಿಂದ, ಆಂಗ್ಲೇಯರಿಗೆ ಅವರಮೇಲೆ ಕೈಮಾಡಲು ಆಸ್ಪದವೇ ದೊರೆತಿರಲಿಲ್ಲ. ಈಗ ದೇಶದಲ್ಲಿ ಎರಡು ಪಂಗಡಗಳಾಗಿ ಕಾದಾಡುವಂತಿದ್ದ ಸಮಯವನ್ನು ಬಿಡದೆ ದಾಕ್ಷಿಣಾತ್ಯರ ಪಕ್ಷವನ್ನು ವಹಿಸಿ, ಪ್ರಬಲರಾದ ಬ್ರಾತ್ತರೇಯರನ್ನು ಭಂಗಿಸಿ ಮತ್ತೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳಬೇಕೆಂದು ನಿಶ್ಚಯಿಸಿದರು ಇದರ ಜೊತೆಗೆ ಇನ್ನೂ ಕೆಲವು ಕಾರಣಗಳೂ ಸೇರಿದುವು.

೭. ದಾಕ್ಷಿಣಾತ್ಯರು ಬೇಸಾಯಗಾರರೆಂದೂ, ಅವರು ಹತ್ತಿ

ಯನ್ನು ಬೆಳೆದು ಮಾರಿ ಜೀವಿಸುತ್ತಿದ್ದರೆಂದೂ, ಮೊದಲೇ ತಿಳಿಸಿರುವೆವು. ಇವರು ಬೆಳೆದ ಹತ್ತಿಯನ್ನೆಲ್ಲಾ ಆಂಗ್ಲೇಯರು ಕೊಂಡುಕೊಳ್ಳುತ್ತಿದ್ದರು ಯುದ್ಧವು ಪ್ರಾರಂಭವಾದೊಡನೆಯೇ ಲಿಂಕನ್ನನು ಕೆಲವು ಹಡಗುಗಳ ಸಹಾಯದಿಂದ, ದಾಕ್ಷಿಣಾತ್ಯರ ಸಮುದ್ರದ ವ್ಯಾಪಾರವನ್ನು ತಡೆದುಬಿಟ್ಟನು. ಇದುವರೆಗೂ ಸರಾಗವಾಗಿ ಬರುತ್ತಿದ್ದ ಹತ್ತಿಯು ಈಗ ಬಾರದೆಹೋಗಿ ಇಂಗ್ಲೆಂಡಿನಲ್ಲಿ ಹತ್ತಿಯ ಕ್ಷಾಮವುಂಟಾಯಿತು. ಆದುದರಿಂದ ಮ್ಯಾಂಚೆಸ್ಟರ್ (Manchester) ಮುಂತಾದ ಸ್ಥಳಗಳಲ್ಲಿದ್ದ ಹತ್ತಿಯ ಕಾರ್ಖಾನೆಗಳನ್ನೆಲ್ಲಾ ಮುಚ್ಚಿಬಿಡಬೇಕಾಯಿತು ಕೂಲಿಜನರಿಗೆ ಕೆಲಸಸಿಕ್ಕದೆ ಭಿಕ್ಷಬೇಡುವವರ ಸಂಖ್ಯೆಯು ಹೆಚ್ಚಿತು. ಜೀವನಕ್ಕೋಸುಗ ಕಳ್ಳತನವನ್ನು ಕೆಲವರು ಆರಂಭಿಸಿದರು. ಇದರಿಂದ ಕೆಲವು ಆಂಗ್ಲೇಯಪ್ರಮುಖರು ಕುಪಿತರಾಗಿ ಇಂಗ್ಲೆಂಡ್ ದೇಶವು ದಾಕ್ಷಿಣಾತ್ಯರ ಪಕ್ಷವನ್ನೇ ವಹಿಸಬೇಕೆಂದು ವಾದಿಸತೊಡಗಿದ್ದರು. ಔತ್ತರೇಯರು ಸೋತುಹೋದರೆ ತಮಗೆ ಮತ್ತೆ ಆ ದೇಶದಲ್ಲಿ ನೆಲೆಯು ಸಿಕ್ಕುವುದೆಂದೂ, ಕಾಲೂರುವಷ್ಟು ಸ್ಥಳವು ಸಿಕ್ಕಿದೊಡನೆಯೇ ದೇಶವೆಲ್ಲಾ ತಮ್ಮದಾಗುವುದೆಂದೂ ಅವರು ಯೋಚಿಸಿದ್ದರು. ಇಷ್ಟೇ ಅಲ್ಲದೆ ಆಂಗ್ಲೇಯರು ಔತ್ತರೇಯರನ್ನು ದ್ವೇಷಿಸುವುದಕ್ಕೆ ಮತ್ತೊ ಒಂದು ಮುಖ್ಯಕಾರಣವಿದ್ದಿತು. ಈಚೆಗೆ ಔತ್ತರೇಯರು ಕೈಗಾರಿಕೆಯಲ್ಲಿಯೂ, ವ್ಯಾಪಾರದಲ್ಲಿಯೂ, ಇಂಗ್ಲೆಂಡುದೇಶವನ್ನು ಮೀರಿಸಬೇಕೆಂದು ಮಹಾಪ್ರಯತ್ನವನ್ನು ಮಾಡುತ್ತಿದ್ದರು. ಇದನ್ನು ಕಂಡು ಹೊಟ್ಟೆಯುಕಿಚ್ಚುಪಟ್ಟು, ತರುಣದಲ್ಲಿಯೇ ಅವರನ್ನು ಮುರಿಯದಿದ್ದರೆ ಮುಂದೆ ತಮಗೆ ಬಹು ತೊಂದರೆಯಾಗುವುದೆಂದು, ಮನಸ್ಸಿನಲ್ಲಿ ನಿರ್ಧರಿಸಿದ್ದರು. ಈ ಕಾರಣಗಳಿಂದ ಆಂಗ್ಲೇಯರು ದಾಕ್ಷಿಣಾತ್ಯರಿಗೇ ಸಹಾಯಮಾಡುವಂತೆ ತೋರುತ್ತಿದ್ದಿತು.

೮. ಪೂರ್ವದಂತೆಯೇ ಈಗಲೂ ಇಂಗ್ಲೆಂಡುದೇಶದಲ್ಲಿ ಎರಡು ಪಂಗಡಗಳಿದ್ದುವು. ಒಂದು ಪಂಗಡವು ಔತ್ತರೇಯರ ಪಕ್ಷವನ್ನೂ ಮತ್ತೊಂದು ದಾಕ್ಷಿಣಾತ್ಯರಪಕ್ಷವನ್ನೂ ಹಿಡಿದು ಪಾರ್ಲಿಮೆಂಟ್ ಸಭೆಯಲ್ಲಿ ವಾದಿಸುತ್ತಿದ್ದುವು. ಔತ್ತರೇಯರ ಪರವಾಗಿ ಮಾತನಾಡುತ್ತಿದ್ದವರೆಲ್ಲ ಕಾರ್ಖಾನೆಗಳಲ್ಲಿ ಕೆಲಸಮಾಡಿ ಸೇವಾವೃತ್ತಿಯ ಕಷ್ಟನಿಷ್ಠುರ

ಗಳನ್ನು ಅಪಾರವಾಗಿ ಅನುಭವಿಸಿದ್ದ ಕೆಲಸಗಾರರೇ. ಆದುದರಿಂದ ಅವರು ದಾಸ್ಯನಿರೋಧಕರ ಪಕ್ಷವನ್ನು ವಹಿಸಿದುದೇನೂ ಆಶ್ಚರ್ಯವಲ್ಲ. ಗುಲಾಮರಿಗೆ ಇದ್ದ ಕಷ್ಟಗಳನ್ನು ಕೇಳಿ ಅವರ ಹೃದಯಗಳು ಕರಗಿ ನೀರಾಗುತ್ತಿದ್ದುವು. ದಾಕ್ಷಿಣಾತ್ಯರಿಗೆ ಸಹಾಯಮಾಡಬೇಕೆಂದಿದ್ದವರೆಲ್ಲಾ ಧನಾಢ್ಯರಾದ ಕಾರ್ಖಾನೆಗಳ ಯಜಮಾನರೂ ಭೂಸ್ವಾಮಿ ( Landlord )ಗಳೂ. ಕೆಲಸಗಾರರು ತಮ್ಮಲ್ಲೇ ಪ್ರಮುಖನೊಬ್ಬನನ್ನು ಆರಿಸಿಕೊಂಡು ಒಂದು ಸಭೆಮಾಡಿ, ಲಿಂಕನ್ನಿಗೂ, ಅವನ ಸೈನ್ಯಕ್ಕೂ ಜಯವನ್ನು ಕೋರಿ ಒಂದು ದೊಡ್ಡ ಕಾಗದವನ್ನು ಬರೆಸಿ ಕಳುಹಿಸಿ ಅವನನ್ನು ಪ್ರೋತ್ಸಾಹಿಸಿದರು. ಆ ಕಾಗದವು ಲಿಂಕನ್ನಿನ ಕೈಗೆ ಸೇರುತ್ತಲೇ ಅವನಿಗಾದ ಆನಂದಕ್ಕೆ ಪಾರವೇ ಇಲ್ಲ. ತಮಗೆ ಕಾರ್ಖಾನೆಗಳಲ್ಲಿ ಕೆಲಸಸಿಕ್ಕದೆ ಉಪವಾಸ ಮಾಡಬೇಕಾದ ದುರ್ದೆಸೆಯು ಬಂದಿದ್ದರೂ, ಅವರಿಗೆ ಉಂಟಾಗಿದ್ದ ಧರ್ಮಬುದ್ಧಿಗೆ ಬಹಳ ಹರ್ಷಿತನಾಗಿ, ಅವರಿಗೂ ಸಂತೋಷವಾಗುವಂತೆ ತಾನೂ ಒಂದು ಪ್ರತ್ಯುತ್ತರವನ್ನು ಬರೆದು ಕಳುಹಿಸಿದನು

೯. ಯುದ್ಧವು ಪ್ರಾರಂಭವಾಗಿ ಮೊದಲನೆಯ ಕದನವು ವಾಷಿಂಗ್ಟನ್ ಪಟ್ಟಣಕ್ಕೆ ಅನತಿದೂರದಲ್ಲಿದ್ದ ಬುಲ್‌ರನ್ (Bullrun) ಎಂಬಲ್ಲಿ ನಡೆಯಿತು. ಎರಡು ಪಕ್ಷಗಳವರೂ ಜಯಾಭಿಲಾಷಿಗಳಾಗಿ ಬಹಳ ರೋಷಾವೇಶದಿಂದ ಕಾದಿದರು. ಸ್ವಲ್ಪಹೊತ್ತು ಎರಡುದಳಗಳೂ ಸಮ ಸಮವಾಗಿ ಹೋರಾಡಿದುವು. ಆದರೆ ಮತ್ತೆ ಸ್ವಲ್ಪಕಾಲದಮೇಲೆ ಔತ್ತರೇಯರ ಶಕ್ತಿ ಕುಂದುತ್ತ ಬಂದು, ದಾಕ್ಷಿಣಾತ್ಯರ ಹೊಡೆತವು ಬಲವಾಯಿತು. ಆದುದರಿಂದ ಬಹಳಹೊತ್ತು ನಿಲ್ಲಲಾರದೆ ಸಂಸರ್ಗದ ಸೈನಿಕರು ಸೋತು ಭಯದಿಂದ ರಣರಂಗವನ್ನು ಬಿಟ್ಟು ಹತ್ತಿರದಲ್ಲಿದ್ದ ವಾಷಿಂಗ್ಟನ್ ಪಟ್ಟಣದೊಳಕ್ಕೆ ಬಂದುಬಿಟ್ಟರು. ಇದುವರೆಗೂ ಅವರಿಗೆ ಸೋಲೆಂದರೇನೋ ತಿಳಿದಿರಲಿಲ್ಲ. ಆದುದರಿಂದ ಇದೊಂದು ಸೋಲಿಗೇ ಅವರು ಎದೆಗೆಟ್ಟರು, ಅವರ ಅಧಿಕಾರಿಗಳು ಎಷ್ಟೇ ಪ್ರೋತ್ಸಾಹಿಸುತ್ತಿದ್ದರೂ ಯುದ್ಧಕ್ಕೆ ಮೊದಲು ಅವರಿಗಿದ್ದ ಉತ್ಸಾಹವು ಮತ್ತೆ ಬಾರದೆ ಹೋಯಿತು. ಆ ಯುದ್ಧದಲ್ಲಿ ಸೈನಿಕರೇನೋ ಕಷ್ಟಪಟ್ಟು ಕಾದಿದರೂ, ಸಮರ್ಥನಾದ ಸೇನಾಧಿಪತಿಯು ಲಿಂಕನ್ನನಿಗೆ ಇನ್ನೂ ದೊರೆತಿರಲಿಲ್ಲವಾದುದರಿಂದ ಸಂಸರ್ಗಕ್ಕೆ ಸೋಲಾಯಿತು. ಈ ಸ

ಮಯದಲ್ಲಿಯೇ ದಾಕ್ಷಿಣಾತ್ಯರು ಧೈರ್ಯದಿಂದ ಸಂಸರ್ಗದ ಮುಖ್ಯಪಟ್ಟಣವಾದ ವಾಷಿಂಗ್ಟನ್ ನಗರವನ್ನು ಮುತ್ತಿದ್ದರೆ ಔತ್ತರೇಯರಿಗೆ ಬಹು ಕಷ್ಟವಾಗುತ್ತಿದ್ದಿತು. ಆದರೆ ದಾಕ್ಷಿಣಾತ್ಯರು ಅಂತಹ ಸಾಹಸಕ್ಕೆ ಪ್ರಯತ್ನಿಸಲಿಲ್ಲ.

೧೦. ಲಿಂಕನ್ನನು ಬಹುಕಾಲದ ವರೆಗೂ ಕಾದು ಕಾದು ಬೇಸರಗೊಂಡು ತನ್ನ ಮನಸ್ಸಿಗೊಪ್ಪುವ ಸಮರ್ಥನಾವನೂ ಸಿಕ್ಕದುದರಿಂದ ಕಡೆಗೆ ೧೮೬೧ರಲ್ಲಿ ಜಾರ್ಜ್ ಮೆಕ್‌ಕ್ಲೆಲನ್ (George McClellan) ಎಂಬಾತನಿಗೆ ಸಂಸರ್ಗದ ಸರ್ವಸೇನಾಧಿಪತ್ಯವನ್ನು ಒಪ್ಪಿಸಿದನು. ಅವನು ಪೋಟೋಮ್ಯಾಕ್ (Potomac) ಎಂಬಸ್ಥಳದಲ್ಲಿ ತನ್ನ ಪಾಳಯವನ್ನು ಬಿಡಿಸಿದನು. ಅವನು ಬುದ್ಧಿವಂತನೂ, ಅನುಭವಶಾಲಿಯೂ, ಅಪ್ರತಿಮವೀರನೂ ಆಗಿದ್ದನು. ಆದುದರಿಂದ ಅನೇಕರು ಇನ್ನು ಯುದ್ಧವು ಮುಗಿದಂತೆಯೇ ಎಂದು ಭಾವಿಸಿಕೊಂಡರು. ಆದರೆ ಮೆಕ್‌ಕ್ಲೆಲನ್ನನು ಎಷ್ಟೇ ಚತುರನಾದರೂ, ಬಹು ತಾಮಸ ಪ್ರಕೃತಿಯುವನು. ಅವನಲ್ಲಿ ಸಮಯಸ್ಫೂರ್ತಿ ಇರಲಿಲ್ಲ. ಇಂತಹ ಅವಸರ ಸಮಯದಲ್ಲಿ ಅವನಿಂದ ಕೆಲಸಕಾರ್ಯಗಳು ನಡೆಯವು ಲಿಂಕನ್ನಿಗೆ ಈ ಸಂಗತಿಯು ತಿಳಿದಿದ್ದರೂ, ಮತ್ತಾರೂ ಇಲ್ಲದಿದ್ದುದರಿಂದ ಅವನನ್ನೇ ನಿಯಮಿಸಬೇಕಾಯಿತು ಎಷ್ಟು ಕಾಲ ನಿರೀಕ್ಷಿಸಿದರೂ, ಮುಂದಕ್ಕೆ ಹೊರಟು ಹತ್ತಿರದಲ್ಲಿಯೇ ಬುಲ್‌ರನ್ ಎಂಬಲ್ಲಿದ್ದ ಶತ್ರುಗಳನ್ನು ಹೊಡೆದೋಡಿಸಲು ಅವನೇನೂ ಪ್ರಯತ್ನಮಾಡಲಿಲ್ಲ ಆದುದರಿಂದ ಸ್ವಲ್ಪದಿನಗಳಲ್ಲಿಯೇ ಜನರೆಲ್ಲರಿಗೂ ಬೇಸರಹುಟ್ಟಿ ಅವನನ್ನು ಹಾಸ್ಯಮಾಡಲಾರಂಭಿಸಿದರು.

೧೧ ಯುದ್ಧವು ಆರಂಭವಾಗಿ ಒಂದುವರ್ಷವಾದರೂ, ಅಷ್ಟು ದಿನವೂ, ಕೊಂಚವೂ, ವಿರಾಮವಿಲ್ಲದೆ ಯುದ್ಧಕಾರ್ಯಗಳು ನಡೆಯುತ್ತಿದ್ದುವು. ಮೊದಲು ಅನೇಕರು ಒಂದು ತಿಂಗಳಲ್ಲಿ ಕೊನೆಗಾಣಬಹುದೆಂದು ನೆನೆಸಿದ್ದ ಆ ಯುದ್ಧವು ನಿಲ್ಲುವ ಸೂಚನೆಯೇ ತೋರಲಿಲ್ಲ. ಈ ನಡುವೆ ಸಂಸರ್ಗದ ಸೈನ್ಯವು ಉತ್ಸಾಹಶೂನ್ಯವಾಗಿ ದಿನದಿನಕ್ಕೂ ಕ್ಷಯಿಸುತ್ತಿದ್ದಿತು. ಹೊಸದಾಗಿ ಸೈನ್ಯಕ್ಕೆ ಸೇರಲು ಜನರು ಹಿಂದುಮುಂದು ನೋಡಲಾರಂಭಿಸಿದ್ದರು. ಇದನ್ನು ತಿಳಿದು ಲಿಂಕನ್ನನು, ನಿಗ್ರೋ ಜನರು ಶ್ರಮಸಹಿಷ್ಣುಗ

ಳೆಂದರಿತು, ಅವರನ್ನು ಸೈನ್ಯಕ್ಕೆ ಸೇರಿಸಿಕೊಂಡರೆ ಪಾಳೆಯದಲ್ಲಿ ಕೆಲಸಕಾರ್ಯಗಳಿಗೂ, ಸಮಯಬಂದಾಗ ಯುದ್ಧಕ್ಕೂ ಅನುಕೂಲಿಸುವರೆಂದು ಯೋಚಿಸಿ ತನ್ನ ಮನೋಭಿಪ್ರಾಯವನ್ನು ಬಹಿರಂಗಪಡಿಸಿದನು. ಈ ಸೂಚನೆಯು ಅವನ ಆಪ್ತರಾದ ಅನೇಕರಿಗೆ ಸರಿದೋರಲಿಲ್ಲ; ಗುಲಾಮರನ್ನು ಸೈನ್ಯಕ್ಕೆ ಸೇರಿಸುವುದು ಅನುಚಿತವೆಂದರು. ಆದರೆ ಯಾರೆಷ್ಟು ಕೂಗಿಕೊಂಡರೂ ಕೇಳದೆ ತನಗೆ ಯುಕ್ತವೆಂದು ತೋರಿದ ಕೆಲಸವನ್ನು ಲಿಂಕನ್ನನು ಮಾಡಿಬಿಡುತ್ತಿದ್ದನು. ಯಾವುದಾದರೂ ಕಾರ್ಯವನ್ನು ಮಾಡಬೇಕೋ ಮಾಡಬಾರದೋ ಎಂಬುದನ್ನು ಮೊದಲು ಖಂಡಿತಮಾಡಿಕೊಂಡು ಬಳಿಕ ಲಿಂಕನ್ನನು ದೇಶಮರ್ಯಾದೆಯನ್ನನುಸರಿಸಿ ಇತರರ ಅಭಿಪ್ರಾಯವನ್ನು ಕೇಳುತ್ತಿದ್ದನು. ಗುಲಾಮರನ್ನು ಸೈನ್ಯಕ್ಕೆ ಸೇರಿಸಿದರೆ ತಾವು ಕೆಲಸವನ್ನು ಬಿಟ್ಟು ಹೋಗುವೆವೆಂದು ಮೊದಮೊದಲು ಕೆಲವು ಸೈನಿಕರು ಹೆದರಿಸಿದರು. ಲಿಂಕನ್ನನು ಅದಕ್ಕೆ ಹೆದರದೆ ಬೇಕಾದವರೆಲ್ಲಾ ಬಿಟ್ಟುಹೋಗಬಹುದೆಂದು ದಂಡಿನಲ್ಲಿ ಸಾರಿಸಿ ೧,೩೦,೦೦೦ ಜನಗುಲಾಮರನ್ನು ಸೈನ್ಯಕ್ಕೆ ಸೇರಿಸಿದನು. ಆದುದರಿಂದ ಬಿಳಿಯ ಸೈನಿಕರ ಗೊಣಗಾಟವೆಲ್ಲ ನಿಂತುಹೋಯಿತು. ಈ ಸಮಾಚಾರವು ದಾಕ್ಷಿಣಾತ್ಯರಿಗೆ ತಿಳಿದೊಡನೆಯೇ "ಏನು! ಬಿಳಿಯ ಜನರೊಡನೆ ಯುದ್ಧಮಾಡಿ ಅವರನ್ನು ಕೊಲ್ಲಲು, ಆ ಕೀಳುಜಾತಿಯ ಕರಿಯ ಗುಲಾಮರನ್ನು ಸೈನ್ಯಕ್ಕೆ ಸೇರಿಸಬಹುದೆ!" ಎಂದು ಗೊಣಗಿದರು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ.

೧೦ ಮೊದಲುಮೊದಲು ನೀಗ್ರೋ ಜನರಿಗೆ ಬಿಳಿಯ ಜನರಿಗಿಂತಲೂ ಕಡಿಮೆ ಸಂಬಳ ದೊರೆಯುತ್ತಿದ್ದಿತು. ಆದರೂ ಅವರು ಗೊಣಗುಟ್ಟದೆ ಕೆಲಸಮಾಡುತ್ತಿದ್ದುದನ್ನು ನೋಡಿ ಲಿಂಕನ್ನಿಗೆ ಸಂತೋಷವಾಗಿ ೧೮೬೪ ರಿಂದ ಎಲ್ಲರಿಗೂ ಒಂದೇ ಸಂಬಳ ದೊರೆಯಬೇಕೆಂದು ಏರ್ಪಡಿಸಿದನು. ಇದರಿಂದ ಔತ್ತರೇಯರಲ್ಲಿ ಕೆಲವರಿಗೆ ಅತೃಪ್ತಿಯಾಯಿತು. ಮತ್ತೆ ಕೆಲವರು ಲಿಂಕನ್ನಿನ ಕೆಲಸಕ್ಕೆ ಬಹು ಸಂತೋಷಪಟ್ಟು ಗುಲಾಮರಿಗೆ ಕೂಡಲೆ ಸ್ವಾತಂತ್ರ್ಯವನ್ನುಂಟುಮಾಡಿ ಕೊಡಬೇಕೆಂದರು. ಲಿಂಕನ್ನನು ಯಾರ ಮಾತನ್ನೂ ಕೇಳದೆ ತನ್ನ ಒಳವುದ್ದೇಶವನ್ನು ಬಹಿರಂಗಪಡಿಸದೆ ತನ್ನ ಮಾರ್ಗದಲ್ಲಿ ತಾನು ಹೋಗುತ್ತಾ ಯಾವರೀತಿಯಿಂದಲಾದರೂ ಸಂಸರ್ಗವನ್ನು ರಕ್ಷಿ

ಸುವುದೇ ತನ್ನ ಮುಖ್ಯೋದ್ದೇಶವೆಂದೂ, ದಾಸ್ಯವನ್ನು ತಪ್ಪಿಸುವುದಾಗಲೀ ಹೆಚ್ಚಿಸುವುದಾಗಲೀ ತನ್ನ ಇಷ್ಟವಲ್ಲವೆಂದು ಹೇಳುತ್ತಿದ್ದನು.

೧೩. ಪೋಟೊಮ್ಯಾಕಿನಲ್ಲಿ ಬೀಡುಬಿಟ್ಟುಕೊಂಡಿದ್ದ ಮೆಕ್ಲೆಲನ್ನನು ಬುಲ್‌ರನ್ ಎಂಬಲ್ಲಿದ್ದ ಶತ್ರುಗಳ ಮೇಲೆ ಬೀಳದೆ ಕಾಲಕಳೆಯುತ್ತಿದ್ದನು. ಲಿಂಕನ್ನನು ಕಾಗದಬರೆದು ಪ್ರೋತ್ಸಾಹಿಸಿದರೂ ಪ್ರಯೋಜನವಿಲ್ಲದೆ ಹೋಗಲು ಅವನು ಹೋಗಲೇ ಬೇಕೆಂದು ಮತ್ತೊಮ್ಮೆ ಕಟ್ಟಪ್ಪಣೆ ಮಾಡಲು ಸೋಮಾರಿತನದಿಂದ ಸಿಕ್ಕಿದಂತೆತಿರುಗುತ್ತಿದ್ದ ತನ್ನ ಸೈನಿಕರನ್ನು ಹುರಿದುಂಬಿಸಿ ಯುದ್ಧಕ್ಕೆ ಹೊರಡಲಾರದೆ ಹೋದನು. ಆದುದರಿಂದ ಲಿಂಕನ್ನನು ಮೆಕ್‌ಕ್ಲೆಲೆನ್ನನನ್ನು ಸರ್ವಸೇನಾಧಿಪತಿಯ ಸ್ಥಾನದಿಂದ ತಪ್ಪಿಸಿ ಒಂದು ಸಣ್ಣದಳಕ್ಕೆ ಅಧಿಕಾರಿಯಾಗಿ ನಿಯಮಿಸಿದನು. ಇಷ್ಟಾದರೂ ದುರ್ದೈವದಿಂದ ಮೆಕ್‌ಕ್ಲೆಲೆನ್ನನಿಗೆ ಆಲಸ್ಯವು ತೊಲಗಲಿಲ್ಲ. ಲಿಂಕನ್ನನಿಗೆ ಸಮರ್ಥನಾದ ಸೇನಾಪತಿಯೂ ಒದಗಿರಲಿಲ್ಲ.

೧೪. ಹೀಗಿರುವಲ್ಲಿ ಎರಡುಕಡೆಯ ಸೈನ್ಯಗಳೂ ಆಂಟೆಟಮ್ ಎಂಬಲ್ಲಿ ಕಲೆತು ಯುದ್ಧವು ನಡೆಯಿತು. ದಾಕ್ಷಿಣಾತ್ಯರಕಡೆ ಲಿ ಎಂಬಾತನು ಸೇನಾಧಿಪತಿಯಾಗಿದ್ದನು. ಔತ್ತರೇಯರ ದಳದಲ್ಲಿ ಮೆಕ್ಲೆಲನ್ನನೇ ಪ್ರಮುಖನಾಗಿದ್ದನು. ದೈವವಶದಿಂದಲೂ ಮೆಕ್ಲೆಲನ್ನನ ಬುದ್ಧಿವಂತಿಕೆಯಿಂದಲೂ ಈ ಯುದ್ಧದಲ್ಲಿ ಔತ್ತರೇಯರಿಗೆ ವಿಜಯವಾದುದರಿಂದ ಲಿಂಕನ್ನನು ಯುದ್ಧಭೂಮಿಗೆ ಬಂದು ಆ ಸೇನಾಧಿಪತಿಯನ್ನು ಬಹಳವಾಗಿ ಹೊಗಳಿ ಶತ್ರುಗಳಮೇಲೆ ಪುನಃ ಬೀಳುವಂತೆ ಪ್ರೋತ್ಸಾಹಿಸಿದನು. ಆದರೆ ಮೆಕ್‌ಕ್ಲೆಲೆನ್ನನಿಗೆ ಪುನಃ ಜಡತೆಯುಂಟಾದುದರಿಂದ ಬರ್ನ್‌ಸೈಡ್ (Burnside) ಎಂಬಾತನನ್ನು ಸೇನಾಧಿಪತಿಯಾಗಿ ನಿಯಮಿಸಬೇಕಾಯಿತು.

೧೫. ಆ ಬಳಿಕ ನಡೆದ ಯುದ್ಧಗಳಲ್ಲಿ ಕೆಲವುವೇಳೆ ದಾಕ್ಷಿಣಾತ್ಯರಿಗೂ ಮತ್ತೆ ಕೆಲವುವೇಳೆ ಔತ್ತರೇಯರಿಗೂ ವಿಜಯವಾಗುತ್ತಿದ್ದಿತು. ಈ ಯುದ್ಧಗಳಲ್ಲಿ ಯೂಲಿಸಸ್ ಗ್ರ್ಯಾಂಟ್ (Ulysses-Grant) ಎಂಬೊಬ್ಬ ಸೇನಾಧಿಕಾರಿಯೂ ತನ್ನ ಶಕ್ತಿಸಾಹಸಗಳಿಂದ ಬಹಳ ಪ್ರಖ್ಯಾತನಾಗಿದ್ದನು. ಅವನನ್ನು ಲಿಂಕನ್ನನು ಸೇನಾಧಿಪತಿಯನ್ನಾಗಿಮಾಡಲು ಇದುವರೆಗೂ ಹೇಗೆ ಹೇಗೋ ನಡೆಯುತ್ತಿದ್ದ ಯುದ್ಧವು ಹಿಂದಿನಂತೆಯೇ ಬಹುಕಾಲ ಎಳೆಯಲಾರದೆಂಬ ನಂಬಿಕೆಯುಂಟಾಗಿ ಔತ್ತರೇಯರು ಹರ್ಷಿಸಿದರು.

# ಹದಿನಾರನೆಯ ಪ್ರಕರಣ.

## ದಾಸ್ಯನಿವೃತ್ತಿಯೂ ಯುದ್ಧಸಮಾಪ್ತಿಯೂ.

೧. ಆಂಟೆಟಂ ಯುದ್ಧವು ನಡೆಯುವವರೆಗೂ ದಾಕ್ಷಿಣಾತ್ಯರ ಕೈಯೇ ಬಲವಾಗಿದ್ದಿತು. ಆದರೆ ಆ ಯುದ್ಧದಲ್ಲಿ ಆದ ಸೋಲಿನಿಂದ ಅವರಿಗೆ ಮನಸ್ಸು ಕುಗ್ಗಿಹೋಗಿ ಅವರು ಹಿಮ್ಮೆಟ್ಟುತ್ತ ಬಂದರು. ಈ ಶುಭಸೂಚನೆಯನ್ನು ಕಂಡೇ "ಶುಭಸ್ಯಶೀಘ್ರಂ" ಎಂಬಂತೆ ಏಬ್ರಹಾಮ್ ಲಿಂಕನ್ನನು ತನ್ನ ಸೇನಾಧಿಪತಿಗೆ ಶತ್ರುಗಳಮೇಲೆ ಬೀಳುವಂತೆ ಪ್ರೇರಿಸಿದನು. ಇದಕ್ಕೆ ಅನುಸಾರವಾಗಿಯೇ ಮೆಕ್‌ಕ್ಲೆಲೆನ್ನನು ನಡೆದುಕೊಂಡಿದ್ದ ಪಕ್ಷದಲ್ಲಿ ಆ ಸ್ವಯೂಥ ಯುದ್ಧಕ್ಕೆ ಆಗಲೇ ಪರಿಸಮಾಪ್ತಿಯುಂಟಾಗುತ್ತಿದ್ದಿತು.

೨. ಆಂಟಿಟಂ ಯುದ್ಧದಿಂದ ಪ್ರಾಕ್ತರೇಯರಿಗೆ ಬಹಳ ಉತ್ಸಾಹವು ಹೆಚ್ಚಿದ್ದುದನ್ನು ಕಂಡು ದಾಸ್ಯವಿಮೋಚನೆಗೆ ಸಕಾಲವು ಬಂದಿತೆಂದು ಲಿಂಕನ್ನನು ಭಾವಿಸಿ ಆ ವಿಷಯವಾಗಿ ತನ್ನ ಆಪ್ತಸ್ನೇಹಿತರಿಗೆ ತಿಳಿಸಿದನು. ಅವರೆಲ್ಲರೂ ಲಿಂಕನ್ನಿನಂತೆಯೇ ಅಭಿಪ್ರಾಯಪಟ್ಟಿದ್ದರೂ ಸೆನೆಟ್ ಸಭೆಯಲ್ಲಿ ಅನೇಕರಿಗೆ ಅದು ಸರಿಬೀಳಲಿಲ್ಲ. ಲಿಂಕನ್ನಿನ ಸ್ವಭಾವವನ್ನು ಅವರು ತಿಳಿದಿದ್ದರೂ ಗುಲಾಮರಿಗೆ ಆಗ ಅಂತಹ ಕಷ್ಟವೇನೂ ಇರಲಿಲ್ಲವೆಂದೂ, ಯುದ್ಧವು ನಿಲ್ಲುವ ವರೆಗಾದರೂ ಆ ಸುದ್ದಿಯನ್ನೆತ್ತಬೇಕಾಗಿಲ್ಲವೆಂದೂ ವಾದಿಸುತ್ತಿದ್ದರು. ಆದರೆ ಹಿಂದೆ ಅನೇಕರು ಗೊಣಗುತ್ತಿದ್ದರು. ಬಿಳಿಯ ಜನರೊಡನೆ ನಿಂತು ಇದಿರು ಪಕ್ಷದ ಬಿಳಿಯ ಜನರಮೇಲೆಯೇ ಕಾದಾಡುವುದಕ್ಕಾಗಿ ನೀಗ್ರೋಜನರಿಗೆ ಅವಕಾಶವನ್ನು ಕಲ್ಪಿಸಿಯೂ ಬಿಳಿಯ ಜನರಿಗೂ ಕಪ್ಪುಜನರಿಗೂ ಒಂದೇ ಸಂಬಳ ದೊರೆಯುವಂತೆ ಏರ್ಪಡಿಸಿಯೂ ಇದ್ದ ಲಿಂಕನ್ನನು ನೀಗ್ರೋಜನಗಳಿಗೆ ಅಂದಿನಿಂದ ದಾಸ್ಯವಿಮೋಚನೆಯಾಯಿತೆಂದು ಬಾಯಿಂದ ಹೇಳುವುದಕ್ಕೆ ಹಿಂದೆಗೆಯುವನೆ! ಆದುದರಿಂದ ಲಿಂಕನ್ನಿನ ಪಟ್ಟನ್ನು ಕಂಡು ಅವನ ಪ್ರತಿಕಕ್ಷಿಗಳಲ್ಲಿ ಅನೇಕರು ನೀಗ್ರೋಜನಗಳಿಗೆ ವಸ್ತುತಃ ಉಂಟಾಗಿದ್ದ ಸ್ವಾತಂತ್ರ್ಯಕ್ಕೆ ಬಾಯಿಮಾತಿನಿಂದ ಅಡ್ಡಿಮಾಡುವುದು ಉಚಿತವಲ್ಲವೆಂದು ತಟಸ್ಥರಾಗುತ್ತಿದ್ದರು. ಲಿಂಕ

ನ್ನಿನ ಮಂತ್ರಿಗಳಲ್ಲಿ ಕೆಲವರಿಗೆ, ಗುಲಾಮರ ಸ್ವಾತಂತ್ರ್ಯದ ವಿಷಯದಲ್ಲಿ ಸಮ್ಮತಿ ಇರಲಿಲ್ಲ. ಅವರು ಬಣನಿಷ್ಠುರಕ್ಕೆ ಅಂಜಿ ಸುಮ್ಮನಿದ್ದುದನ್ನು ಕಂಡು ಲಿಂಕನ್ನನು ನೆವಮಾತ್ರಕ್ಕೆ ಅವರ ಅಭಿಪ್ರಾಯವನ್ನು ಕೇಳಿ ಗತ್ಯಂತರವಿಲ್ಲದೆ ಅವರುಕೊಟ್ಟ ಸಮ್ಮತಿಗನುಸಾರವಾಗಿ ೧೮೬೨ ನೆಯ ಇಸವಿ ಸೆಪ್ಟಂಬರ್ ೨೨ ನೆಯ ತಾರೀಖಿನಲ್ಲಿ ಮುಂದಿನ ಜನವರಿ ೧ ನೆಯ ತಾರೀಖಿನಿಂದ ದಾಸ್ಯನಿವೃತ್ತಿಯುಂಟಾಗುವುದೆಂದು ಎಲ್ಲೆಲ್ಲಿಯೂ ಸಾರಿಸಿ ಪ್ರಕಟಣಪತ್ರಿಕೆಗಳನ್ನು ಹಂಚಿಸಿದನು.

೩. ಈ ಪ್ರಕಟಣೆಯನ್ನು ಕಂಡು ದಾಕ್ಷಿಣಾತ್ಯರಿಗೆ ಮತ್ತಷ್ಟು ರೇಗಿ ಅವರು ವೀರಾವೇಶದಿಂದ ಕಾದಾಡಲಾರಂಭಿಸಿದರು. ತಮಗುಂಟಾದ ದಾಸ್ಯವಿಮೋಚನೆಗಾಗಿ ಅತ್ಯಂತಸಂತುಷ್ಟರಾಗಿದ್ದ ನೀಗ್ರೋಜನರು ತಮ್ಮ ಭಾಗದ ಸೌಭಾಗ್ಯದೇವತೆಯಂತೆ ಇದ್ದ ಲಿಂಕನ್ನಿನ ಪಕ್ಷದಲ್ಲಿ ಅತ್ಯಧಿಕೋತ್ಸಾಹದಿಂದ ಯುದ್ಧಮಾಡುತ್ತ ಬಂದುದರಿಂದ ದಾಕ್ಷಿಣಾತ್ಯರ ಉತ್ಸಾಹಕ್ಕೆ ಪ್ರತಿಕ್ರಿಯೆಯುಂಟಾಯಿತು. ಈ ನಡುವೆ ಜನುವರಿಯ ಮೊದಲ ನೆಯ ತಾರೀಖು ಬಂದುದರಿಂದ, ಆ ದಿವಸದಿಂದ ಸಕಲ ನೀಗ್ರೋಜನರೂ ಸ್ವತಂತ್ರರಾದರೆಂದೂ ಅವರವರ ಒಡೆಯರು ಇನ್ನು ಮುಂದೆ ಎಲ್ಲಾ ನೀಗ್ರೋಗಳನ್ನೂ ಸ್ವತಂತ್ರರೆಂದು ಭಾವಿಸಬೇಕೇ ಹೊರತು ದಾಸ್ಯರೆಂದು ಭಾವಿಸಲೇಕೂಡದೆಂದೂ ಮತ್ತೊಮ್ಮೆ ಪ್ರಕಟಪಡಿಸಿದನು. ದಾಸ್ಯಾಭಿಮಾನಿಗಳ ಹಾರಾಟವೇನೂ ನಡೆಯದೆ ಹೋಯಿತು. ೧೮೬೫ರಲ್ಲಿ ನಡೆದ ರಾಷ್ಟ್ರೀಯ ಸಭೆಯಲ್ಲಿ ಈ ದಾಸ್ಯ ನಿವೃತ್ತಿ ಸಂಬಂಧವಾದ ಪ್ರಕಟನೆಗೆ ಆ ಸಭೆಯವರೆಲ್ಲರೂ ಅನುಮೋದಿಸಿದುದರಿಂದ ಅಮೇರಿಕದಲ್ಲಿ ದಾಸ್ಯವು ನಿವೃತ್ತಿಯಾದಂತಾಯಿತು. ಇದರಿಂದ ದಾಸ್ಯವಿರೋಧಿಗಳಾಗಿದ್ದ ಅನೇಕರಾಜ್ಯಗಳವರು ಬಹಳವಾಗಿ ಸಂತೋಷಪಟ್ಟು ಲಿಂಕನ್ನನ್ನು ಅಭಿವಂದಿಸಿದರು.

೪. ಈ ಸಮಯದಲ್ಲೆಲ್ಲಾ ಯುದ್ಧವು ನಡೆಯುತ್ತಲೇ ಇದ್ದಿತು. ಆದರೆ ಗ್ರಾಂಟನು ಪ್ರಾತ್ತರೇಯರ ಸೇನಾಧಿಪತಿಯಾದ ಕೂಡಲೆ ಔತ್ತರೇಯರಿಗೆ ಅನೇಕ ಕಡೆಗಳಲ್ಲಿ ಜಯವಾಗುತ್ತ ಬಂದಿತು. ಇದನ್ನು ಕಂಡು ಲಿಂಕನ್ನನು ಬಹಳವಾಗಿ ಸಂತೋಷಪಟ್ಟುಕೊಂಡಿದ್ದರೂ ತನ್ನ ಸಂತೋಷ

ವನ್ನು ಬಹಿರಂಗಪಡಿಸಿರಲಿಲ್ಲ. ಲಿಂಕನ್ನಿನ ಅಧಿಕಾರದ ಅವಧಿಯು ೧೮೬೪ಕ್ಕೆ ಮುಗಿಯುತ್ತಿದ್ದುದನ್ನೇ ಸದಾ ಇದಿರುನೋಡುತ್ತಿದ್ದ ಅವನ ಪ್ರತಿಕಕ್ಷಿಗಳು ಮೆಕ್‌ಕ್ಲೆಲನ್ನನಿಗೆ ೧೮೬೨ ರಲ್ಲಿ ಸೇನಾಧಿಪತ್ಯವು ತಪ್ಪಿದುದಿನಿಂದಲೂ ಅವನೊಡನೆ ಸೇರಿಕೊಂಡು ಲಿಂಕನ್ನನನ್ನು ದೂಷಿಸುತ್ತಾ ಮೆಕ್‌ಕ್ಲೆಲನ್ನನ್ನೇ ದೇಶಾಧ್ಯಕ್ಷನನ್ನಾಗಿ ಮಾಡಿಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದರು. ಈ ವಿಷಯವನ್ನು ಲಿಂಕನ್ನನು ತಿಳಿದುಕೊಂಡಿದ್ದರೂ ಸ್ವಲ್ಪವಾದರೂ ಚಿಂತಿಸದಿದ್ದನು. ಅವನ ಕಡೆಯವರು ಮಾತ್ರ ಮೆಕ್‌ಕ್ಲೆನನ್ನನಿಗೆ ಅವಕಾಶಕೊಡಕೂಡದೆಂದು ಪ್ರತಿಕ್ರಿಯೆಗಳನ್ನು ಮಾಡುತ್ತಿದ್ದರು.

೫. ಯುದ್ಧದ ಪಾಡಿಗೆ ಯುದ್ಧವು ನಡೆಯುತ್ತಿದ್ದಿತು. ಚುನಾವಣೆಯ ಪಾಡಿಗೆ ಚುನಾವಣೆಯು ನಡೆಯಿತು. ಚುನಾವಣೆಯ ಫಲಿತಾಂಶವನ್ನು ಕಂಡುಹಿಡಿದಾಗ ಲಿಂಕನ್ನಿಗೆ ಹೆಚ್ಚು ಅಭಿಮತಗಳು ದೊರೆತಿದ್ದುದರಿಂದ ಅನೇಕರು ಯುದ್ಧವು ಶೀಘ್ರದಲ್ಲಿಯೇ ಕೊನೆಗಾಣುವುದೆಂದು ಸಂತೋಷಿಸಿದರು. ಮೆಕ್‌ಕ್ಲೆಲೆನ್ನನು ಮಾತ್ರ ತನಗೆ ಆಗಿದ್ದ ಆಶಾಭಂಗವನ್ನು ತಡೆದುಕೊಳ್ಳಲಾರದೆ ತನಗಿದ್ದ ಸಣ್ಣ ಸೈನ್ಯಾಧಿಕಾರವನ್ನು ತ್ಯಜಿಸಿ ಎಲ್ಲಿಗೋ ಹೊರಟುಹೋದನು.

೬. ಕರ್ತವ್ಯಪರಾಯಣನಾಗಿದ್ದ ಲಿಂಕನ್ನನು ದಿನದಿನಕ್ಕೂ ಯುದ್ಧರಂಗದ ಪ್ರತಿಯೊಂದು ವೃತ್ತಾಂತವನ್ನೂ ತರಿಸಿಕೊಂಡು ಕಾಲಕಾಲಕ್ಕೆ ಸೇನಾಧಿಪತಿಗಳಿಗೆ ಪ್ರೋತ್ಸಾಹವನ್ನುಂಟುಮಾಡುತ್ತ ಯುದ್ಧದಲ್ಲಿ ಗಾಯಗಂಡಿದ್ದ ಸೈನಿಕರನ್ನು ತಾನೇ ವಿಚಾರಿಸುತ್ತ ಸೈನ್ಯಕ್ಕೆ ಬೇಕಾದ ಅನುಕೂಲ್ಯಗಳನ್ನು ಒದಗಿಸಿಕೊಡುತ್ತ ಇದ್ದನು. ಆದುದರಿಂದ ಉತ್ತರೇಯರ ಸೈನ್ಯದಲ್ಲೆಲ್ಲಾ ಲಿಂಕನ್ನಿನ ವಿಷಯದಲ್ಲಿ ಭಕ್ತ್ಯುತ್ಸಾಹಗಳು ತುಂಬಿ ತುಳುಕುತ್ತಿದ್ದುವು. ಉತ್ಸಾಹದಿಂದ ಯುದ್ಧಗಳನ್ನು ನಡೆಸುತ್ತಿದ್ದ ಗ್ರಾಂಟನ ಕೈಕೆಳಗೆ ವಿಲಿಯಮ್ ಶರ್ಮನ್ ಎಂಬೊಬ್ಬ ಅಧಿಕಾರಿಯಿದ್ದನು. ಅವನು ಒಂದು ಕಡೆಯಿಂದ ದಾಕ್ಷಿಣಾತ್ಯರ ರಾಜ್ಯದೊಳಕ್ಕೂ ನುಗ್ಗಲು ಮೊದಲುಮಾಡಿದನು. ದಾಕ್ಷಿಣಾತ್ಯರ ಮುಖ್ಯಪಟ್ಟಣವಾಗಿದ್ದ ರಿಚ್‌ಮಂಡ್ ಪಟ್ಟಣವನ್ನು ವಶಪಡಿಸಿಕೊಂಡರೆ ಶತ್ರುಗಳ ಹೊಮ್ಮು ಮುರಿಯು

ವುದೆಂದು ಲಿಂಕನ್ನನು ಯೋಚಿಸಿದ್ದನು. ಗ್ರ್ಯಾಂಟನೂ ಹಾಗೆಯೇ ಯೋಚಿಸುತ್ತಿರುವಾಗ, ಶರ್ಮನನು ರಿಚ್‌ಮಂಡಿನ ಕಡೆಗೇ ನುಗ್ಗುತ್ತಿದ್ದನು. ಶರ್ಮನ್ನಿನ ಸಣ್ಣವಯಸ್ಸನ್ನು ನೋಡಿ ಮೊದಮೊದಲು ದಾಕ್ಷಿಣಾತ್ಯರು ಬಹಳ ಅಲಕ್ಷ್ಯದಿಂದ ಅವನನ್ನು ಹಾಸ್ಯಮಾಡುತ್ತಿದ್ದರು. ಆದರೆ ಅವನು ಅತಿರಭಸದಿಂದ ಮುಂದುಮುಂದಕ್ಕೆ ನುಗ್ಗಿಬರುತ್ತಿದ್ದುದನ್ನು ಕಂಡು ದಾಕ್ಷಿಣಾತ್ಯರಿಗೆ ಕಡೆಕಡೆಗೆ ಹೆದರಿಕೆಯುಂಟಾಗತೊಡಗಿತು. ಶರ್ಮನನು ಸ್ವಲ್ಪವಾದರೂ ಹಿಂದೆಗೆಯದೆ ಯುದ್ಧಕ್ಕೆ ನುಗ್ಗುತ್ತಾ ಕ್ರಿಸ್‌ಮಸ್ ಹಬ್ಬದ ಹೊತ್ತಿಗೆ ಸವನ್ನ ಎಂಬ ಪಟ್ಟಣವನ್ನು ವಶಪಡಿಸಿಕೊಂಡು ಅದನ್ನು ಲಿಂಕನ್ನಿಗೆ ಕ್ರಿಸ್‌ಮಸ್ ಕಾಣಿಕೆಯಾಗಿ ಒಪ್ಪಿಸಿದನು. ಈ ನಡುವೆ ಗ್ರ್ಯಾಂಟನು ಮುಂದಕ್ಕೆ ನುಗ್ಗಿ ರಿಚ್‌ಮಂಡ್ ಪಟ್ಟಣಕ್ಕೆ ಬಲವಾಗಿ ಮುತ್ತಿಗೆಹಾಕಿದನು.

೩. ಈ ಪರಿಸ್ಥಿತಿಯನ್ನು ಕಂಡು ದಾಕ್ಷಿಣಾತ್ಯರಿಗೆಲ್ಲಾ, ಅವರಲ್ಲೂ ಮುಖ್ಯವಾಗಿ ಧನಿಕರಿಗೆ, ಅತ್ಯಂತ ಚಿಂತೆಯುಂಟಾಗಿದ್ದಿತು. ಯುದ್ಧಕ್ಕೆ ಪ್ರಾರಂಭವಾದ ಒಂದು ವರ್ಷದಲ್ಲಿಯೇ ದಾಕ್ಷಿಣಾತ್ಯರ ಸರ್ಕಾರಿ ಬೊಕ್ಕಸದಲ್ಲಿ ನಾಣ್ಯವಿಲ್ಲದೆ ಹೋದುದರಿಂದ ದಾಕ್ಷಿಣಾತ್ಯ ಸರ್ಕಾರದವರು ನೋಟುಗಳನ್ನು ರೂಢಿಗೆ ತಂದರು. ಆದುದರಿಂದ ಪ್ರಜೆಗಳಲ್ಲಿದ್ದ ನಾಣ್ಯಗಳೆಲ್ಲವೂ ಕ್ರಮವಾಗಿ ಮಾಯವಾಗುತ್ತಬಂದು ಎಲ್ಲೆಲ್ಲೂ ನೋಟುಗಳೇ ಪ್ರಚಾರಕ್ಕೆ ಬಂದುವು. ಈ ನಡುವೆ ರಿಚ್‌ಮಂಡ್ ನಗರವು ಶತ್ರುಗಳ ವಶವಾದರೆ ತಮ್ಮಲ್ಲಿದ್ದ ನೋಟುಗಳ ಪಾಡೇನೆಂದು ಪ್ರಜೆಗಳು ಬಹು ಭಯಪಟ್ಟು ನಾಣ್ಯವನ್ನೇ ಕೊಡಬೇಕೆಂದು ಸರ್ಕಾರದವರನ್ನು ಪೀಡಿಸತೊಡಗಿದರು. ಆದುದರಿಂದ ಎಲ್ಲೆಲ್ಲಿಯೂ ಗದ್ದಲವು ನಡೆಯುತ್ತಿದ್ದಿತು.

೪. ರಿಚ್‌ಮಂಡ್ ಪಟ್ಟಣದ ಮುತ್ತಿಗೆಯು ನಾಲ್ಕು ವರುಷಗಳಷ್ಟು ದೀರ್ಘಕಾಲ ನಡೆಯಿತು. ಇದಕ್ಕೆ ಆ ಪಟ್ಟಣಿಗರು ಜೀವದಾಸೆಯನ್ನು ತೊರೆದು ಕಾದಾಡುತ್ತಿದ್ದುದೇ ಕಾರಣ. ಈ ನಡುವೆ ನೋಟುಗಳನ್ನು ಬದಲಾಯಿಸಿಕೊಳ್ಳುವ ವಿಷಯವಾಗಿ ಗೊಂದಲವು ಎದ್ದಿದ್ದುದರಿಂದ ಆ ನಗರಿಯ ರಕ್ಷಣೆಗಾಗಿ ಸೈನ್ಯಕ್ಕೆ ಜನಗಳು ಸೇರುವುದು ಕಡಿಮೆಯಾಗುತ್ತಬಂದಿದ್ದಿತು. ಆದುದರಿಂದ ಅಲ್ಲಿಯ ಸೈನ್ಯಾಧಿಕಾರಿಯು ಸಿಕ್ಕಿದವರನ್ನು ಬಲಾ

ತ್ಕರಿಸಿ ಸೈನ್ಯಕ್ಕೆ ಸೇರಿಸುತ್ತಿದ್ದನು. ಒತ್ತಾಯಕ್ಕಾಗಿ ಮಾಡುವ ಕೆಲಸವು ಎಂದಿಗಾದರೂ ಬಹಳ ಸಮರ್ಪಕವಾಗಿರುವುದೆ? ಆದುದರಿಂದ ರಾಜಧಾನಿಯು ಒಳಗಿದ್ದ ಸೈನ್ಯದಲ್ಲಿ ಅತೃಪ್ತಿಯೂ ಅಂತಃಕಲಹವೂ ಅವ್ಯವಸ್ಥೆಯೂ ಹೆಚ್ಚು ತ್ತಿದ್ದುವು. ಇದಕ್ಕೆ ಸರಿಯಾಗಿ ಗ್ರ್ಯಾಂಟನ ಮುತ್ತಿಗೆಯೂ ಪ್ರಬಲವಾಗು ತ್ತಿದ್ದಿತು. ಹೊರಗಿನ ಸಮಾಚಾರವು ಒಳಕ್ಕೂ ಒಳಗಿನ ಸಮಾಚಾರವು ಹೊರಕ್ಕೂ ತಿಳಿಯದೇ ಹೋಗಿದ್ದಿತು. ಆಹಾರಸಾಮಗ್ರಿಗಳು ಮುಗಿಯು ತ್ತಬಂದಿದ್ದುವು ಸೈನ್ಯವು ದಿನದಿನಕ್ಕೂ ಕ್ಷಯವಾಗುತ್ತಿದ್ದಿತು. ಆದುದ ರಿಂದ ಇನ್ನು ಮುಂದೆ ಯುದ್ಧಮಾಡುವುದು ವ್ಯರ್ಥವೆಂದು ತಿಳಿದು ಲೀಯು ಸಂಧಿಗಾಗಿ ಗ್ರ್ಯಾಂಟಿಗೆ ಹೇಳಿಕಳುಹಿಸಿದನು. ಅವನು ಆ ವೃತ್ತಾಂತ ವನ್ನು ಲಿಂಕನ್ನಿಗೆ ತಿಳಿಸಲು, ಲಿಂಕನ್ನನು ದೃಢಮನಸ್ಕನಾಗಿ ರಿಚ್‌ಮಂಡನ್ನು ತಮಗೆ ಒಪ್ಪಿಸಿ ಸಂಸರ್ಗವನ್ನೊಪ್ಪಿಕೊಂಡ ಪಕ್ಷದಲ್ಲಿ ಸಂಧಿಗೆ ಒಪ್ಪಬಹು ದೆಂದು ಗ್ರ್ಯಾಂಟಿಗೆ ಹೇಳಿಕಳುಹಿಸಿದನು. ಆದರೆ ಇಂತಹ ಅವಮಾನಕರ ವಾದ ಸಂಧಿಗೆ ಲೀಯು ಒಪ್ಪದೆಹೋದನು.

೯. ಇಷ್ಟುಹೊತ್ತಿಗೆ ಸರಿಯಾಗಿ ಲೀಗೆ ಎಲ್ಲಿಂದಲೋ ಸ್ವಲ್ಪ ಆಹಾರಸಾಮಗ್ರಿಗಳು ದೊರೆತುದರಿಂದ ಅವನು ಮನಸ್ಸನ್ನು ಕಲ್ಲುಮಾಡಿ ಕೊಂಡು ಪುನಃ ಯುದ್ಧಕ್ಕೆ ನಿಂತನು. ಮತ್ತೆ ಕೆಲವುದಿನ ಯುದ್ಧವು ನಡೆದ ಬಳಿಕ ದಾಕ್ಷಿಣಾತ್ಯರಿಗಿದ್ದ ಧೈರ್ಯವೆಲ್ಲಾ ಮಾಯವಾಗಿ, ಸಂಧಿಮಾಡಿ ಕೊಳ್ಳಬೇಕೆಂದು ಲೀಗೆ ಒತ್ತಾಯಮಾಡುತ್ತಾ ಬಂದರು. ತನ್ನ ಕಡೆಯವ ರಿಗೇ ಅಷ್ಟು ಬೇಸರದಿರುವಾಗ ತಾನು ಯುದ್ಧಮಾಡಿ ಪ್ರಯೋಜನವಿಲ್ಲವೆಂದು ತಿಳಿದು ರಾಜಧಾನಿಯನ್ನು ಗ್ರ್ಯಾಂಟಿಗೆ ಒಪ್ಪಿಸಿಬಿಟ್ಟು ತಾನೂ ಅವನಿಗೆ ವಶ ವಾದನು.

೧೦. ಈ ಸುದ್ದಿಯನ್ನು ಕೇಳಿ ಲಿಂಕನ್ನಿಗೆ ಬಹಳ ಸಂತೋಷ ವಾಯಿತು. ಆದರೆ ಅವರ ಕಷ್ಟವನ್ನು ಕಂಡು ಅವನ ಮೃದುವಾದ ಮನಸ್ಸು ಕರಗಿದ್ದರೂ ಮೊದಲೇ ಕಷ್ಟಪಟ್ಟಿದ್ದ ಶತ್ರುಗಳಿಗೆ ಮತ್ತಷ್ಟು ನಷ್ಟಪಡಿಸಬಾ ರದೆಂದು ತಿಳಿದು, ಅವರಲ್ಲಿದ್ದ ದಾಸರಿಗೆ ಬಂಧನವಿಮೋಚನೆಯನ್ನುಂಟುಮಾ ಡುವುದಕ್ಕಾಗಿ ನಲವತ್ತುಕೋಟಿ ಡಾಲರುಗಳನ್ನು ಕೊಡಬೇಕೆಂದು ಮನ ಸ್ಸುಮಾಡಿದ್ದನು. ಆದರೆ ಸೆನೆಟ್‌ಸಭೆಯವರೊಬ್ಬರೂ ಅದಕ್ಕೆ ಒಪ್ಪದಿದ್ದುದ ರಿಂದ ಆ ಉದ್ದೇಶವನ್ನು ಲಿಂಕನ್ನನು ಬಿಟ್ಟುಬಿಡಬೇಕಾಯಿತು.

# ಹದಿನೇಳನೆಯ ಪ್ರಕರಣ

## ಘೋರಕೃತ್ಯವು.

೧. ಲಿಂಕನ್ನಿನ ಹಿತಚಿಂತಕರಲ್ಲಿ ಅನೇಕರು ದೇಶಕ್ಕೆ ಬಂದಿದ್ದ ಸಂಕಷ್ಟವು ಆ ರೀತಿಯಲ್ಲಿ ನಿವಾರಣೆಯಾಗಿದ್ದುದನ್ನು ನೋಡಿ ಇನ್ನು ತಮ್ಮ ಅಧ್ಯಕ್ಷನು ಬಹಳವಾಗಿ ದೇಶವನ್ನು ಅಭಿವೃದ್ಧಿಗೆ ತರುವನೆಂದು ನಂಬಿಕೊಂಡಿದ್ದರು. ಆದರೆ ದೈವೇಚ್ಛೆಯು ಬೇರೆಯಾಗಿದ್ದುದರಿಂದ ಸ್ವಲ್ಪ ಕಾಲದಲ್ಲಿಯೇ ಈ ವಿಷಯದಲ್ಲಿ ಲಿಂಕನ್ನಿನ ಹಿತಚಿಂತಕರಿಗೆ ಆಶಾಭಂಗವಾಯಿತು.

೨. ದೇಶಾಧ್ಯಕ್ಷನಾದಂದಿನಿಂದ ಲಿಂಕನ್ನನ್ನು ಕೊಂದುಹಾಕಬೇಕೆಂದು ಅನೇಕ ಪ್ರಯತ್ನಗಳು ನಡೆಯುತ್ತಿದ್ದರೂ, ಈ ವರೆಗೂ ಅವನು ಅಪಾಯಕ್ಕೊಳಗಾಗಿರಲಿಲ್ಲ. ಆ ಹಲವು ಆಪತ್ತುಗಳು ದೈವೇಚ್ಛೆಯಿಂದಲೋ ಮನುಷ್ಯಪ್ರಯತ್ನದಿಂದಲೋ ಹಾಗೆಹಾಗೆಯೇ ತೊಲಗಿ ಹೋಗುತ್ತಿದ್ದುವು. ಅದನ್ನು ಕಂಡು ಲಿಂಕನ್ನಿನ ಶತ್ರುಗಳೆಲ್ಲರಿಗೂ ಬರುಬರುತ್ತಾ ದ್ವೇಷವು ರೂಢಮೂಲವಾಗುತ್ತಿದ್ದಿತು. ಮೊದಲು ಲಿಂಕನ್ನನು ಶತ್ರುಗಳ ತಂತ್ರಗಳಿಗೆ ಹೆದರದೆ ಧೈರ್ಯಶಾಲಿಯಾಗಿ ಇರುತ್ತಿದ್ದರೂ ಕಡೆಕಡೆಗೆ ಅವನ ಮನಸ್ಸಿನಲ್ಲಿ ಪ್ರಾಣಭಯವು ತಲೆದೋರಿದ್ದಿತು.

೩. ತನಗೆ ಅಪಜಯವಾದಕೂಡಲೆ ಲಿಂಕನ್ನಿನ ವಿಷಯದಲ್ಲಿ ಕೆಲವರು ಬಹಳ ಪ್ರಬಲವಾದ ಒಳಸಂಚುಗಳನ್ನು ನಡೆಯಿಸುತ್ತ ಬಂದರು. ಅವರ ಒಳಗುಟ್ಟುಗಳಿಗೆ ಸಂಬಂಧಪಟ್ಟ ಸಂಗತಿಗಳು ಲಿಂಕನ್ನಿಗೆ ಸ್ವಲ್ಪ ಸ್ವಲ್ಪ ಗೊತ್ತಾಗುತ್ತಿದ್ದುವು "ಲಿಂಕನ್! ನಿನ್ನ ಪ್ರಾಣವನ್ನು ಉಳಿಸಿಕೊ! ಎಂಬ ವಾಕ್ಯವನ್ನು ಮಾತ್ರ ಬರೆದಿದ್ದ ಅನೇಕ ಕಾಗದಗಳು ಆಗಾಗ ಲಿಂಕನ್ನಿಗೆ ಬರುತ್ತಿದ್ದುವು. ಅದನ್ನು ನೋಡಿ ಲಿಂಕನ್ನಿನ ಸ್ನೇಹಿತರು, ಮನಸ್ಸಿನಲ್ಲಿಯೇ ಹೆದರುತ್ತ ಏನಾದರೂ ಮಾಡಿ ಅವನನ್ನು ಶತ್ರುಗಳ ಕೈಗೆ ಸಿಕ್ಕಿಸಬಾರದೆಂದು ದೃಢಮನಸ್ಸುಮಾಡಿದ್ದರು. ಆದುದರಿಂದ ಅವರು ಲಿಂಕನ್ನಿಗೆ ಅಂಗರಕ್ಷಕಭಟರನ್ನು ನೇಮಿಸಿಕೊಳ್ಳುವಂತೆ ಬೋಧಿಸಿದರು. ಆದರೆ ಲಿಂಕನ್ನನು ತನ್ನ ಹಿತಚಿಂತಕರನ್ನು ಹೆದರತಕ್ಕ ಆವಶ್ಯಕವಿಲ್ಲವೆಂದು ಸಮಾಧಾನ

ಪಡಿಸುತ್ತಿದ್ದನು ಅಂಗರಕ್ಷಕಭಟರನ್ನು ನಿಯಮಿಸಿಕೊಂಡರೆ ಶತ್ರುಗಳು ತನ್ನನ್ನು ಹೇಡಿಯೆಂದು ತಿಳಿಯುವರೆಂದೂ, ಹಾಗೆ ನೇಮಿಸಿಕೊಳ್ಳದಿದ್ದರೆ ಶತ್ರುಗಳಿಗೆ ಹೆದರಿಕೆಯುಂಟಾಗಿ ಅವರು ಪ್ರಯತ್ನಗಳನ್ನು ನಿಲ್ಲಿಸುವರೆಂದೂ ಲಿಂಕನ್ನನು ಭಾವಿಸಿದ್ದನು; ಆದರೂ ಸಂಶಯಾಸ್ಪದರಾದ ಜನಗಳನ್ನು ತನ್ನ ಬಳಿಗೆ ಬರಗೊಡುತ್ತಿರಲಿಲ್ಲ.

೪. ರಿಚ್‌ಮಂಡ್ ಪಟ್ಟಣವು ಕೈವಶವಾದಕೂಡಲೆ ಯುದ್ಧವು ಮುಗಿದಂತಾದರೂ, ಅಲ್ಲಲ್ಲಿ ಸಣ್ಣಪುಟ್ಟ ಕದನಗಳು ನಡೆಯುತ್ತಿದ್ದುದರಿಂದ ದೇಶದಲ್ಲೆಲ್ಲಾ ಶಾಂತಿಯುಂಟಾಗಬೇಕಾದರೆ ಸ್ವಲ್ಪಕಾಲಬೇಕಾಯಿತು ಇದೂ ಅಲ್ಲದೆ ದಾಕ್ಷಿಣಾತ್ಯರ ಪ್ರಮುಖನಾದ ಜೆಫರ್‌ಸನ್ನನು ವಶವಾಗಿರಲಿಲ್ಲವಾದುದರಿಂದ, ಅವನನ್ನು ಹಿಡಿಯುವವರೆಗೆ ಸಂಪೂರ್ಣವಾಗಿ ಶಾಂತಿಯುಂಟಾಗಲು ಅವಕಾಶವಿರಲಿಲ್ಲ. ಅವನನ್ನು ಹಿಡಿಯುವುದಕ್ಕಾಗಿ ಔತ್ತರೇಯ ಸೈನ್ಯವು ಊರಿಂದೂರಿಗೆ ತಿರುಗುತ್ತಿದ್ದಿತು

೫. ಈ ನಡುವೆ ಸಂಧಿಯ ಪ್ರಯತ್ನಗಳನ್ನು ಲಿಂಕನ್ನನು ನಡೆಯಿಸುತ್ತಲೇ ಇದ್ದನು ಔತ್ತರೇಯರಲ್ಲಿ ಅನೇಕರಿಗೆ ತಮ್ಮ ಹಗೆಗಳಮೇಲೆ ಮುಯ್ಯಿತೀರಿಸಿಕೊಳ್ಳಬೇಕೆಂದು ಕುತೂಹಲವಿದ್ದರೂ, ದೂರದರ್ಶಿಯೂ ರಾಜತಂತ್ರಜ್ಞನೂ ಆದ ಲಿಂಕನ್ನನು ಮಧ್ಯಕಾಲದಲ್ಲಿ ತಮಗೆ ಉಂಟಾಗಿದ್ದ ವೈರವನ್ನು ಮರೆಯುವುದೇ ದೇಶಾಭ್ಯುದಯಕ್ಕೆ ಸಹಾಯಕಾರಿಯೆಂದು ಚೆನ್ನಾಗಿ ತಿಳಿದು ಔತ್ತರೇಯರನ್ನು ನಯಭಯಗಳಿಂದ ದಾರಿಗೆ ತರುತ್ತಿದ್ದನು. ಆದರೂ ಅನೇಕಕಷ್ಟಗಳನ್ನು ಅನುಭವಿಸಿದ್ದ ಔತ್ತರೇಯರಿಗೆ ಲಿಂಕನ್ನಿನ ಸೌಮ್ಯಮಾರ್ಗವು ಸರಿಬೀಳಲಿಲ್ಲ

೬. ಸಂಧಿಯ ನಿಯಮಗಳನ್ನು ಗೊತ್ತುಮಾಡುವುದಕ್ಕಾಗಿ ರಾಷ್ಟ್ರೀಯಸಭೆಯೊಂದು ಕೂಡಿತು. ಅದರಲ್ಲಿ ಲಿಂಕನ್ನನು ಸದಸ್ಯರಿಗೆ ದಾಕ್ಷಿಣಾತ್ಯರೂ ಹೊರಗಿನವರಲ್ಲವೆಂದೂ ಸೋತವರ ಮೇಲೆ ಕೈಮಾಡುವುದ ಶೂರತನವಲ್ಲವೆಂದೂ ದಾಕ್ಷಿಣಾತ್ಯರನ್ನು ಅವಮಾನಪಡಿಸಿದರೆ ತಮ್ಮದೇಶದ ಒಂದು ಪಕ್ಷಕ್ಕೆ ಊನವಾದಂತಾಗುವುದೆಂದೂ ಒಂದುವೇಳೆ ತಮ್ಮ ಪ್ರತಿಪಕ್ಷಿಗಳ ಮೇಲೆ ತಡೆಯಲಾರದ ಭಾರವನ್ನು ಹೇರಿದರೂ ಅದರಿಂದ ಇತರ ರಾಜ್ಯಗಳವರು ಸಂಸರ್ಗವನ್ನು ನೋಡಿ ನಗುವರೆಂದೂ

ಬಹಳವಾಗಿ ಬೋಧಿಸಿದನು. ಲಿಂಕನ್ನನು ಎಷ್ಟೇ ಬೋಧಿಸಿದರೂ ಹಟವನ್ನು ಕಟ್ಟಿದ್ದ ಆ ಸದಸ್ಯರ ಮನಸ್ಸನ್ನು ತಿರುಗಿಸಲು ಆಗಲಿಲ್ಲ. ಇದಕ್ಕೆ ಸರಿಯಾಗಿ ದಾಕ್ಷಿಣಾತ್ಯರ ಅದೃಷ್ಟವೂ ಚೆನ್ನಾಗಿಇರಲಿಲ್ಲವಾದುದರಿಂದ; ಲಿಂಕನ್ನಿಗೆ ಅನೇಕಸಾರಿ ಸೂಚನೆಕೊಟ್ಟಿದ್ದ ಅಪಾಯವು ಕೆಲವು ದಿನಗಳೊಳಗಾಗಿ ಸಂಘಟಿಸಿತು.

೭. ಲಿಂಕನ್ನನನ್ನು ಕೊಲ್ಲಬೇಕೆಂದು ಪ್ರಯತ್ನಿಸುತ್ತಿದ್ದವರಲ್ಲಿ ಜಾನ್ ವಿಲ್ಕ್ಸ್ ಬೂತ್ ಎಂಬವನು ಪ್ರಮುಖನು. ಅವನು ತನ್ನ ಕಡೆಯವರನ್ನು ಸೇರಿಸಿಕೊಂಡು ಅನೇಕಸಾರಿ ಪ್ರಯತ್ನಿಸಿದ್ದರೂ ಸಫಲವಾಗದಿದ್ದುದರಿಂದ, ಕಡೆಗೆ ಹೇಗಾದರೂಮಾಡಿ ಲಿಂಕನ್ನನ್ನೂ ಅವನ ಸ್ನೇಹಿತನಾದ ಸೀವರ್ಡನ್ನೂ ಒಟ್ಟಿಗೆ ಕೊಲ್ಲಬೇಕೆಂದ ದೃಢಸಂಕಲ್ಪನಾಗಿ ಸಮಯವನ್ನೇ ಕಾಯುತ್ತಿದ್ದನು. ಹೀಗಿರಲು ಗುಡ್ ಫ್ರೈಡೆ ಎಂಬ ಹಬ್ಬದ ದಿನ ಜನರು ಕ್ರೈಸ್ತದೇವಾಲಯಗಳಲ್ಲಿ ಸೇರಿ ಬಹಳ ಸಂತೋಷದಿಂದ ಪ್ರಾರ್ಥನಾದಿಗಳನ್ನು ನಡೆಸುತ್ತಿದ್ದರು. ಅದಕ್ಕೆ ಹಿಂದಿನ ನಾಲ್ಕುವರ್ಷಗಳ ಕಾಲದಲ್ಲಿಯೂ ಯುದ್ಧವು ನಡೆಯುತ್ತಿದ್ದುದರಿಂದ ಅಂತಹ ಹಬ್ಬಗಳಲ್ಲಿ ಯುದ್ಧಕಾಲದಲ್ಲಿ ಜನರಿಗೆ ವಿಶೇಷ ಉತ್ಸಾಹವಿರಲಿಲ್ಲ. ಈ ವರ್ಷದ ಹಬ್ಬದ ಹೊತ್ತಿಗೆ ಯುದ್ಧವೆಲ್ಲವೂ ನಿಂತುಹೋಗಿ ರಣರಂಗದಲ್ಲಿದ್ದ ಸೈನಿಕರು ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದ್ದುದರಿಂದ ಎಲ್ಲೆಲ್ಲಿಯೂ ಸಂತೋಷವು ಹೆಚ್ಚಿ ಜನರು ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ನಾಟಕಶಾಲೆಗಳಲ್ಲಿ ನಾಟಕಗಳೂ ಇತರ ವಿನೋದಸ್ಥಳಗಳಲ್ಲಿ ಬಗೆಬಗೆಯ ವಿಹಾರಗಳೂ ನಡೆಯುವುದಕ್ಕೆ ಏರ್ಪಾಡುಗಳನ್ನು ಮಾಡಿದ್ದರು.

೮. ಆದಿನ ಬೆಳಗ್ಗೆ ಲಿಂಕನ್ನನು ತನ್ನ ಹೆಂಡತಿಯೊಡನೆ ಹೊರಟು ಪಟ್ಟಣದ ಮುಖ್ಯಭಾಗಗಳನ್ನೆಲ್ಲಾ ನೋಡಿಕೊಂಡು ಬಂದನು. ಸೀವರ್ಡನಿಗೆ ಅಸ್ವಸ್ಥತೆಯುಂಟಾಗಿದ್ದುದನ್ನು ಕೇಳಿ ಅವನ ಮನೆಗೂ ಹೋಗಿ ಅವನ ದೇಹಸ್ಥಿತಿಯನ್ನು ವಿಚಾರಿಸಿ ಅವನಿಗೆ ಧೈರ್ಯಹೇಳಿ ಹಿಂದಿರುಗಿದನು. ಈ ಇಬ್ಬರುಮಿತ್ರರುಗಳ ಸಂಭಾಷಣೆಗೆ ಇದೇ ಕೊನೆ. ಹೀಗೆ ಹಗಲಿನಲ್ಲಿ ವಿನೋದದಿಂದಿದ್ದು ರಾತ್ರಿಯಾಗುತ್ತಲೇ ಲಿಂಕನ್ನನು ತನ್ನ ಜೊತೆಯಲ್ಲಿ ಮಿಸ್ ಹ್ಯಾರಿಸ್ (Miss Harris) ಎಂಬಾಕೆಯನ್ನೂ ರಾತ್ ಬೋ

ರ್ನ (Rath Borne) ಎಂಬಾತನನ್ನೂ ಕರೆದುಕೊಂಡು ಫೋರ್ಡ್ (Ford) ಎಂಬ ನಾಟಕಮಂದಿರಕ್ಕೆ ಹೋದನು.

೯. ಅಷ್ಟು ಹೊತ್ತಿಗೆ ನಾಟಕಮಂದಿರದಲ್ಲಿ ನಾಟಕಕ್ಕೆ ಮೊದಲಾಗಿದ್ದಿತು. ಅಲ್ಲಿದ್ದವರೆಲ್ಲರೂ ಪ್ರೇಕ್ಷಣದಲ್ಲಿ ನಿರತರಾಗಿದ್ದರು. ನಾಟಕಶಾಲೆಯನ್ನು ಲಿಂಕನ್ನನು ಪ್ರವೇಶಿಸಿದಕೂಡಲೆ ಅಲ್ಲಿದ್ದ ಪ್ರೇಕ್ಷಕರೆಲ್ಲರೂ ಜಯಘೋಷವನ್ನು ಮಾಡುತ್ತಾ ತಮ್ಮತಮ್ಮ ಪೀಠಗಳಿಂದ ಎದ್ದುನಿಂತರು. ಲಿಂಕನ್ನನು ರಂಗಸ್ಥಾನದ ಇದಿರಿನಲ್ಲಿ ತನಗಾಗಿ ಏರ್ಪಡಿಸಿದ್ದ ಒಂದು ಕುರ್ಚಿಯ ಬಳಿಗೆ ಹೋದನು. ಆ ಪೀಠಕ್ಕೆ ಸಂಸರ್ಗದ ಬಾವುಟದಿಂದ ಅಲಂಕರಿಸಿದ್ದರು. ಲಿಂಕನ್ನನು ಆ ಪೀಠದಲ್ಲಿ ಕುಳಿತುಕೊಂಡಕೂಡಲೆ ಉಳಿದವರೂ ತಮ್ಮತಮ್ಮ ಸ್ಥಳಗಳಲ್ಲಿ ಕುಳಿತರು. ಕೂಡಲೆ ನಾಟಕಪ್ರದರ್ಶನಕ್ಕೆ ಪುನಃ ಮೊದಲಾಯಿತು. ಇಷ್ಟು ಹೊತ್ತಿಗೆ ರಾತ್ರಿ ಸುಮಾರು ಹತ್ತು ಗಂಟೆಯಾಗಿದ್ದಿತು. ಜನರೆಲ್ಲರೂ ರಂಗಸ್ಥಾನದಲ್ಲಿ ನಡೆಯುತ್ತಿದ್ದ ಪ್ರದರ್ಶನದಲಿ ಆಸಕ್ತರಾಗಿದ್ದುದರಿಂದ ಎಲ್ಲೆಲ್ಲೂ ನಿಶ್ಶಬ್ದವಾಗಿದ್ದಿತು. ಅಷ್ಟರಲ್ಲಿ ಅಕಸ್ಮಾತ್ತಾಗಿ ಬಂದೂಕವನ್ನು ಹಾರಿಸಿದ ಶಬ್ದವುಂಟಾಯಿತು. ಜನರೆಲ್ಲರೂ ದಿಗ್ಭ್ರಾಂತರಾಗಿ ಅತ್ತಿತ್ತ ನೋಡುತ್ತಿದ್ದಾಗ, ಬೂತನು ಲಿಂಕನ್ನಿನ ಬಳಿಗೆ ಓಡಿಬರುತ್ತಿದ್ದನು ಇದನ್ನು ಕಂಡು ಸಮೀಪದಲ್ಲಿಯೇ ಇದ್ದ ರಾತ್ ಬೋರ್ನನು ಬೂತಿನ ಮೇಲೆ ಬಿದ್ದು ಅವನನ್ನು ಹಿಡಿದುಕೊಂಡು "ಕೊಲೆ! ಕೊಲೆ!" ಎಂದು ಕೂಗಿಕೊಂಡನು. ಆದರೆ ಬೂತನು ಬೋರನ್ನಿನ ಎದೆಗೆ ತಾನು ಬಚ್ಚಿಟ್ಟುಕೊಂಡಿದ್ದ ಈಟಿಯಿಂದ ಇರಿದು ರಂಗಸ್ಥಾನದ ಅಟ್ಟಣೆಯಮೇಲಕ್ಕೆ ಹಾರಿ ಓಡಿಹೋದನು. ಇಷ್ಟು ಹೊತ್ತಿಗೆ ಬಂದೂಕದ ಗುಂಡು ಬಂದು ಲಿಂಕನ್ನಿನ ಬೆನ್ನಿಗೆ ತಗುಲಿ ರಕ್ತವು ಧಾರಾಳವಾಗಿ ಹರಿದು ಅವನಿಗೆ ಜ್ಞಾನವುತಪ್ಪಿಹೋಗಿದ್ದಿತು. ಆದುದರಿಂದ ಅವನನ್ನು ಮನೆಗೆ ಹೊತ್ತುಕೊಂಡುಹೋದರು. ಅಲ್ಲಿ ಶೈತ್ಯೋಪಚಾರಮಾಡಿದರೂ ಫಲವಾಗಲಿಲ್ಲ. ನಾಲ್ಕೈದುಜನ ವೈದ್ಯರು ಬಂದು ಬಹಳ ಕಷ್ಟಪಟ್ಟರೂ ಲಿಂಕನ್ನಿಗೆ ಸ್ಮರಣೆಯುಂಟಾಗದೆ ಮೇಲುಸಿರಿಗೆ ಮೊದಲಾಗಿದ್ದಿತು.

೧೦. ಈ ಅಪಘಾತದಿಂದ ನಾಟಕವು ಯಾರಿಗೂ ಬೇಡವಾಯಿತು. ಪ್ರೇಕ್ಷಕರಲ್ಲಿ ಕೆಲವರು ತಮ್ಮ ತಮ್ಮ ಮನೆಗಳಿಗೆ ಹೋದರು,

ಉಳಿದ ಅನೇಕರು ಲಿಂಕನ್ನಿನ ಪಾಡು ಏನಾಯಿತೋ ಎಂದು ಬಹಳವಾಗಿ ಚಿಂತಿಸುತ್ತ ಅಲ್ಲಲ್ಲಿ ನಿಂತು ಮಾತನಾಡಿಕೊಳ್ಳುತ್ತಿದ್ದರು.

೧೧. ಈ ನಡುವೆ ಸೀವರ್ಡಿಗೂ ದೇಹಸ್ಥಿತಿಯು ಬಹಳಕೆಟ್ಟು ಜ್ಞಾನಾಜ್ಞಾನಕ್ಕೆ ಮೊದಲಾಗಿದ್ದಿತು. ಅವನು ಮಲಗಿದ್ದ ಮನೆಯ ಸುತ್ತಲೂ ಆಯುಧಪಾಣಿಗಳಾದ ಆಳುಗಳು ಬಹಳ ಎಚ್ಚರಿಕೆಯಿಂದ ಕಾದಿದ್ದರು. ಅತ್ತ ಲಿಂಕನ್ನಿನ ಅಕಾಲಮರಣಕ್ಕಾಗಿ ನಾಟಕಮಂದಿರದಲ್ಲಿ ಹಾಹಾಕಾರ ವಾಗುತ್ತಿರುವಲ್ಲಿ, ಇತ್ತ ಲೂಯಿ ಪೊವೆಲ್ (Lewis Powell) ಎಂಬೊಬ್ಬನು ತಾನು ವೈದ್ಯನ ಕಡೆಯವನೆಂದೂ ಸೀವರ್ಡಿನೊಡನೆ ಬಹಳ ಮುಖ್ಯವಾದ ಮಾತನಾಡಬೇಕಾಗಿದ್ದಿತೆಂದೂ ಹೇಳಿ ಹೊರಗಿನ ಕಾವಲುಗಾರರನ್ನು ವಂಚಿಸಿ ಸೀವರ್ಡನು ಮಲಗಿದ್ದ ಕೊಟಡಿಯ ಬಳಿಗೆ ಬಂದನು. ಅಲ್ಲಿ ಇಬ್ಬರು ಆಳುಗಳು ಕಾವಲಿದ್ದರು. ಇವರನ್ನು ಮೋಸಪಡಿಸಲಾಗಲಿಲ್ಲ. ಕಾವಲು ಗಾರರಿಗೆ ಸ್ವಲ್ಪಸಂದೇಹವಾಯಿತು. ತಮ್ಮೊಡೆಯನಲ್ಲಿಗೆ ಆಗಾಗ ಬರುತ್ತಿದ್ದ ವೈದ್ಯನೊಡನೆ ಇವನೆಂದೂ ಬಂದಿದ್ದಂತೆ ತೋರಲಿಲ್ಲ. ಅದೂಅಲ್ಲದೆ "ಸರಿರಾತ್ರಿಯಲ್ಲಿ ಜ್ಞಾನಾಜ್ಞಾನಿಯಾಗಿದ್ದ ಸೀವರ್ಡಿನೊಡನೆ ನೀನು ಮಾತ ನಾಡುವುದಾದರೂ ಏನನ್ನು? ಹೊರಕ್ಕೆಹೊರಟು ಹೋಗು" ಎಂದು ಕಾವಲು ಗಾರರು ಪೊವೆಲ್ಲನನ್ನು ಗದರಿಸಿಕೊಂಡರು. ಪೊವೆಲ್ಲನು ಇನ್ನು ಸ್ವಲ್ಪ ತಡಮಾಡಿದರೆ ಕಾರ್ಯವೆಲ್ಲಾ ಕೆಡುವುದೆಂದು ಬಗೆದು, ಸಿಂಹದಂತೆ ಅವರ ಮೇಲೆ ಹಾರಿಬಿದ್ದು ಅವರಿಬ್ಬರನ್ನೂ ನೆಲಕ್ಕೆ ಕೆಡಹಿ ಅವರು ಏಳುವುದಕ್ಕೆ ಮೊದಲೇ ಕೊಟಡಿಯೊಳಕ್ಕೆ ನುಗ್ಗಿ ಹಾಸಿಗೆಯ ಮೇಲೆ ಜ್ಞಾನವಿಲ್ಲದೆ ಬಿದ್ದಿದ್ದ ಸೀವರ್ಡಿನ ಎದೆಯಲ್ಲಿ ಕಟಾರಿಯಿಂದ ತಿವಿದು, ತನ್ನದಾರಿಗೆ ಅಡ್ಡ ಲಾಗಿ ಬಂದವರನ್ನೆಲ್ಲಾ ಘಾತಿಸಿ ಓಡಿಹೋದನು. ಇಷ್ಟೆಲ್ಲ ಒಂದೆರಡು ನಿಮಿಷಗಳಲ್ಲಿ ನಡೆದುಹೋಯಿತು. ಇಷ್ಟುಹೊತ್ತಿಗೆ ಲಿಂಕನ್ನನೂ ಮರಣೋ ನ್ಮುಖನಾಗಿದ್ದನು. ಮೊದಲೇ ಉತ್ಕ್ರಮಣಾವಸ್ಥೆಯಲ್ಲಿದ್ದ ಸೀವರ್ಡಿಗೆ ಘಾತುಕನಿಂದ ಇರಿತ ಉಂಟಾದಕೂಡಲೆ ಅವನ ಪ್ರಾಣವು ಹೊರಟು ಹೋಯಿತು. ಹೀಗೆ ಒಂದೇದಿನ ಪರಮಾಪ್ತಸ್ನೇಹಿತರಾಗಿದ್ದ ಈ ಇಬ್ಬ ರಿಗೂ ಮರಣವು ಒದಗಿದ್ದಿತು.

೧೨. ಜನರು ಬೆಳಕುಹರಿಯುವುದಕ್ಕೆ ಮುಂಚೆಯೇ ತಂಡತಂಡವಾಗಿ ಲಿಂಕನ್ನಿನ ಮನೆಯ ಸುತ್ತಲೂ ಮುತ್ತಿಕೊಂಡು ತಮ್ಮ ಅಧ್ಯಕ್ಷನ ಸ್ಥಿತಿಯು ಹೇಗಿರುವುದೋ ಎಂದು ಅತಿಕುತೂಹಲದಿಂದ ವಿಚಾರಿಸುತ್ತಿದ್ದರು. ಪಂಡಿತರೆಲ್ಲರೂ, ಅಧಿಕಾರಿಗಳೂ ನೌಕರರೂ, ಅತ್ತಿತ್ತ ಓಡಾಡುತ್ತಿದ್ದರೇ ಹೊರತು, ಯಾರಿಂದಲೂ ಸರಿಯಾದ ಸುದ್ದಿಯು ದೊರೆಯುವಂತಿರಲಿಲ್ಲ. ಅವರೆಲ್ಲರ ಮುಖದಮೇಲೂ ನಿರಾಶೆಯು ಸ್ಪಷ್ಟವಾಗಿ ಕಾಣುತ್ತಿದ್ದಿತು. ಯಾರೂ ಮಾತನಾಡರು. ಕಡೆಗೆ ಪ್ರಾತಃಕಾಲ ಏಳುಗಂಟೆಯ ಹೊತ್ತಿಗೆ, ಲಿಂಕನ್ನನು ಕಾಲವಾದನೆಂಬ ಸಂಗತಿಯು ಪ್ರಕಟವಾಯಿತು. ಅದನ್ನು ಕೇಳಿದಕೂಡಲೆ ಮೊದಮೊದಲು ದ್ವೇಷಿಸುತ್ತಿದ್ದವರೂಕೂಡ ಸ್ವಲ್ಪ ದುಃಖಿಸಲಾರಂಭಿಸಿದ್ದರೆಂದರೆ ಅವನನ್ನು ಪ್ರೀತಿಸುತ್ತಿದ್ದವರ ಶೋಕವನ್ನು ವರ್ಣಿಸಲು ಹೇಗೆ ಸಾಧ್ಯವು? ತಮ್ಮ ತಮ್ಮ ಪ್ರಿಯ ಬಾಂಧವರು ಕಾಲವಾಗಿದ್ದರೆ ಹೇಗೋ ಹಾಗೆ, ಪ್ರತಿಯೊಬ್ಬರೂ ಕಣ್ಣುಗಳಿಂದ ನೀರನ್ನು ಸುರಿಸುತ್ತಿದ್ದರು.

## ಹದಿನೆಂಟನೆಯ ಪ್ರಕರಣ.

### ಪರಿಸಮಾಪ್ತಿ.

೧. ಯಾವುದೊಂದು ವಸ್ತುವಿನ ಬೆಲೆಯೂ, ಅದು ಕಳೆದುಹೋದಮೇಲೆ ಚೆನ್ನಾಗಿ ಗೊತ್ತಾಗುವಂತೆ ಅದು ನಮ್ಮ ಕಣ್ಣೆದುರಿಗೆ ಇರುವಾಗ ನಮಗೆ ಗೊತ್ತಾಗದು. ಹಾಗೆಯೇ ಅನೇಕರ ಯೋಗ್ಯತೆಯೂ, ಅವರ ಜೀವಿತಕಾಲದಲ್ಲಿ ಬಹಿರಂಗಕ್ಕೆ ಬಾರದು. ಅವರಲ್ಲಿರಬಹುದಾದ ಅಮೋಘವಾದ ಸದ್ಗುಣಗಳು, ಅಗಾಧವಾದ ಕಡಲಿನಲ್ಲಿ ಅಡಗಿರುವ ಅನರ್ಘ್ಯವಾದ ರತ್ನಗಳಂತಿದ್ದು ಈರ್ಷ್ಯಾಸೂಯಾಪರರಾದವರ ಅಬ್ಬಟಣೆಗಳಿಂದ ಆ ಮಹಾತ್ಮರಲ್ಲಿರಬಹುದಾದ ಅಲ್ಪದುರ್ಗುಣಗಳುಮಾತ್ರ ಅತಿಯಾಗಿ ಬಹಿರಂಗವಾಗುವುವು. ಆಜೀವಪರ್ಯಂತವೂ ಅನೇಕಕಷ್ಟಗಳಿಗೆ ಸಿಕ್ಕಿ ಸ್ವಸಾಮರ್ಥ್ಯದಿಂದಲೇ ಉನ್ನತಪದವಿಯ ದುರ್ಗಮಮಾರ್ಗವನ್ನು ಏಕಾಗ್ರತೆಯಿಂದಲೂ, ಅಧ್ಯವಸಾಯದಿಂದಲೂ ನಡೆದು ಆ ಪದವಿಯು ದೊರೆತಮೇಲೆ ಜನರ ಸೌಕರ್ಯಕ್ಕಾಗಿಯೇ ತಮ್ಮ ಜೀವಿತಕಾಲದಲ್ಲೆಲ್ಲಾ ಅವಿ

ಶ್ರಾಂತಶ್ರಮಪಡುತ್ತಿರುವ ಮಹಾಪುರುಷರ ಸದಭಿನಿವೇಶಗಳು ಅವರು ಜೀವಿಸಿರುವ ವರಿಯಂತವ್ರೂ, ಗಾಳಿ ಹೋಗದಿರುವ ಡಬ್ಬಿಯಲ್ಲಿ ಮುಚ್ಚಿಟ್ಟಿರುವ ಕಸ್ತೂರಿಯಂತೆ ಗೋಪ್ಯವಾಗಿರುವುವು. ಪ್ರಮಾದದಿಂದಲೇ ಆಗಲಿ, ಪ್ರಯತ್ನಪೂರ್ವಕವಾಗಿಯೇ ಆಗಲಿ, ಆ ಡಬ್ಬಿಯ ಬಾಯನ್ನು ತೆರೆದಕೂಡಲೆ ಕಸ್ತೂರಿಯ ಸುವಾಸನೆಯು ಸುತ್ತಲೂ ಹರಡಿಕೊಂಡು ಎಲ್ಲರಿಗೂ ಗೋಚರವಾಗುವಂತೆ, ಮಹಾಪುರುಷರ ಸದ್ಗುಣಗಳೂ, ಸತ್ಕಾರ್ಯಗಳೂ, ಅವರ ಕಾಲಾನಂತರ ಪ್ರಕಟವಾಗುವುವು.

೨. ಏಬ್ರಹಾಮನು ಬದುಕಿದ್ದವರೆಗೂ ಹೊಗೆಯಾಡುತ್ತಿದ್ದ ವಿದ್ವೇಷಿಗಳ ಕ್ರೋಧಾಗ್ನಿಯು ಪ್ರಜ್ವಲಿಸಿ ಅವನನ್ನು ನುಂಗಿಬಿಟ್ಟ ಬಳಿಕ ತಣ್ಣಗಾಯಿತು. "ಅಟ್ಟಮೇಲೆ ಒಲೆ ಉರಿಯಿತು; ಕೆಟ್ಟಮೇಲೆ ಬುದ್ಧಿ ಬಂದಿತು'' ಎಂಬ ಗಾದೆಗೆ ಸರಿಯಾಗಿ ಅವರು ಕಾಲಮೀರಿದ್ದಾಗ ತಾವು ಮಾಡಿದ್ದ ಅಕಾರ್ಯಕ್ಕೆ ಪಶ್ಚಾತ್ತಾಪಪಟ್ಟುಕೊಂಡರು. ಲಿಂಕನ್ನನು ದೇಶಾಧ್ಯಕ್ಷನಾಗಿಯೂ, ಅದಕ್ಕೆ ಮೊದಲೂ, ಮಾಡಿದ್ದ ಸತ್ಕಾರ್ಯಗಳೆಲ್ಲವ್ರೂ ಮೂರ್ತಿಮತ್ತಾಗಿ ಅವರ ಕಣ್ಣಮುಂದೆ ನಿಂತಿದ್ದಂತೆ ಕಂಡುಬಂದು ಅವರಿಗೆ ಮತ್ತಷ್ಟು ವ್ಯಸನವನ್ನುಂಟುಮಾಡಿದುವು. "ಅಹಾ! ಆತನಂತೆ ತನ್ನ ದೇಶಕ್ಷೇಮವೇ ತನ್ನ ಕ್ಷೇಮವೆಂದೂ, ತನ್ನ ದೇಶದ ಕೇಡೇ ತನ್ನ ಕೇಡೆಂದೂ ತಿಳಿದು ಕೆಲಸಮಾಡುವವರು ಎಲ್ಲಿ ದೊರೆಯುವರು? ಅಯ್ಯೋ! ಹೀಗೆ ವಿವೇಕಹೀನರಾಗಿ ಅಕಾರ್ಯವನ್ನು ಮಾಡಿಬಿಟ್ಟೆವಲ್ಲಾ! ಇನ್ನು ನಮ್ಮನ್ನು ವಿಚಾರಿಸುವವರಾರು? ಎಂದು ಮರುಗಿದರು. ಆದರೆ, ಅದರಿಂದ ಏನು ಪ್ರಯೋಜನ?

೩. ಲಿಂಕನ್ನಿನ ಶವವನ್ನು ಸ್ಪ್ರಿಂಗ್ ಫೀಲ್ಡಿನಲ್ಲಿಯೇ ಸಂಸ್ಕರಿಸಬೇಕೆಂದು ನಿಷ್ಕರ್ಷೆಯಾಯಿತು. ಯಾವ ಊರಿನಲ್ಲಿ ಅವನು ತನ್ನ ಬಾಲ್ಯವನ್ನು ಕಳೆದು ಕ್ರಮಕ್ರಮವಾಗಿ ಜನರ ದೃಷ್ಟಿಗೆ ಗೋಚರವಾಗಿದ್ದನೋ, ಯಾವ ಊರಿನಲ್ಲಿ ಸಣ್ಣ ಪುಟ್ಟ ಉಪನ್ಯಾಸಗಳನ್ನು ಮಾಡಿ ತನ್ನ ವಾಗ್ಮಿತೆಯನ್ನೂ ಹೆಚ್ಚಿಸಿಕೊಂಡಿದ್ದನೋ ಎಲ್ಲಿ ಮದುವೆಯಾಗಿ ಮಕ್ಕಳನ್ನು ಪಡೆದು ಕೆಲವುಕಾಲ ಸುಖವಾಗಿ ವಾಸಿಸುತ್ತಿದ್ದನೋ, ಯಾವ ಊರನ್ನು ಜ್ಞಾಪಿಸಿಕೊಂಡ ಮಾತ್ರದಿಂದಲೇ ತನ್ನ ಉದ್ಯೋಗದಲ್ಲಿಯು

ಕಷ್ಟನಿಷ್ಠುರಗಳನ್ನು ಒಂದು ಕ್ಷಣಕಾಲವಾದರೂ ಮರೆತು ಶಾಂತಚಿತ್ತನೂ, ಅಧಿಕಸಂತೋಷಿಯೂ ಆಗುತ್ತಿದ್ದನೋ, ಆ ಊರಿಗಿಂತಲೂ, ಅವನ ಸಮಾಧಿಗೆ ಹೆಚ್ಚು ಯೋಗ್ಯವಾದ ಸ್ಥಳವಿನ್ನಾವುದು? ಅವನನ್ನು ವಾಷಿಂಗ್ಟನ್ ನಗರದಲ್ಲಿಯೇ ಸಂಸ್ಕರಿಸಿ ಅವನ ಜ್ಞಾಪಕಾರ್ಥವಾಗಿ ಅಮೃತಶಿಲೆಯ ಪ್ರತಿಮೆಯೊಂದನ್ನು ಸ್ಥಾಪಿಸಬೇಕೆಂದು ಅನೇಕರು ಪ್ರಯತ್ನಿಸಿದರು. ಆದರೆ ಅವರ ಪ್ರಯತ್ನಗಳು ನೆರವೇರಲಿಲ್ಲ. ಆದುದರಿಂದ ಅವನ ಶವವನ್ನು ಸ್ಪ್ರಿಂಗ್ ಫೀಲ್ಡಿಗೆ ಸಾಗಿಸಲು ಉಚಿತವಾದ ಪ್ರಯತ್ನಗಳು ನಡೆದುವು.

೪. ಲಿಂಕನ್ನಿನ ಶವವನ್ನು ತೆಗೆದುಕೊಂಡುಹೋದ ದಾರಿಯುದ್ದಕ್ಕೂ ಪ್ರತಿಯೊಂದು ಸ್ಟೇಷನ್ನಿನಲ್ಲಿಯೂ ಆ ಮಹಾಪುರುಷನ ಪಾರ್ಥಿವ ಶರೀರದ ಕಡೆಯ ಸಂದರ್ಶನಕ್ಕಾಗಿ ಜನಗಳು ಕಿಕ್ಕಿರಿಯುವಂತೆ ತುಂಬಿದ್ದರು. ಒಬ್ಬರ ಮುಖಗಳಲ್ಲಿಯೂ ಕಾಂತಿ ಇರಲಿಲ್ಲ. ಪ್ರತಿಯೊಬ್ಬರೂ ದುಃಖಸೂಚಕವಾದ ಕರಿಯುವಸ್ತ್ರಗಳನ್ನು ಧರಿಸಿದ್ದರು. ಅವರೆಲ್ಲರ ಕಣ್ಣುಗಳಿಂಲೂ ಅಶ್ರುಗಳು ತೊಟ್ಟಿಕ್ಕುತ್ತಿದ್ದುವು. ನಾಲ್ಕು ವರುಷಗಳ ಮುಂಚೆಯಾರ ಆಗಮನವನ್ನು ಅತಿಕುತೂಹಲದಿಂದ ನಿರೀಕ್ಷಿಸುತ್ತಾ ಇದ್ದು, ಬಗೆಬಗೆಯ ಪುಷ್ಪಗಳಿಂದಲೂ, ಧ್ವಜಗಳಿಂದಲೂ ಅಲಂಕೃತವಾಗಿದ್ದ ಅವನ ಗಾಡಿಯನ್ನು ದೂರದಿಂದಲೇ ಕಂಡು ಜಯಧ್ವನಿಮಾಡಿ ತಮ್ಮ ತಮ್ಮ ನಜರು ಮುಜರೆಗಳನ್ನು ಒಪ್ಪಿಸಿದ್ದರೋ, ಆತನ ಗಾಡಿಯು ಈಗ ದುಃಖಸೂಚಕ ಸಾಮಗ್ರಿಗಳಿಂದ ಹಿಂದಿರುಗಿ ಬರುವುದನ್ನು ನೋಡಿ ಶೋಕಮಯವಾದ ಉದ್ಗಾರವು ಸರ್ವರ ಬಾಯಿಂದಲೂ ಹೊರಟಿತು. ಪೂರ್ವದಲ್ಲಿ ಆನಂದಾಶ್ರುವಿನಿಂದ ಪೂರಿತವಾಗಿದ್ದ ಅವರ ಕಣ್ಣುಗಳು ಈಗ ದುಃಖಾಶ್ರುಗಳಿಂದ ಪೂರ್ಣವಾದುವು. ಆ ವೀರನ ಶವದ ಪೆಟ್ಟಿಗೆಗೆ ಪ್ರತಿಯೊಂದು ಸ್ಥಳದಲ್ಲಿಯೂ ಮರ್ಯಾದೆನಡೆಯುತ್ತಾ ಅದು ಸ್ಪ್ರಿಂಗ್‌ಫೀಲ್ಡಿಗೆ ಬರುವ ಹೊತ್ತಿಗೆ ಒಂದು ಪಕ್ಷವಾಯಿತು. ಅಲ್ಲಿ ಅವನನ್ನು ಬಹು ವೈಭವದಿಂದ ಸಮಾಧಿಮಾಡಿದರು.

೫. ಇತ್ತ ಆ ಘಾತುಕವ್ಯಾಪಾರದಲ್ಲಿ ಮುಂದಾಳುಗಳಾಗಿದ್ದವರ ಗತಿ ಏನಾಯಿತೆಂದು ನೋಡುವ, ಒಂದುವಾರದೊಳಗಾಗಿ ಘಾತುಕ

ರೆಲ್ಲರೂ, ಸಿಕ್ಕಿಬಿದ್ದು ಕಾರಾಗೃಹವಾಸಿಗಳಾಗಿ ಪರಿತಪಿಸುತ್ತಿದ್ದರು. ಈ ಪ್ರಾಣಿಗಳ ಪರವಾಗಿ ಮಾತನಾಡತಕ್ಕವರು ಒಬ್ಬರೂ ಇರಲಿಲ್ಲ. ತಮ್ಮ ಕೃತ್ಯದಿಂದ ದಾಕ್ಷಿಣಾತ್ಯರಿಗೆ ಸಂತೋಷವುಂಟಾಗಿದ್ದೀತೆಂದೂ, ಅವರಾದರೂ ತಮಗಾಗಿ ಸರ್ಕಾರದಲ್ಲಿ ವಾದಿಸುವರೆಂದೂ, ಈ ಕೊಲೆಪಾತಕರು ಭ್ರಮಿಸಿದ್ದರು. ಆದರೆ ಇವರ ಆಸೆಯೆಲ್ಲಾ ನಿರಾಸೆಯಾಯಿತು. ದಾಕ್ಷಿಣಾತ್ಯರೂ ಉದಾಸೀನಭಾವದಿಂದಿದ್ದುಬಿಟ್ಟರು. ಜೂಲೈ ಏಳನೆಯ ತಾರೀಖಿನ ದಿನ ಅವರೆಲ್ಲರನ್ನೂ ಗಲ್ಲಿಗೆ ಹಾಕಿಬಿಟ್ಟರು.

೬. ಲಿಂಕನ್ನನು ವಿದ್ವೇಷಿಗಳ ಕ್ರೋಧದಿಂದ ನಶ್ವರವಾದ ತನ್ನ ಪಾರ್ಥಿವ ಶರೀರವನ್ನು ಬಿಟ್ಟು ಹೋದರೂ, ಆತನ ಆತ್ಮವು ಮಾತ್ರ ವರ್ಧಿಷ್ಣುವಾದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ, ಪ್ರತಿಯೊಂದು ಜನಾಂಗದಲ್ಲಿಯೂ ಸದಾ ವ್ಯಾಪಿಸಿಕೊಂಡು ಉದಾತ್ತಕಾರ್ಯಗಳನ್ನು ಮಾಡುವಂತೆ ಹುರಿದುಂಬಿಸುತ್ತಿರುವುದು.

ಸಂಪೂರ್ಣವು.

# ಶೋಧನಪತ್ರಿಕೆ.

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೧ | ೪ | ದೇಶಸಿತಿ | ದೇಶಸ್ಥಿತಿ |
| ,, | ,, | ಲಿಂಕ ನಿನ | ಲಿಂಕನ್ನಿನ |
| ೨ | ೨೧ | ಒಳೊಳ್ಳೆ ಯು | ಒಳ್ಳೊಳ್ಳೆಯ |
| ,, | ೨೫ | ಬಿ ಟ್ಟು | ಬಿಟ್ಟು |
| ೫ | ೧ | ನನೆಯಲೆಲ್ಲಾ | ಮನೆಯಲ್ಲೆಲ್ಲಾ |
| ,, | ೧೫ | ಅವನಿಗೆ | ಥಾಮಸನಿಗೆ |
| ,, | ,, | ಹೇಳುವುದೂ | ಹೇಳುವುದು. |
| ೬ | ೧೫ | ಒಬೊಬ್ಬ | ಒಬ್ಬೊಬ್ಬ |
| ೮ | ೨೦ | ಏಬತ್ರಹಾಮನಿಗೆ | ಏಬ್ರಹಾಮನಿಗೆ |
| ೧೪ | ೧೧ | ಪ್ರಿತಿಸುತ್ತ | ಪ್ರೀತಿಸುತ್ತ |
| ೧೯ | ೩ | ಕರುಣಾದ್ರ | ಕರುಣಾರ್ದ್ರ |
| ೩೪ | ೧೨ | ಆವನು | ಅವನು |
| ೩೫ | ೧೯ | ಆವನಿಗೆ | ಅವನಿಗೆ |
| ೩೬ | ೧೪ | ಯೋಚಿಸತ್ತಿದ್ದ | ಯೋಚಿಸುತ್ತಿದ್ದ |
| ೪೧ | ೨೫ | ಆತಿ | ಅತಿ |
| ೪೫ | ೧೦ | ಸ್ವಾತಂತ್ರ್ವ | ಸ್ವಾತಂತ್ರ್ಯ |
| ೫೬ | ೮ | ಕಳುಹಿಸಿ ಸ್ವಾತಂತ್ರ | ಕಳುಹಿಸಿದರೆ ಸ್ವಾತಂತ್ರ್ಯ |
| ೬೮ | ೧೪ | ಅಕೃತಿಗೂ | ಆಕೃತಿಗೂ |
| ೬೮ | ೨೬ | ಅಸ್ತ್ರ, ಶಸ್ತ್ರಗಳನ್ನು | ಶಸ್ತ್ರಗಳನ್ನು |